ಪ್ರವಾಸೋದ್ಯಮ ಇಲಾಖೆ,
ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರವಾಸೋದ್ಯಮ ನೀತಿ

2020-25











ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.

www.karnatakatourism.org

ಪ್ರವಾಸೋದ್ಯಮ ಇಲಾಖೆ,
ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರವಾಸೋದ್ಯಮ ನೀತಿ 2020-25

ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.

www.karnatakatourism.org



ವಿಧಾನ ಸೌಧ, ಬೆಂಗಳೂರು







## ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಸಂದೇಶ

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-2025ನ್ನು ಘೋಷಿಸಲು ನನಗೆ ಸಂತೋಷವಾಗುತ್ತಿದೆ.

2020-25ರ ಅವಧಿಯ ಕರ್ನಾಟಕ ಪ್ರವಾಸೋದ್ಯಮ ನೀತಿಯು ಪ್ರವಾಸೋದ್ಯಮ ಉದ್ದಿಮೆಯ ಬಹುಸಂಖ್ಯಾತ ಹಿತಾಸಕ್ತಿದಾರರನ್ನು, ಕಾರ್ಯಾಗಾರಗಳು, ಸಂವಾದಗಳು, ಮನವಿಗಳು ಮತ್ತು ಇತರ ವೇದಿಕೆಗಳ ಮೂಲಕ ಒಳಗೊಂಡು, ನಿಖರವಾಗಿ ರೂಪಿಸಿರುವ ಸಮಾಲೋಚನಾ ಯೋಜನೆಯ ಫಲಶೃತಿಯಾಗಿದೆ. ಈ ನೀತಿಯು ಪ್ರವಾಸೋದ್ಯಮವನ್ನು ಕೇಂದ್ರ ಬಿಂದುವನ್ನಾಗಿರಿಸಿಕೊಂಡು ಮಾಡುವುದರೊಂದಿಗೆ ಸುಸ್ಥಿರ ಮತ್ತು ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಅಂಶವನ್ನು ಈ ನೀತಿಯು ಒಳಗೊಂಡಿರುತ್ತದೆ.

ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ವೈರಾಣು ಜಗತ್ತಿನ ಹಲವಾರು ರಾಷ್ಟ್ರಗಳನ್ನು ಸ್ತಬ್ಧಗೊಳಿಸಿದೆ, ಆದರೆ ಕರ್ನಾಟಕದ ಜನತೆ ಸವಾಲುಗಳನ್ನು ಎದುರಿಸಿ ಅದರಿಂದ ಹೊರಬರುವಲ್ಲಿ ಅತ್ಯುತ್ತಮ ಸ್ಥೈರ್ಯ ಹಾಗೂ ದೃಢತೆಯನ್ನು ಪ್ರದರ್ಶಿಸಿದ್ದಾರೆ. ಕೋವಿಡ್-19ರ ಸನ್ನಿವೇಶದಿಂದ ಉದ್ಭವಿಸಿರುವ ಅನಿಶ್ಚಿತ ಸ್ಥಿತಿಯು ಹೊಸ ಸ್ವರೂಪದ್ದಾಗಿದೆ. ಪ್ರಸ್ತುತ ಉದ್ಭವಿಸಿರುವ ಸಂಕಷ್ಟಗಳಿಂದ ಹೊರಬರಲು, ಸಾಮಾನ್ಯ ಸ್ಥಿತಿಯನ್ನು ಅಳವಡಿಸಿಕೊಳ್ಳಲು ಹಾಗೂ ಜಾಗತಿಕ ಪ್ರವಾಸೋದ್ಯಮ ಭೂ-ನಕ್ಷೆಯಲ್ಲಿ ಆರೋಗ್ಯವಂತ ಮತ್ತು ಸ್ಪರ್ಧಾತ್ಮಕವಾಗುಳಿಯಲು ಈ ನೀತಿಯು, ಕರ್ನಾಟಕದ ಪ್ರವಾಸೋದ್ಯಮಕ್ಕೆ ಒಂದು ಚೌಕಟ್ಟನ್ನು ಒದಗಿಸುತ್ತದೆ.

ನಮ್ಮ ಸರ್ಕಾರಕ್ಕೆ ಪ್ರವಾಸೋದ್ಯಮ ವಲಯವು ಉದ್ಯೋಗವನ್ನು ಸೃಜಿಸುವ ಒಂದು ಪ್ರಮುಖ ಚಾಲನಾ ಶಕ್ತಿಯಾಗಿದೆ. ಆರ್ಥಿಕ ವಹಿವಾಟು ಹಾಗೂ ಪ್ರವಾಸೋದ್ಯಮ ವಲಯದ ಬೆಳವಣಿಗೆಯು ಪ್ರವಾಸಿ ತಾಣಗಳಿಗೆ ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಿ, ನಮ್ಮ ನಗರಗಳು ಹಾಗೂ ಸ್ಥಳೀಯ ಪ್ರದೇಶಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಆದುದರಿಂದ, ನಾವು ಪ್ರವಾಸೋದ್ಯಮ ವಲಯಕ್ಕೆ ಸಂಬಂಧಿಸಿದಂತೆ ಅನುಕೂಲಕರ ಮತ್ತು ಸುರಕ್ಷಿತ ಪರಿಸರ ವ್ಯವಸ್ಥೆಯನ್ನು ಸೃಜಿಸಲು ಸಾರ್ವಜನಿಕ ಹಾಗೂ ಖಾಸಗಿ ಎರಡೂ ಕ್ಷೇತ್ರದ ಹಿತಾಸಕ್ತಿಗಾರರನ್ನು ಒಳಗೊಳ್ಳುವ ಮೂಲಕ ಹಲವಾರು ಉಪಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.



ಕರ್ನಾಟಕದಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗಾಗಿ ಪೂರಕವಾದ ವಾತಾವರಣವನ್ನು ಕಲ್ಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25ರ ಮೂಲಕ ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸಲು ಪ್ರೋತ್ಸಾಹಕಗಳನ್ನು ಹಾಗೂ ಸಹಾಯಧನವನ್ನು ಒದಗಿಸುವ ಮೂಲಕ ಹೂಡಿಕೆದಾರರಿಗೆ ಪ್ರೋತ್ಸಾಹಿಸಲು ಬಯಸುತ್ತೇವೆ. ಪ್ರವಾಸೋದ್ಯಮ ವಲಯವನ್ನು ಉತ್ತಮಪಡಿಸಲು ಈ ಪ್ರವಾಸೋದ್ಯಮ ನೀತಿಯು ಅತ್ಯಂತ ಸಹಾಯಕಾರಿಯಾಗುತ್ತದೆಯೆಂಬ ಆಶಾಭಾವನೆ ನನ್ನದಾಗಿದೆ.

ಕರ್ನಾಟಕವನ್ನು ಚಲನಶೀಲ, ಸುಸ್ಥಿರ ಮತ್ತು ಅತ್ಯಂತ ನೆಚ್ಚಿನ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿಪಡಿಸುವ ನಮ್ಮ ಧ್ಯೇಯದಲ್ಲಿ ನಮ್ಮೊಂದಿಗೆ ಕೈಜೋಡಿಸಬೇಕೆಂದು ನಾನು ಎಲ್ಲಾ ಹಿತಾಸಕ್ತಿದಾರರನ್ನು ಕೋರುತ್ತೇನೆ.

ಬಿ.ಎಸ್.ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



## ಮಾನ್ಯ ಪ್ರವಾಸೋದ್ಯಮ ಸಚಿವರಿಂದ ಮುನ್ನುಡಿ

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಲೋಕಾರ್ಪಣೆಗೊಳಿಸಲು ನಾನು ಹರ್ಷಿಸುತ್ತೇನೆ. ಈ ನೀತಿಯು ಮುಂದಿನ ಐದು ವರ್ಷಗಳ ಕಾಲ ಕರ್ನಾಟಕದ ಪ್ರವಾಸೋದ್ಯಮದ ದಿಕ್ಸೂಚಿಯನ್ನು ಸೂಚಿಸುತ್ತದೆ. ಪ್ರವಾಸೋದ್ಯಮ ಕ್ಷೇತ್ರದ ಎಲ್ಲಾ ನುರಿತ ತಜ್ಞರು, ಪಾಲುದಾರರು, ಈ ಹಿಂದೆ ಪ್ರವಾಸೋದ್ಯಮ ಖಾತೆಯನ್ನು ನಿರ್ವಹಿಸಿದ ಸಚಿವರು, ಆಡಳಿತಾಧಿಕಾರಿಗಳನ್ನೊಳಗೊಂಡಂತೆ ಎಲ್ಲ ಪ್ರಮುಖರೊಂದಿಗೆ ಹಲವಾರು ಸುತ್ತಿನಲ್ಲಿ ಸಮಾಲೋಚನೆ ನಡೆಸಿ ಈ ನೀತಿಯನ್ನು ರೂಪಿಸಲಾಗಿದೆ.

ಪ್ರವಾಸೋದ್ಯಮವು ಉದ್ಯೋಗಾವಕಾಶಗಳನ್ನು ಸೃಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಇದು ಅನೇಕ ಜನರ ಜೀವನಾಡಿಯಾಗಿದೆ. ಆದುದರಿಂದ, ಕರ್ನಾಟಕ ಸರ್ಕಾರವು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.

'ನಮ್ಮ ನಾಡು ನೋಡಲು ಅಂದ, ನಮ್ಮ ನುಡಿ ಕೇಳಲು ಚಂದ, ನಮ್ಮ ಕಲೆಯಂತೂ ಹೃದಯಾನುಬಂಧ'. ನಮ್ಮ ಸಂಸ್ಕತಿ ಪರಂಪರೆಯ ಮಿಲನದೊಂದಿಗೆ ಹೊಸ ಪ್ರವಾಸೋದ್ಯಮ ನೀತಿ ಬಿಡುಗಡೆಯಾಗುತ್ತಿದೆ. ಪ್ರವಾಸೋದ್ಯಮ ಖಾತೆಯ ಜವಾಬ್ದಾರಿ ಹೊತ್ತ ದಿನದಿಂದ ನಾನು ಇಡೀ ಕರ್ನಾಟಕ ರಾಜ್ಯವನ್ನು ಸುತ್ತಿ ತಿಳಿದ ಸಂಗತಿಯೆಂದರೆ ನಮ್ಮ ನಾಡಿನ ಕಲ್ಲು ಕಲ್ಲಿನಲ್ಲಿ ಇತಿಹಾಸದ ರೋಚಕ ಕಥೆಗಳು ಅಡಗಿವೆ. ಈ ಕಥೆಗಳು ಜನರಿಗೆ ಹೊಸ ಅನುಭವ ನೀಡಿ ಅವರ ಜೀವನದ ರಂಗು ಹೆಚ್ಚಿಸಬೇಕು. ವಿಶ್ವದ ಯಾವುದೇ ಸ್ಥಳಗಳಿಗೆ ಹೋಲಿಸಿದಾಗ ನಮ್ಮಲ್ಲಿ ಎಲ್ಲವೂ ಇದೆ. ಅದರೆ, ಎಲ್ಲವೂ ಜನಮನದಲ್ಲಿ ನೆಲೆಸಿಲ್ಲ. ಹೊಸಹೊಸ ಪರಿಕಲ್ಪನೆಯನ್ನು ಹುಟ್ಟುಹಾಕುವುದು ಮತ್ತು ಹೆಚ್ಚು ಆಕರ್ಷಣೀಯ ಸ್ಥಳಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ನಮ್ಮ ಹೊಸ ನೀತಿಯ ಉದ್ದೇಶವಾಗಿದೆ.

ರಾಜ್ಯವು ಕೋವಿಡ್-19ರ ಸವಾಲುಗಳಿಂದ ಚೇತರಿಸಿಕೊಳ್ಳುತ್ತಿದ್ದಂತೆ 'ನಿಮ್ಮ ಸುರಕ್ಷೆ ನಮ್ಮ ಜವಾಬ್ದಾರಿ' ಎಂಬ ಘೋಷ ವಾಕ್ಯದೊಂದಿಗೆ ರಾಜ್ಯದಲ್ಲಿನ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ನಿರ್ಧರಿಸಲಾಗಿದೆ. ಈ ನೀತಿಯ ಮೂಲಕ ಸುರಕ್ಷತೆ ಮತ್ತು ನೈರ್ಮಲ್ಯ ಕ್ರಮಗಳಿಗೆ ಹೆಚ್ಚು ಒತ್ತು ನೀಡುವುದರೊಂದಿಗೆ ಗುಣಾತ್ಮಕ ಮತ್ತು ಸುಸ್ಥಿರ ಪ್ರವಾಸೋದ್ಯಮಕ್ಕಾಗಿ ಕಾರ್ಯತಂತ್ರವನ್ನು ಬದಲಾವಣೆ ಮಾಡಲಾಗುತ್ತಿದೆ. ಪ್ರವಾಸೋದ್ಯಮ ಸೇವಾದಾತರೊಂದಿಗಿನ ಸಹಭಾಗಿತ್ವ, ಪ್ರವಾಸಿತಾಣಗಳ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಸೌಲಭ್ಯಗಳಿಗೆ ಒತ್ತು ನೀಡುವುದು, ಕೌಶಲ್ಯಾಭಿವೃದ್ಧಿ ಉಪಕ್ರಮಗಳು ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಕರ್ನಾಟಕ ಪ್ರವಾಸೋದ್ಯಮದ ಪ್ರಚಾರ ಕೈಗೊಳ್ಳುವುದು ಈ ನೀತಿ ಅಡಿಯಲ್ಲಿನ ಪ್ರಮುಖ ಅಂಶಗಳು.

ನಾಡ ಹಬ್ಬ ದಸರಾ ಮತ್ತು ಹಂಪಿ ಉತ್ಸವಗಳನ್ನು ಅಚ್ಚುಕಟ್ಟಾಗಿ ಆಚರಿಸಲು ಕಾರ್ಯಯೋಜನೆಗಳನ್ನು ರೂಪಿಸಲಾಗಿದೆ. ರಾಜ್ಯ ಪ್ರವಾಸೋದ್ಯಮ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ಸಹಯೋಗದಲ್ಲಿ 'ಅಗ್ರಿಟೂರಿಸಂ' ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ. ಈ ಯೋಜನೆ ಜನರಿಗೆ ಕೃಷಿಯ ಕಡೆಗೆ ಒಲವು ಹಾಗೂ ಅರಿವು ಮೂಡಿಸುವುದರ ಜೊತೆಗೆ ನಗರ ವಾಸಿಗರಿಗೆ ಕೃಷಿಯ ಬಗ್ಗೆ ತಿಳಿಯಲು ಸಹಕಾರಿಯಾಗಲಿದೆ. ಗ್ರಾಮೀಣ ಪ್ರವಾಸೋದ್ಯಮದ ಮೂಲಕ ಗ್ರಾಮೀಣ ಸೊಗಡು ಮತ್ತು ಸರಳತೆಯ ಸೊಂಪು ದೇಶದಲ್ಲೆಲ್ಲ ಹರಡಬೇಕು. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಹೆಚ್ಚುವುದೆಂಬ ಆಶಯ ನನ್ನದು. ಗೋಕುಲ ಗ್ರಾಮ, ಲಂಬಾಣಿ ಗ್ರಾಮ, ಬುಡಕಟ್ಟು ಗ್ರಾಮಗಳು ಜಾನಪದ ಪ್ರವಾಸೋದ್ಯಮಕ್ಕೆ ನಾಂದಿ ಹಾಡುತ್ತವೆ. ಜನರನ್ನು ಸ್ಥಳೀಯ ಪ್ರದೇಶಗಳಿಗೆ ಭೇಟಿ ನೀಡುವಂತೆ ಪ್ರೋತ್ಸಾಹಿಸಲು 'ನೋಡು ಬಾ ನಮ್ಮೂರ' ಯೋಜನೆ ಹಮ್ಮಿಕೊಳ್ಳಲಾಗಿದೆ.

ಈ ನೀತಿಯಿಂದಾಗುವ ಪ್ರವಾಸೋದ್ಯಮದ ಮುಂದಿನ ಬೆಳವಣಿಗೆ ಕರ್ನಾಟಕವನ್ನು ಜಾಗತಿಕವಾಗಿ ಮುಂಚೂಣಿಯ ಪ್ರವಾಸೋದ್ಯಮ ತಾಣವನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬ ಭರವಸೆ ನನಗಿದೆ.

ಈ ನೀತಿಯನ್ನು ಸಿದ್ಧಪಡಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡು ಬೆಂಬಲ, ಸಹಕಾರ ಮತ್ತು ಬದ್ಧತೆ ತೋರಿದ ಪ್ರವಾಸೋದ್ಯಮ ಇಲಾಖೆ, ಸರ್ಕಾರಿ ಸಂಸ್ಥೆಗಳು, ಪ್ರವಾಸೋದ್ಯಮ ಪಾಲುದಾರರು ಮತ್ತು ತಜ್ಞರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಿ.ಟಿ. ರವಿ

ಮಾನ್ಯ ಸಚಿವರು, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಮತ್ತು
ಕ್ರೀಡೆ ಮತ್ತು ಯುವ ಸಬಲೀಕರಣ
ಕರ್ನಾಟಕ ಸರ್ಕಾರ.



## ಅಧ್ಯಕ್ಷರು, ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ ಇವರಿಂದ ಸಂದೇಶ

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25, ಪ್ರವಾಸಿಗರು ಹಾಗೂ ಹೂಡಿಕೆದಾರರಿಗೆ ಕರ್ನಾಟಕವನ್ನು ಜಾಗತಿಕ ಪ್ರವಾಸೋದ್ಯಮ ಬ್ರ್ಯಾಂಡಾಗಿಸುವ ಗುರಿ ಹೊಂದಿದೆ. ಈ ನೀತಿಯು ಖಾಸಗಿ ವಲಯ, ಸರ್ಕಾರ ಮತ್ತು ಸಮುದಾಯಗಳ ನಡುವೆ ಸಹಭಾಗಿತ್ವದ ಮುಖಾಂತರ ಸಮರ್ಪಕ ಮೂಲಭೂತ ಸೌಕರ್ಯದ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ. ಸ್ಥಳೀಯ ವಾಣಿಜ್ಯ ಉದ್ಯಮವನ್ನು ಬೆಂಬಲಿಸುವುದರ ಜೊತೆಜೊತೆಗೆ ಸಮಾಜದ ಎಲ್ಲಾ ವರ್ಗದ ಜನರಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸಲು ನೆರವಾಗುವ ದೃಷ್ಟಿಯಿಂದ ಹಲವು ಕಾರ್ಯತಂತ್ರ ಮಧ್ಯಸ್ಥಿಕೆಗಳನ್ನು ಗುರುತಿಸಲಾಗಿದೆ.

ಈ ನೀತಿಯು ಗುಣಮಟ್ಟದ ಹಾಗೂ ಕನಿಷ್ಠ ಪ್ರಮಾಣಿತ ಅಭಿವೃದ್ಧಿಯನ್ನು ಖಾತರಿಪಡಿಸುತ್ತಲೇ ಪ್ರವಾಸೋದ್ಯಮದ ಉತ್ಪನ್ನಗಳು ಮತ್ತು ಸೇವೆಗಳ ಅಭಿವೃದ್ಧಿಗಾಗಿ ವಿವರಣಾತ್ಮಕವಾದ ಮಾರ್ಗಸೂಚಿಯನ್ನು ಒದಗಿಸುತ್ತದೆ. ಈ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಹಿಳೆಯರು, ಸಮಾಜದ ಹಿಂದುಳಿದ ವರ್ಗಗಳು ಮತ್ತು ಸ್ಥಳೀಯ ಮಟ್ಟದ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಪ್ರವಾಸೋದ್ಯಮ ವಲಯದ ವಿಸ್ತೃತ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಈ ನೀತಿಯ ಮೂಲಕ ಒತ್ತು ನೀಡಲಾಗುತ್ತಿದೆ.

ಈ ನೀತಿಯು ಪಾರದರ್ಶಕ ಮತ್ತು ತ್ವರಿತ ಅನುಮತಿಯನ್ನು ಖಾತರಿಪಡಿಸುವ ಅನುಮೋದನೆಗಾಗಿ ಪರಿಣಾಮಕಾರಿ ಆನ್‌ಲೈನ್ ಕಾರ್ಯವಿಧಾನವನ್ನು ಸ್ಥಾಪಿಸಲು ಉದ್ದೇಶಿಸಿದೆಯಲ್ಲದೆ, ಕ್ರಮಬದ್ಧ ಪದ್ಧತಿಗಳಿಗೆ ಒತ್ತು ನೀಡಲಿದೆ.

ಕೋವಿಡ್-19 ವೈರಾಣು ಹಿಂದೆಂದೂ ಕಂಡರಿಯದ ಪರಿಸ್ಥಿತಿಯನ್ನು ಸೃಷ್ಟಿಸಿದ್ದು ಸಮಾಜದ ಎಲ್ಲಾ ವರ್ಗದ ಜನರು ಈ ಸವಾಲುಗಳನ್ನು ಎದುರಿಸಿ ಮೆಟ್ಟಿ ನಿಲ್ಲುವ ಅಗತ್ಯವಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಉದ್ದಿಮೆಗಳು ಹಾಗೂ ಸಮುದಾಯಗಳು ಸರ್ಕಾರದೊಂದಿಗೆ ಕೈಜೋಡಿಸುವುದರ ಜೊತೆಗೆ ತಮ್ಮ ಸಂಪನ್ಮೂಲಗಳು ಹಾಗೂ ಸಾಮರ್ಥ್ಯಗಳೆರಡನ್ನೂ ಒಟ್ಟುಗೂಡಿಸಿ ಕೋವಿಡ್ ಸೃಷ್ಟಿಸಿರುವ ಸವಾಲುಗಳಿಗೆ ಸೋಲುಣಿಸಿ ಹಿಂದೆಂದಿಗಿಂತಲೂ ಬಲಿಷ್ಠವಾಗಿ ಹೊರಹೊಮ್ಮಬೇಕಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಪ್ರಸ್ತುತ ಸಂದರ್ಭದಲ್ಲಿ ಸುಸ್ಥಿರ, ಸುರಕ್ಷಿತ ಮತ್ತು ನೈರ್ಮಲ್ಯ ಪದ್ಧತಿಗಳ ಅಳವಡಿಕೆಗೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಸಾಮುದಾಯಿಕ ಸಹಭಾಗಿತ್ವದೊಂದಿಗೆ ಮುನ್ನಡೆಯುವ ಅಗತ್ಯವನ್ನು ಪ್ರತಿಪಾದಿಸುತ್ತದೆ.

ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆಯು ನೂತನ ಪ್ರವಾಸೋದ್ಯಮ ನೀತಿಯ ಯಶಸ್ವಿ ಅನುಷ್ಠಾನಕ್ಕಾಗಿ ಅಗತ್ಯ ಬೆಂಬಲ ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ. ಜಗತ್ತಿನ ಅಗ್ರ ಪ್ರವಾಸಿತಾಣಗಳಲ್ಲಿ ಕರ್ನಾಟಕವನ್ನು ಒಂದನ್ನಾಗಿಸುವ ಈ ನಮ್ಮ ಪ್ರಯತ್ನದಲ್ಲಿ ಪ್ರವಾಸೋದ್ಯಮದ ಎಲ್ಲಾ ಪಾಲುದಾರರು ನಮ್ಮೊಂದಿಗೆ ಕೈಜೋಡಿಸಬೇಕೆಂದು ನಾನು ಕೋರುತ್ತೇನೆ.

ಸುಧಾ ಮೂರ್ತಿ
ಅಧ್ಯಕ್ಷರು,
ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ

# ವಿಷಯಸೂಚಿ


| | | |
|---|---|---|
| 1. | ಪರಿಚಯ | 1 |
| 2. | ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಮುನ್ನೋಟ, ಗುರಿ ಮತ್ತು ಧ್ಯೇಯೋದ್ದೇಶಗಳು | 3 |
| 3. | ಕಾರ್ಯತಂತ್ರ | 5 |
| 4. | ಪ್ರವಾಸೋದ್ಯಮ ಮಾರುಕಟ್ಟೆ ಮತ್ತು ಉತ್ತೇಜನ | 7 |
| 5. | ಪ್ರವಾಸೋದ್ಯಮ ಮೂಲಸೌಕರ್ಯ | 9 |
| 6. | ಪ್ರವಾಸೋದ್ಯಮ ವೈವಿಧ್ಯಗಳು | 14 |
| 7. | ಕೌಶಲ್ಯಾಭಿವೃದ್ಧಿ | 21 |
| 8. | ಪ್ರವಾಸಿಗರ ಆರಾಮ ಮತ್ತು ಸುರಕ್ಷತೆ | 25 |
| 9. | ಸಮುದಾಯದ ಸಹಭಾಗಿತ್ವ | 27 |
| 10. | ಸುಸ್ಥಿರ ಪ್ರವಾಸೋದ್ಯಮ | 30 |
| 11. | ಪ್ರವಾಸೋದ್ಯಮ ದತ್ತಾಂಶ ವಿಶ್ಲೇಷಣೆ ಮತ್ತು ಡಿಜಿಟಲ್ ಉಪಕ್ರಮಗಳು | 31 |
| 12. | ಹೂಡಿಕೆ ಸೌಲಭ್ಯಗಳು | 33 |
| 13. | ವ್ಯಾಖ್ಯಾನಗಳು | 36 |
| 14. | ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು | 42 |
| 15. | ಸಾಂಸ್ಥಿಕ ಕಾರ್ಯಚೌಕಟ್ಟು | 48 |
| 16. | ಅನುಬಂಧಗಳು | 51 |




ಕಿನ್ಹಳ ಮರಗೆತ್ತನೆ



ಮೈಸೂರು ಅರಮನೆ



# 1 ಪರಿಚಯ



ಕಲ್ಲಿನ ರಥ, ಹಂಪೆ

ಪ್ರವಾಸೋದ್ಯಮವು ಜಗತ್ತಿನಾದ್ಯಂತ ಬೃಹತ್ ಉದ್ಯಮಗಳಲ್ಲಿ ಒಂದಾಗಿ ಹಾಗೂ ಪ್ರಮುಖ ಆರ್ಥಿಕ ಚಾಲಕ ಶಕ್ತಿಯಾಗಿ ಹೊರಹೊಮ್ಮಿದೆ. ವಿಶ್ವ ಪ್ರಯಾಣ ಮತ್ತು ಪ್ರವಾಸೋದ್ಯಮ ಪರಿಷತ್ತು (ಡಬ್ಲ್ಯೂ ಟಿಟಿಸಿ) ತನ್ನ ವಾರ್ಷಿಕ ಸಂಶೋಧನೆಯಲ್ಲಿ 2018ರಲ್ಲಿ ಜಗತ್ತಿನಾದ್ಯಂತ ಪ್ರಯಾಣ ಮತ್ತು ಪ್ರವಾಸೋದ್ಯಮವು ಜಾಗತಿಕ ಜಿಡಿಪಿಯ 10.4% ರಷ್ಟನ್ನು ಮತ್ತು 319 ಮಿಲಿಯನ್ ಉದ್ಯೋಗಗಳನ್ನು ಎಂದರೆ ಒಟ್ಟು ಉದ್ಯೋಗದ 10% ರಷ್ಟನ್ನು ಸೃಜಿಸಿದೆಯೆಂದು ದಾಖಲಿಸಿದೆ. ಚಲನಶೀಲ/ ವೈಬ್ರೆಂಟ್ ಪ್ರವಾಸೋದ್ಯಮ ವಲಯವು ಆರೋಗ್ಯ ಪೂರ್ಣ ಆರ್ಥಿಕ ವ್ಯವಸ್ಥೆಯ ಪ್ರಧಾನ ಸೂಚಿಯಾಗಿದೆ. ವಿಶ್ವ ಸಂಸ್ಥೆಯು ನಿರೂಪಿಸಿದ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಪ್ರವಾಸೋದ್ಯಮವು ತುಂಬಾ ಮಹತ್ವದ ಪಾತ್ರವಹಿಸಿದೆ.

ಪ್ರವಾಸೋದ್ಯಮ ಮತ್ತು ಅದರ ಸಂಬಂಧಿತ ವಲಯಗಳಾದ ಸಂಚಾರ ಮತ್ತು ಆತಿಥ್ಯ ಕ್ಷೇತ್ರಗಳು ಭಾರತದ ಸೇವಾ ವಲಯದ ಬೆಳವಣಿಗೆಯ ಪ್ರಮುಖ ಚಾಲಕ ಶಕ್ತಿಯಾಗಿದೆ. ಡಬ್ಲ್ಯೂ ಟಿಟಿಸಿಯ- ಆರ್ಥಿಕ ಪರಿಣಾಮ 2018- ಭಾರತ ವರದಿಯ ಅನ್ವಯ, ಪ್ರಯಾಣ ಮತ್ತು ಪ್ರವಾಸೋದ್ಯಮವು ಭಾರತದ ಒಟ್ಟು ಜಿಡಿಪಿಯ 9.2% ರಷ್ಟು ಕೊಡುಗೆಯನ್ನು ನೀಡಿದ್ದು, ಆರ್ಥಿಕತೆಗೆ ಈ ವಲಯದ ಸಮಗ್ರ ಕೊಡುಗೆಗೆ ಸಂಬಂಧಿಸಿದಂತೆ 185 ರಾಷ್ಟ್ರಗಳ ಪೈಕಿ ನಮ್ಮ ದೇಶವು 3ನೇ ಸ್ಥಾನದಲ್ಲಿದೆ. ಪ್ರವಾಸೋದ್ಯಮ ಕ್ಷೇತ್ರದ ಮಹತ್ವವನ್ನು ಕರ್ನಾಟಕ ಸರ್ಕಾರವು ಮನಗಂಡಿದ್ದು, ಅದನ್ನು ರಾಜ್ಯದ ಆದ್ಯತೆಯ ವಲಯವೆಂದು ಗುರುತಿಸಿದೆ. ಕರ್ನಾಟಕದಲ್ಲಿ ದೇಶೀಯ ಪ್ರವಾಸಿಗರ ಆಗಮನವು 2006ರಲ್ಲಿ 36.7 ದಶಲಕ್ಷಗಳಷ್ಟಿದ್ದು 2018 ರಲ್ಲಿ 215.03 ದಶಲಕ್ಷಕ್ಕೆ ಅಗಾಧ ಪ್ರಮಾಣದಲ್ಲಿ ಏರಿಕೆಯಾಗುವ ಮೂಲಕ ಹೆಚ್ಚಿನ ಬೆಳವಣಿಗೆ ಸಾಧಿಸಿದೆ. ರಾಜ್ಯವು ಭಾರತದ ಒಟ್ಟಾರೆ ದೇಶೀಯ ಪ್ರವಾಸಿಗರ ಭೇಟಿಗಳಲ್ಲಿ ಶೇ.12 ರಷ್ಟು ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಇದು ಭಾರತೀಯ ರಾಜ್ಯಗಳಲ್ಲಿ ಮೂರನೆಯ ಸ್ಥಾನ ಪಡೆದಿದೆ. 2018 ರಲ್ಲಿ ಕರ್ನಾಟಕಕ್ಕೆ 5.4 ಲಕ್ಷ ವಿದೇಶಿ ಪ್ರವಾಸಿಗರು ಆಗಮಿಸಿದ್ದು, ಇದು ಭಾರತದಲ್ಲಿನ FTAsಗಳಲ್ಲಿ, ರಾಜ್ಯಕ್ಕೆ 11 ನೇ ಸ್ಥಾನ ಗಳಿಸಿಕೊಟ್ಟಿದೆ. 2019 ರಲ್ಲಿ ಕರ್ನಾಟಕ ಪ್ರವಾಸೋದ್ಯಮ ವಲಯವು ರಾಜ್ಯದ ಜಿ.ಎಸ್.ಡಿ.ಪಿ ಯಲ್ಲಿ ಶೇ.14.8 ರಷ್ಟು ಇದ್ದು ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ 30 ಲಕ್ಷಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಸೃಜಿಸಿದೆ.

ಕರ್ನಾಟಕ 'ಒಂದು ರಾಜ್ಯ, ಹಲವು ಜಗತ್ತು' ಎಂಬ ತನ್ನ ಬ್ರಾಂಡ್‌ಗೆ ಅನುಗುಣವಾಗಿ ಹಲವಾರು ಪ್ರವಾಸೋದ್ಯಮ ಅವಕಾಶಗಳನ್ನು ನೀಡುತ್ತಿದೆ. ರಾಜ್ಯದ ಆಹ್ಲಾದಕರವಾದ ಹವಾಮಾನ, ಕಾಸ್ಮೋಪಾಲಿಟನ್ ಬಹು ಸಂಸ್ಕೃತಿ ಮತ್ತು ಅತ್ಯುತ್ತಮವಾಗಿ ಸ್ಪಂದಿಸುವ ಆಡಳಿತ ಮುಂತಾದ ಅಂಶಗಳು ಕರ್ನಾಟಕವನ್ನು ವ್ಯವಹಾರಗಳ ಸ್ಥಾಪನೆ ಮತ್ತು ಏಳಿಗೆಗೆ ಅತ್ಯುತ್ತಮವಾದ ತಾಣವನ್ನಾಗಿಸಿದೆ. ರಾಜ್ಯದ ಪ್ರವಾಸೋದ್ಯಮ ತಾಣಗಳು ಪರಂಪರೆ, ಪರಿಸರ ಪ್ರವಾಸೋದ್ಯಮ, ಆಧ್ಯಾತ್ಮಿಕತೆ, ಸಂಸ್ಕೃತಿ, ಸಾಹಸಕಾರ್ಯ, ಕರಾವಳಿ, ಸ್ವಾಸ್ಥ್ಯ ಗ್ರಾಮೀಣ ಹಾಗೂ ನಗರವನ್ನೂ ಒಳಗೊಂಡಂತೆ ಹಲವಾರು ವಿಷಯ ವ್ಯಾಪ್ತಿಯ ಪ್ರವಾಸೋದ್ಯಮ ವೈವಿಧ್ಯಮಯ ಸಂಪನ್ಮೂಲವನ್ನು ಒಳಗೊಂಡಿದೆ.

ಕರ್ನಾಟಕವು ಸಂಪದ್ಭರಿತವಾದ ಸಾಂಸ್ಕೃತಿಕ ಪರಂಪರೆ ಹಾಗೂ ಅಸಂಖ್ಯ ಸ್ವಾಭಾವಿಕ ಕೊಡುಗೆಗಳನ್ನು ಹೊಂದಿರುವ ರಾಜ್ಯವಾಗಿದ್ದು, ಇಲ್ಲಿ ಮೂರು ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳಾದ ಹಂಪಿ, ಪಟ್ಟದಕಲ್ಲು ಮತ್ತು ಕರ್ನಾಟಕ ಪಶ್ಚಿಮ ಘಟ್ಟಗಳಿರುವುದು ಹೆಮ್ಮೆಯ ಸಂಗತಿ. ಇದಲ್ಲದೆ, ಐಹೊಳೆ-ಬಾದಾಮಿ-ಪಟ್ಟದಕಲ್ಲು, ಕಲಬುರಗಿ-ಬೀದರ್-ವಿಜಯಪುರ (ದಕ್ಷಿಣ ಸುಲ್ತಾನರು) ಶ್ರೀರಂಗಪಟ್ಟಣ ಮತ್ತು ಬೇಲೂರು, ಹಳೇಬೀಡು ಈ ನಾಲ್ಕು ಇತರ ಸ್ಥಳಗಳು ವಿಶ್ವ ಪರಂಪರಾ ತಾಣಗಳು ತಾತ್ಕಾಲಿಕ ಪಟ್ಟಿಯಲ್ಲಿದೆ. ಇವುಗಳ ಜೊತೆಗೆ ರಾಜ್ಯದಲ್ಲಿ 600ಕ್ಕೂ ಅಧಿಕ ಭಾರತೀಯ ಪುರಾತತ್ವ ಇಲಾಖೆಯ ಸಂರಕ್ಷಿತ ಸ್ಮಾರಕಗಳು ಹಾಗೂ 840 ಕ್ಕೂ ಅಧಿಕ ರಾಜ್ಯ ಸಂರಕ್ಷಿತ





ಸ್ಮಾರಕಗಳಿವೆ. ಇವಲ್ಲದೆ ಅಸಂಖ್ಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮಹತ್ವದ ಭಕ್ತಿ ತಾಣಗಳಿವೆ.

ಕರ್ನಾಟಕವು 5 ರಾಷ್ಟ್ರೀಯ ಉದ್ಯಾನವನಗಳು, 30 ಕ್ಕೂ ಅಧಿಕ ವನ್ಯಜೀವಿ ಅಭಯಾರಣ್ಯಗಳು ಹಾಗೂ ಹುಲಿ ಅಭಯಾರಣ್ಯಗಳೊಂದಿಗೆ ವಿಫುಲ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ಹೊಂದಿದೆ. 550 ಕ್ಕೂ ಅಧಿಕ ಪ್ರಭೇಧದ ಪಕ್ಷಿಗಳು ಮತ್ತು 100 ಕ್ಕೂ ಅಧಿಕ ಪ್ರಬೇಧದ ಸಸ್ತನಿಗಳು ಕರ್ನಾಟಕದಲ್ಲಿವೆ. ಸುಮಾರು 17 ಸುಂದರವಾದ ಗಿರಿಧಾಮಗಳು ಹಾಗೂ 40 ಭವ್ಯವಾದ ಜಲಪಾತಗಳಿಂದ ಕರ್ನಾಟಕದ ನೈಸರ್ಗಿಕ ಸೌಂದರ್ಯ ಇಮ್ಮಡಿಸಿದ್ದು, ರಾಜ್ಯವನ್ನು ಭಾರತದಲ್ಲಿಯೇ ಅತ್ಯುತ್ತಮ ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಒಂದನ್ನಾಗಿ ಮಾಡಿದೆ. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ 320. ಕಿ.ಮೀ ಗಳಷ್ಟು ಉದ್ದದ ನೈಸರ್ಗಿಕ ಕರಾವಳಿ ತೀರ ಪ್ರದೇಶವು ರಾಷ್ಟ್ರದ ಕೆಲವೇ ಕೆಲವು ಅತ್ಯುತ್ತಮ ಕಡಲತೀರಗಳಲ್ಲಿ ಒಂದಾಗಿದೆ. ಅಲ್ಲದೆ, ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗೆ ರಾಜ್ಯದಲ್ಲಿ ವಿಫುಲ ಅವಕಾಶಗಳಿವೆ.

ಕರ್ನಾಟಕ ಸರ್ಕಾರದ ಮುನ್ನೋಟವನ್ನು ಸಾಧಿಸುವ ಉದ್ದೇಶದಿಂದ ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಅನ್ನು ರೂಪಿಸಲಾಗಿದೆ. ಹಿಂದಿನ ಕರ್ನಾಟಕ ಪ್ರವಾಸೋದ್ಯಮ ನೀತಿ 2015-20ರ ಯಶಸ್ಸು, ವೈಫಲ್ಯತೆ ಮತ್ತು ಅನುಭವಗಳ ಮಾರ್ಗದರ್ಶನದೊಂದಿಗೆ ಈ ಕಾರ್ಯನೀತಿಯ ಕರಡನ್ನು ರೂಪಿಸಲಾಗಿದೆ. ಈ ನೀತಿಯು ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸುವುದಕ್ಕಾಗಿ ಕಾರ್ಯತಂತ್ರ ಮಧ್ಯಸ್ತಿಕೆಗಳು, ಆಕರ್ಷಕ ಪ್ರೋತ್ಸಾಹಕಗಳು ಮತ್ತು ಅವಶ್ಯಕವಿರುವ ನಿಯಂತ್ರಣ ಸುಧಾರಣೆಗಳನ್ನು ಪ್ರಸ್ತಾವಿಸುತ್ತದೆ. ಈ ನೀತಿಯು ಕರ್ನಾಟಕದಲ್ಲಿ ಸುಸ್ಥಿರ ಪ್ರವಾಸೋದ್ಯಮ ಪರಿಸರ ವ್ಯವಸ್ಥೆಯನ್ನು ಕಲ್ಪಿಸಲು ಮತ್ತು ಪ್ರವಾಸಿಗರಲ್ಲಿ ಸುರಕ್ಷಿತ ಮತ್ತು ಒಳ್ಳೆಯ ಅನುಭವಗಳನ್ನು ಮೂಡಿಸಲು ಪ್ರಯತ್ನಿಸುತ್ತದೆ.

### ಕೋವಿಡ್-19: "ಇಂದಿನ ಸ್ಪಂದನೆ ನಾಳೆಯ ಸಿದ್ಧತೆ"

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಅನ್ನು ಸಿದ್ಧಗೊಳಿಸುವ ಅವಧಿಯಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗವು ಜಾಗತಿಕ ಪ್ರಯಾಣ ಮತ್ತು ಪ್ರವಾಸೋದ್ಯಮವನ್ನು ವಾಸ್ತವವಾಗಿ ಸ್ತಬ್ಧವಾಗಿಸಿದೆ. ದೇಶೀಯ ಪ್ರವಾಸೋದ್ಯಮ, ಅಂತರರಾಷ್ಟ್ರೀಯ ಪ್ರವಾಸೋದ್ಯಮಕ್ಕಿಂತ ಚೇತರಿಸಿಕೊಳ್ಳುವ ನಿರೀಕ್ಷೆ ಇದೆ. ಆದರೆ ಚೇತರಿಕೆಗೆ ಇನ್ನು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ.

### ನಿಮ್ಮ ಸುರಕ್ಷೆ; ನಮ್ಮ ಜವಬ್ದಾರಿ

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ರಾಜ್ಯದ ಪ್ರವಾಸೋದ್ಯಮ, ಪರಿಸರ ವ್ಯವಸ್ಥೆಯ ಮೇಲೆ ಸಾಂಕ್ರಾಮಿಕ ರೋಗದ ದುರ್ಬಲಗೊಳಿಸುವ ಪರಿಣಾಮವನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಈ ನೀತಿಯ ಪರಿಣಾಮಕಾರಿ ಪುನಶ್ಚೇತನಕ್ಕಾಗಿ ಉದ್ಯಮಕ್ಕೆ ಬೆಂಬಲ ನೀಡುವ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಪ್ರವಾಸಿಗರ ಸುರಕ್ಷತೆಯನ್ನು ಖಾತ್ರಿಪಡಿಸುತ್ತದೆ ಮತ್ತು ಕರ್ನಾಟಕಕ್ಕೆ ಭೇಟಿ ನೀಡುವಾಗ ಆತ್ಮವಿಶ್ವಾಸವನ್ನು ಹೊಂದಿರುವಂತೆ ಮಾಡುತ್ತದೆ.



ಕಬಿನಿ

# 2 ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25, ಮುನ್ನೋಟ, ಗುರಿ ಮತ್ತು ಧ್ಯೇಯೋದ್ದೇಶಗಳು



ಶ್ರೀಗಂಧದ ಕರಕುಶಲ ವಸ್ತುಗಳು

## 2.1 ಮುನ್ನೋಟ

ಕರ್ನಾಟಕದ ಸ್ಥಾನಮಾನವನ್ನು ಎಲ್ಲರಿಗೂ ಸುಸ್ಥಿರ ಮತ್ತು ಅಂತರ್ಗತ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸೃಷ್ಟಿಸಲು ಪ್ರವಾಸೋದ್ಯಮ ಹಿತಾಸಕ್ತಿದಾರರು ಮತ್ತು ಸ್ಥಳೀಯ ಸಮುದಾಯಗಳ ಒಳಗೊಳ್ಳುವ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾದ ವೈವಿಧ್ಯಮಯ ಉನ್ನತ ಗುಣಮಟ್ಟದ ಪ್ರವಾಸೋದ್ಯಮ ಕೊಡುಗೆಗಳನ್ನು ನೀಡುವ ಮೂಲಕ ಪ್ರವಾಸಿಗರಿಗೆ ಸುರಕ್ಷಿತ ಮತ್ತು ಅವಿಸ್ಮರಣೀಯ ಅನುಭವವನ್ನು ಒದಗಿಸುವ ಅತ್ಯಂತ ಹೆಚ್ಚು ಪ್ರಶಸ್ತವಾದ ಪ್ರವಾಸಿ ತಾಣವನ್ನಾಗಿ ಮಾಡುವುದು.

## 2.2 ಗುರಿ

ಕರ್ನಾಟಕ ಪ್ರವಾಸೋದ್ಯಮದ ಎಲ್ಲಾ ಹಿತಾಸಕ್ತಿದಾರರಿಗೂ ಪ್ರಯೋಜನಕಾರಿ ಫಲಿತಾಂಶಗಳನ್ನು ಖಾತರಿಪಡಿಸಲು, ಕರ್ನಾಟಕ ಸರ್ಕಾರವು, ಈ ಮುಂದಿನವುಗಳನ್ನು ಖಾತರಿಪಡಿಸಲು ಪ್ರಯತ್ನಿಸತಕ್ಕದ್ದು-

1. ಕರ್ನಾಟಕವನ್ನು ಆಕರ್ಷಕ ಪ್ರವಾಸೋದ್ಯಮ ತಾಣವನ್ನಾಗಿ ಉತ್ತೇಜಿಸಿ, ಅದನ್ನು ದೇಶೀಯ ಮತ್ತು ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ಅಗ್ರ ಸ್ಥಾನ ದೊರಕಿಸುವುದು
2. ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಒಳಗೊಳ್ಳುವ ಮಹತ್ವದ ಚಾಲಕಶಕ್ತಿಯನ್ನಾಗಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು.
3. ಕರ್ನಾಟಕಕ್ಕೆ ಭೇಟಿ ನೀಡುವ ಎಲ್ಲಾ ಪ್ರವಾಸಿಗರಿಗೆ ಸುರಕ್ಷಿತ ಮತ್ತು ಅವಿಸ್ಮರಣೀಯ ಭೇಟಿಯಾಗಿ ಖಾತರಿಪಡಿಸುವ ಪ್ರವಾಸಿ ಕೇಂದ್ರಿತ ಪರಿಸರ ವ್ಯವಸ್ಥೆಯನ್ನು ಸೃಜಿಸುವುದು.
4. ಕರ್ನಾಟಕದಾದ್ಯಂತ ಬಲಿಷ್ಠ ಪ್ರವಾಸೋದ್ಯಮ ಮೂಲ ಸೌಕರ್ಯದ ಅಭಿವೃದ್ಧಿಯನ್ನು ವೃದ್ಧಿಗೊಳಿಸುವುದು.
5. ಹಲವು ವೈವಿಧ್ಯಮಯ ಉನ್ನತ-ಗುಣಮಟ್ಟದ ಉತ್ಪನ್ನಗಳು ಮತ್ತು ಸೇವೆಗಳ ಮೂಲಕ ಪ್ರವಾಸಿಗರಿಗೆ ವಿಶ್ವ-ದರ್ಜೆಯ ಅನುಭವವನ್ನು ನೀಡಲು ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಹೆಚ್ಚಿಸುವುದು.
6. ಪ್ರವಾಸಿ ತಾಣಗಳು, ಪ್ರವಾಸಿ ಸೇವೆಗಳು, ಪ್ರಕ್ರಿಯೆ ಸಾಮರ್ಥ್ಯಗಳು ಮತ್ತು ಒಟ್ಟಾರೆ ವೀಕ್ಷಕರ ಅನುಭವಗಳನ್ನು ಸುಧಾರಿಸುವುದಕ್ಕಾಗಿ ಡಿಜಿಟಲ್ ಉಪಕ್ರಮಗಳನ್ನು ಬೆಂಬಲಿಸುವುದು.
7. ಕರ್ನಾಟಕದಲ್ಲಿ ಪ್ರವಾಸೋದ್ಯಮದ ಸುಧಾರಣೆಗಾಗಿ ಎಲ್ಲಾ ಹಿತಾಸಕ್ತಿದಾರರ ಸಮನ್ವಯತೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸುವುದು.
8. ಪ್ರವಾಸೋದ್ಯಮ ವಲಯದಲ್ಲಿ ಲಾಭದಾಯಕ ಉದ್ಯೋಗಕ್ಕಾಗಿ ಕೌಶಲ್ಯಾಭಿವೃದ್ಧಿಯನ್ನು ಒದಗಿಸುವುದು ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವುದು.





9. ಸುಸ್ಥಿರ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅನುಕೂಲವನ್ನು ಒದಗಿಸುವುದು.
10. ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಹೂಡಿಕೆ-ಸ್ನೇಹಿ ನೀತಿಗಳೊಂದಿಗೆ ಪೂರಕ ವ್ಯವಹಾರ ಪರಿಸರವನ್ನು ಒದಗಿಸುವುದು.

## 2.3 ಧ್ಯೇಯೋದ್ದೇಶಗಳು

1. ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಭೇಟಿಯ ದೃಷ್ಟಿಯಿಂದ ಕರ್ನಾಟಕವನ್ನು ಭಾರತದ ಮೊದಲ ಆದ್ಯತೆಯ ರಾಜ್ಯಗಳಲ್ಲಿ ಒಂದಾಗಿಸುವುದು.
2. ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಸಜ್ಜುಗೊಳಿಸುವುದು.
3. ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಲ್ಲಿ ವಿಶ್ವಾಸವನ್ನು ತುಂಬುವುದು ಮತ್ತು ಕರ್ನಾಟಕದಲ್ಲಿನ ಅವರ ಪ್ರಯಾಣದುದ್ದಕ್ಕೂ ಅವರಿಗೆ ಆರಾಮ ಅನುಕೂಲತೆ ಮತ್ತು ಸುರಕ್ಷತೆಯನ್ನು ಖಾತರಿಗೊಳಿಸುವುದು.
4. ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕವನ್ನು ಬಹುಸಂಖ್ಯ ಮಾರುಕಟ್ಟೆ ವಾಹಿನಿಗಳ ಮುಖಾಂತರ ಉತ್ತೇಜಿಸುವುದು.
5. ಕರ್ನಾಟಕದಾದ್ಯಂತ ಪ್ರಮುಖ ಪ್ರವಾಸಿ ತಾಣಗಳ ಮಾರ್ಗಗಳಲ್ಲಿ ಪ್ರವಾಸಿಗರಿಗಾಗಿ ಗುಣಾತ್ಮಕವಾದ ಪ್ರವಾಸೋದ್ಯಮ ಮೂಲಸೌಕರ್ಯ ಮತ್ತು ಮೂಲಭೂತ ಅವಶ್ಯಕತೆಗಳನ್ನು ಖಾತರಿಪಡಿಸುವುದು.
6. ವಿವಿಧ ಬಗೆಯ ಪ್ರವಾಸಿಗರ ಆಗಮನಕ್ಕಾಗಿ, ಉನ್ನತ ಗುಣಮಟ್ಟದ ಪ್ರವಾಸೋದ್ಯಮ ಪ್ಯಾಕೇಜ್‌ಗಳು ಮತ್ತು ಉತ್ಪನ್ನಗಳ ಮುಖಾಂತರ ಅಪೇಕ್ಷಣೀಯ ಅನುಭವಗಳನ್ನು ಮೂಡಿಸುವುದು ಮತ್ತು ಮರು ಭೇಟಿಗಾಗಿ ಅವರನ್ನು ಪ್ರೋತ್ಸಾಹಿಸುವುದು.
7. ಪ್ರವಾಸೋದ್ಯಮದಲ್ಲಿ ಉದ್ಯಮ-ಚಾಲಿತ ಉಪಕ್ರಮಗಳನ್ನು ಪ್ರೋತ್ಸಾಹಿಸಲು ಖಾಸಗಿ ವಲಯ ಹೂಡಿಕೆಗಳು ಮತ್ತು ಯಾಂತ್ರಿಕತೆಯನ್ನು ಸ್ಥಾಪಿಸಲು ಸಾಧ್ಯವಾಗಿಸುವಂತಹ ಕಾರ್ಯಚೌಕಟ್ಟನ್ನು ಸೃಷ್ಟಿಸುವುದು.
8. ಕರ್ನಾಟಕಕ್ಕಾಗಿ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಪ್ರವಾಸೋದ್ಯಮದ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
9. ಕರ್ನಾಟಕದಲ್ಲಿ ಜವಾಬ್ದಾರಿಯುತವಾದ ಪ್ರವಾಸೋದ್ಯಮದ ಉತ್ತೇಜನ ಮತ್ತು ಬೆಳವಣಿಗೆಗಾಗಿ ಹಿತಾಸಕ್ತಿದಾರರನ್ನು ಒಟ್ಟುಗೂಡಿಸುವುದು.
10. ಈ ನೀತಿಯ ಯಶಸ್ವಿ ಅನುಷ್ಠಾನಕ್ಕಾಗಿ ಪರಿಣಾಮಕಾರಿ ಅಂತರ್ ಇಲಾಖಾ ಸಹಕಾರವನ್ನು ಕಲ್ಪಿಸುವುದು.
11. ದತ್ತಾಂಶ ಚಾಲಿತ, ಫಲಿತಾಂಶ-ಆಧಾರಿತ ನೀತಿ ಮತ್ತು ಯೋಜನೆ ರೂಪಿಸಲು ತಂತ್ರಜ್ಞಾನದ ಅನುಕೂಲ ಕಲ್ಪಿಸುವುದು.

## 2.4 ಸಿಂಧುತ್ವ

ಈ ನೀತಿಯು, ಈ ಬಗ್ಗೆ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಐದು ವರ್ಷಗಳ (5) ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25, ಇದು ಉಪಬಂಧಗಳಿಗೆ ವಿರುಧ್ಧವಾದ ಈ ಹಿಂದೆ ಹೊರಡಿಸಿದ ಸರ್ಕಾರದ ಯಾವುದೇ ಆದೇಶ/ಸುತ್ತೋಲೆಯನ್ನು ರದ್ದುಗೊಳಿಸುತ್ತದೆ. ಕರ್ನಾಟಕ ಸರ್ಕಾರವು ಸಂದರ್ಭಾನುಸಾರ ಅಗತ್ಯವೆನಿಸಿದಾಗ ಈ ನೀತಿಯ ಅವಧಿಯನ್ನು ವಿಸ್ತರಿಸಬಹುದು.


ಗೊಮ್ಮಟೇಶ್ವರ ಮೂರ್ತಿ, ವೇಣೂರು



# 3 ಕಾರ್ಯತಂತ್ರ


ಬಾದಾಮಿ ಗುಹಾಂತರ ದೇವಾಲಯ

## 3.1 ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಕಾರ್ಯತಂತ್ರ ಮಾರ್ಗಸೂಚಿ

2019ರಲ್ಲಿ, ಕರ್ನಾಟಕ ಪ್ರವಾಸೋದ್ಯಮ ವಲಯವು ರಾಜ್ಯದ ಜಿಎಸ್‌ಡಿಪಿಗೆ 14.8% ರಷ್ಟು ಕೊಡುಗೆಯನ್ನು ನೀಡಿದೆ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗದ ಮೂಲಕ 30 ಲಕ್ಷಕ್ಕೂ ಅಧಿಕ ಉದ್ಯೋಗವಕಾಶಗಳನ್ನು ಸೃಜಿಸಿದೆ. ಪ್ರವಾಸೋದ್ಯಮ ಇಲಾಖೆಯು ತನ್ನ ಕಾರ್ಯತಂತ್ರದ ಮಾರ್ಗಸೂಚಿಯ ಅಡಿಯಲ್ಲಿ ರಾಜ್ಯದ ಜಿಎಸ್‌ಡಿಪಿಗೆ ಪ್ರವಾಸೋದ್ಯಮ ವಲಯದ ಕೊಡುಗೆಯನ್ನು ಹೆಚ್ಚಿಸಲು ಮತ್ತು ಈ ವಲಯದ ಮೂಲಕ ಅಸಂಖ್ಯಾತ ಉದ್ಯೋಗವಕಾಶಗಳನ್ನು ಸೃಜಿಸಲು ಆದ್ಯತೆ ನೀಡುತ್ತದೆ. ರಾಜ್ಯದಲ್ಲಿ ಪ್ರವಾಸೋದ್ಯಮ ವಲಯದ ಬೆಳವಣಿಗೆಯನ್ನು ತ್ವರಿತಗೊಳಿಸಲು ಪ್ರವಾಸೋದ್ಯಮ ಇಲಾಖೆಯ ಕಾರ್ಯತಂತ್ರಕ್ಕೆ ಸರಿ ಹೊಂದುವಂತೆ ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಅನ್ನು ರೂಪಿಸಲಾಗಿದೆ.

## 3.2. ಪ್ರಮುಖವಾಗಿ ಗಮನಹರಿಲಸಬೇಕಾದ ಪ್ರದೇಶಗಳು

ಪ್ರವಾಸೋದ್ಯಮ ಇಲಾಖೆಯು ರೂಪಿಸಿರುವ ಕಾರ್ಯತಂತ್ರ ಮಾರ್ಗಸೂಚಿಯು ಖಾಸಗಿ ಮತ್ತು ಸಾರ್ವಜನಿಕ ಹಿತಾಸಕ್ತಿದಾರರು ಒಗ್ಗೂಡಿ ಎಲ್ಲರನ್ನೂ ಒಳಗೊಳ್ಳುವ ಸುಸ್ಥಿರವಾದ ಪ್ರವಾಸೋದ್ಯಮ ಅಭಿವೃದ್ಧಗೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತದೆ. ಇಲಾಖೆಯು ಈ ಪ್ರವಾಸೋದ್ಯಮ ನೀತಿಯ ಅವಧಿಯಲ್ಲಿ ಅಗತ್ಯ ಬಂಡವಾಳವನ್ನು ಸೃಜಿಸಿಕೊಳ್ಳುವ ಮೂಲಕ ಪ್ರವಾಸಿ ತಾಣಗಳನ್ನು ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳುವುದು.

ಕರ್ನಾಟಕದಲ್ಲಿ ಪ್ರವಾಸೋದ್ಯಮ ಪೂರಕ ವ್ಯವಸ್ಥೆಯ ದೀರ್ಘಾವಧಿಯ ಅಭಿವೃದ್ಧಿಗಾಗಿನ ಸರ್ಕಾರದ ಮುನ್ನೋಟವನ್ನು ಸಾಧಿಸುವುದಕ್ಕಾಗಿ ಪ್ರಮುಖವಾಗಿ ಗಮನಹರಿಸಬೇಕಾದ ಪ್ರದೇಶಗಳನ್ನು ಕಾರ್ಯತಂತ್ರ ಮಾರ್ಗಸೂಚಿಯಲ್ಲಿ ಗುರುತಿಸಿದೆ. ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25ರ ಸಮಗ್ರ ದೃಷ್ಟಿಯನ್ನು ಸಾಧಿಸುವಲ್ಲಿ ಪ್ರತಿಯೊಂದು ಕ್ಷೇತ್ರದ ಸಾಧನೆಯು ಪ್ರಮುಖವಾಗಿದೆ. ಇಲಾಖೆಯು ಗಮನಹರಿಸಬೇಕಾದ ಪ್ರಮುಖ ಕ್ಷೇತ್ರಗಳೆಂದರೆ-

1. **ಪ್ರವಾಸೋದ್ಯಮದ ಮಾರುಕಟ್ಟೆ ಮತ್ತು ಉತ್ತೇಜನ**
   ಕರ್ನಾಟಕವನ್ನು ಹೆಚ್ಚು ಆದ್ಯತೆಯ ತಾಣವನ್ನಾಗಿಸಲು ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ದೇಶೀಯ ಹಾಗೂ ಪ್ರಮುಖ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕವನ್ನು ಉತ್ತೇಜಿಸಲು 360° ಮಾರುಕಟ್ಟೆ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಹಾಗೂ ಅತಿಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಕರ್ನಾಟಕದ ಬ್ರ್ಯಾಂಡ್ 'ಒಂದು ರಾಜ್ಯ ಹಲವು ಜಗತ್ತುಗಳು' ಎಂಬ ಧ್ಯೇಯ ವಾಕ್ಯದ ಲಾಭವನ್ನು ಬಳಸಿಕೊಳ್ಳುವುದು.
2. **ಪ್ರವಾಸೋದ್ಯಮ ಮೂಲಸೌಕರ್ಯದ ಅಭಿವೃದ್ಧಿ**





ಎಲ್ಲ ಪ್ರವಾಸಿ ತಾಣಗಳಲ್ಲಿ ಅತ್ಯವಶ್ಯಕವಾದ ಪ್ರವಾಸೀ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಹಂತಹಂತವಾಗಿ ಸುಗಮಗೊಳಿಸುವುದು ಮತ್ತು ಪ್ರವಾಸಿಗರಿಗೆ ಗುಣಾತ್ಮಕ ಅನುಭವವನ್ನು ಒದಗಿಸುವಂತೆ ಖಚಿತಪಡಿಸುವುದು. ಪ್ರವಾಸೋದ್ಯಮದ ಅನುಭವಾಧಾರಿತ ಅಂಶಗಳಿಗೆ ವಿಶೇಷ ಒತ್ತನ್ನು ನೀಡುವುದರೊಂದಿಗೆ, ಕರ್ನಾಟಕದಲ್ಲಿ ಗುರುತಿಸಲಾದ ಪ್ರಮುಖ ಪ್ರವಾಸಿ ತಾಣಗಳಲ್ಲಿ ವಿಶ್ವದರ್ಜೆಯ ಪ್ರವಾಸಿ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಶ್ರಮಿಸುವುದು.

3. **ಪ್ರವಾಸೋದ್ಯಮ ವೈವಿಧ್ಯಗಳು**

ಪ್ರವಾಸಿಗರಿಗೆ ಅವಿಸ್ಮರಣೀಯವಾದ ಅನುಭವವನ್ನುಂಟು ಮಾಡಿ, ಆ ಮೂಲಕ ಅವರು ಮತ್ತೆ ಮತ್ತೆ ಭೇಟಿ ನೀಡಿ ದೀರ್ಘಕಾಲ ಇಲ್ಲಿ ಉಳಿದುಕೊಂಡು ಹೆಚ್ಚು ಕಾಲಕಳೆಯಲು ಉತ್ತೇಜಿಸುವುದಕ್ಕಾಗಿ ವೈವಿಧ್ಯಮಯ ಪ್ರವಾಸೋದ್ಯಮ ಚಟುವಟಿಕೆಗಳನ್ನು ಉತ್ತೇಜಿಸಿ ಅನುಕೂಲ ಕಲ್ಪಿಸುವುದು.

4. **ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ**

ಪ್ರವಾಸೋದ್ಯಮದ ಕ್ಷಿಪ್ರ ಮತ್ತು ಸಮಗ್ರ ಬೆಳವಣಿಗೆಯನ್ನು ಸಾಧ್ಯವಾಗಿಸುವುದಕ್ಕಾಗಿ ಪ್ರವಾಸೋದ್ಯಮ ವಲಯಕ್ಕಾಗಿ ವಿಶಾಲ ಬೌದ್ಧಿಕ ಕೇಂದ್ರದ ಅಭಿವೃದ್ಧಿಗೆ ಬೆಂಬಲ ನೀಡಿ ಲಾಭದಾಯಕ ಉದ್ಯೋಗಕ್ಕಾಗಿ ಅರ್ಥಪೂರ್ಣ ಅವಕಾಶಗಳನ್ನು ಕಲ್ಪಿಸುವುದು.

5. **ಪ್ರವಾಸಿ ಆರಾಮ ಮತ್ತು ಸುರಕ್ಷತೆ.**

ಕರ್ನಾಟಕಕ್ಕೆ ಭೇಟಿ ನೀಡುವ ಎಲ್ಲ ಪ್ರವಾಸಿಗರಿಗೆ ಆರಾಮದಾಯಕವಾದ ಮತ್ತು ಅಂತರ್ಗತ ಅನುಭವಗಳನ್ನು ಖಚಿತಪಡಿಸುವ ಮೂಲಕ ಮತ್ತು ಹೊಸ ಸನ್ನಿವೇಶಗಳಿಗೆ ತಕ್ಕ ಹಾಗೆ ಸುರಕ್ಷತಾ ಹಾಗೂ ನೈರ್ಮಲ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಕರ್ನಾಟಕವನ್ನು ಸುರಕ್ಷಿತ ತಾಣವನ್ನಾಗಿ ಮಾಡುವುದು.

6. **ಸಮುದಾಯದ ಪಾಲ್ಗೊಳ್ಳುವಿಕೆ.**

ಸಮಗ್ರ ಸಾಮಾಜಿಕ-ಸಾಂಸ್ಕೃತಿಕ ಬೆಳವಣಿಗೆಯನ್ನು ಮೂಡಿಸಲು ಮತ್ತು ಕರ್ನಾಟಕದ ಜನರಿಗೆ ಆರ್ಥಿಕ ಲಾಭಗಳನ್ನು ಗಳಿಸಲು ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಸ್ಥಳೀಯ ಸಮುದಾಯ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದು.

7. **ಸುಸ್ಥಿರ ಪ್ರವಾಸೋದ್ಯಮ**

ಸುಸ್ಥಿರ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳನ್ನು ಉತ್ತೇಜಿಸುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಯ ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳ ನಡುವೆ ಸಮತೋಲನ ಸಾಧಿಸುವುದು.

8. **ಪ್ರವಾಸೋದ್ಯಮದ ವಿಶ್ಲೇಷಣೆ ಮತ್ತು ಡಿಜಿಟಲ್ ಉಪಕ್ರಮಗಳು**

ಯೋಜನೆ, ನೀತಿ ನಿರೂಪಣೆ ಮತ್ತು ನಿರ್ಧಾರ ತೆಗೆದುಕೊಳ್ಳಲು ನೆರವಾಗುವಂತೆ ವಿಶ್ಲೇಷಣಾ-ಚಾಲಿತ ವಿಧಾನವನ್ನು ಪ್ರೋತ್ಸಾಹಿಸುವುದು ಮತ್ತು ಗುಣಮಟ್ಟದ ಸೇವೆಗಳನ್ನು ಹೆಚ್ಚಿಸುವುದಕ್ಕಾಗಿ, ನವೀನ ಡಿಜಿಟಲ್ ಪರಿಹಾರಗಳನ್ನು ಒದಗಿಸುವುದು.

9. **ಹೂಡಿಕೆ ಸೌಲಭ್ಯ.**

ವ್ಯವಹಾರಿಕ ಸೌಲಭ್ಯವನ್ನು ಸುಧಾರಿಸುವ ಮೂಲಕ ಕರ್ನಾಟಕದಲ್ಲಿ ಪ್ರವಾಸೋದ್ಯಮ ಯೋಜನೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗಾಗಿ ಅನುಕೂಲಕರ ವಾತಾವರಣವನ್ನು ಕಲ್ಪಿಸುವುದು.

ಪ್ರವಾಸೋದ್ಯಮ ನೀತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆ ಮತ್ತು ಅದರ ಅಧೀನ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ), ಅರಣ್ಯ ವಸತಿ ವಿಹಾರಧಾಮಗಳ ಸಂಸ್ಥೆ(ಜೆ.ಎಲ್.ಆರ್), ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್) ಗಳಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ನಿಗದಿಪಡಿಸಿದ್ದು, ಇಲಾಖೆ ಹಾಗೂ ಈ ಎಲ್ಲಾ ಅಧೀನ ಸಂಸ್ಥೆಗಳು ಪ್ರವಾಸೋದ್ಯಮ ನೀತಿ 2020-25ರ ಗುರಿಗಳನ್ನು ಸಾಧಿಸಲು ಒಟ್ಟಾಗಿ ಶ್ರಮಿಸಬೇಕಾಗಿರುತ್ತದೆ.



ಬಾಬಾಬುಡನಗಿರಿ



# 4 ಪ್ರವಾಸೋದ್ಯಮ ಮಾರುಕಟ್ಟೆ ಮತ್ತು ಉತ್ತೇಜನ



ಕರ್ನಾಟಕ ಪ್ರವಾಸೋದ್ಯಮದ ಮಳಿಗೆ

ಪ್ರವಾಸೋದ್ಯಮ ಇಲಾಖೆಯು ಮತ್ತು ಅದರ ಅಂಗ ಸಂಸ್ಥೆಗಳು, ಪರಿಕಲ್ಪನಾತ್ಮಕ ಅಭಿಯಾನಗಳು, ಸಾಮಾಜಿಕ ಮಾಧ್ಯಮಗಳು, ರೋಡ್‌ಶೋಗಳು, ದೇಶೀಯ ಮತ್ತು ಅಂತರರಾಷ್ಟ್ರೀಯ ಟ್ರಾವೆಲ್ ಮಾರ್ಟ್‌ಗಳು, ವ್ಯಾಪಾರಿ ಮೇಳಗಳು, ಹೂಡಿಕೆದಾರರ ಸಮಾವೇಶಗಳು, ಉತ್ಸವಗಳು ಕಾರ್ಯಕ್ರಮಗಳು ಮತ್ತು ಜಾಹೀರಾತುಗಳ ಮೂಲಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ರಾಜ್ಯವನ್ನು ಉತ್ತೇಜಿಸುವುದಕ್ಕೆ ನಿರಂತರವಾಗಿ ಪ್ರಯತ್ನಿಸುತ್ತಿದೆ.

ಕರ್ನಾಟಕ ಪ್ರವಾಸೋದ್ಯಮದ 2025ರ ಮುನ್ನೋಟವು, ದೇಶೀಯ ಮತ್ತು ವಿದೇಶಿ ಪ್ರವಾಸಿಗರಿಗಾಗಿ ಕರ್ನಾಟಕವನ್ನು ಭಾರತದ ಅಗ್ರಗಣ್ಯ ಪ್ರವಾಸಿ ತಾಣಗಳಲ್ಲಿ ಒಂದನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ. ಇದನ್ನು ಸಾಧಿಸುವ ನಿಟ್ಟಿನಲ್ಲಿ, ಪ್ರವಾಸೋದ್ಯಮ ಇಲಾಖೆಯು, ಪ್ರವಾಸಿಗರು, ಉದ್ಯಮ, ಸಮುದಾಯ, ಸರ್ಕಾರಗಳು ಮತ್ತು ಇತರೆ ಪ್ರವಾಸೋದ್ಯಮ ಹಿತಾಸಕ್ತಿದಾರರೊಂದಿಗೆ ಸಂಪರ್ಕ ಸಾಧಿಸಲು ಮತ್ತು ಕರ್ನಾಟಕ ಪ್ರವಾಸೋದ್ಯಮದ ಸದೃಢ ಬೆಳವಣಿಗೆಯ ವೇಗವನ್ನು ಹೆಚ್ಚಿಸಲು 3600 ಮಾರುಕಟ್ಟೆ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮದ ಮಾರುಕಟ್ಟೆಯನ್ನು, ಈ ಉದ್ಯಮದ ನಿಕಟ ಸಹಯೋಗದೊಂದಿಗೆ ಮಾಡತಕ್ಕದ್ದು. ಇಂದಿನ ನೂತನ ಸನ್ನಿವೇಶದಲ್ಲಿ ವಿಕಸಿಸುತ್ತಿರುವ ಪ್ರವಾಸೋದ್ಯಮದ ವಿಭಿನ್ನ ಆಯಾಮಗಳ ಹಿನ್ನೆಲೆಯಲ್ಲಿ, ಕಾರ್ಯನೀತಿಯ ಆರಂಭಿಕ ಅವಧಿಗಾಗಿ ಕರ್ನಾಟಕ ಪ್ರವಾಸೋದ್ಯಮದ ಮಾರುಕಟ್ಟೆ ಚಟುವಟಿಕೆಗಳನ್ನು ಹೆಚ್ಚಾಗಿ ಸ್ಥಳೀಯ ಮತ್ತು ಪ್ರಾದೇಶಿಕ ಪ್ರವಾಸೋದ್ಯಮದ ಮೇಲೆ ಕೇಂದ್ರೀಕರಿಸತಕ್ಕದ್ದು. ಇಲಾಖೆಯು ಪ್ರವಾಸಿಗರ ಸುರಕ್ಷಿತ ಪ್ರಯಾಣದ ಸ್ಥಿತಿಗತಿಗಳನ್ನು ಸಕ್ರಿಯವಾಗಿ ಮೌಲ್ಯಮಾಪನ ಮಾಡಿ ಪರಿಸ್ಥಿತಿಯು ಸುಧಾರಿಸುತ್ತಿದ್ದಂತೆ ಅದರ ಮಾರುಕಟ್ಟೆ ಗುರಿಗಳನ್ನು ವಿಸ್ತರಿಸತಕ್ಕದ್ದು.

### 4.1 ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಉದ್ದೇಶಿತ ಅಭಿಯಾನಗಳು

ಇಲಾಖೆಯು, ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಒಂದು ವಿಶಿಷ್ಟವಾದ, ಸ್ಪರ್ಧಾತ್ಮಕ ಮತ್ತು ಸಮರ್ಥಿತ ಮೌಲ್ಯವುಳ್ಳ ಪ್ರಸ್ತಾಪಗಳ ಸತ್ವಯುತವಾದ ಪರಿಕಲ್ಪನೆಯೊಂದನ್ನು ಗುರುತಿಸತಕ್ಕದ್ದು, ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬಹುಭಾಷಿಕ ಉದ್ದೇಶಿತ ಅಭಿಯಾನಗಳನ್ನು ಕೈಗೊಳ್ಳತಕ್ಕದ್ದು.

ಇಲಾಖೆಯು, ಪ್ರಚಲಿತದಲ್ಲಿರುವ ಮಾರುಕಟ್ಟೆಯ ಅಂತಃಸಾಧ್ಯತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಮಾರುಕಟ್ಟೆಗೆ ತಕ್ಕುದಾದ ಕಾರ್ಯತಂತ್ರಗಳನ್ನು ರೂಪಿಸತಕ್ಕದ್ದು ಮತ್ತು ಹೊಸ ಹಾಗೂ ವಿಸ್ತಾರಗೊಳ್ಳುತ್ತಿರುವ ಮಾರುಕಟ್ಟೆ ಕ್ಷೇತ್ರದಲ್ಲಿ ಕರ್ನಾಟಕದ ಚಿತ್ರಣವನ್ನು ಬಿಂಬಿಸುವ ಪ್ರಯತ್ನ ಮಾಡತಕ್ಕದ್ದು. ಕಾರ್ಯಕ್ರಮಗಳು ಮತ್ತು ಅಭಿಯಾನಗಳು 'ನೋಡು ಬಾ ನಮ್ಮೂರ' ದಂತಹ ಅಭಿಯಾನಗಳಲ್ಲಿ ಕಂಡುಬರುವಂತೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಸನ್ನಿವೇಶಗಳಿಗೆ ಅನುಗುಣವಾಗಿರತಕ್ಕದ್ದು.





ಪ್ರತಿವರ್ಷ ಆದ್ಯತೆಯ ಪ್ರಚಾರಕ್ಕಾಗಿ ಕರ್ನಾಟಕದ Focus Tourism Destinations (FTDs) ಆಯ್ಕೆ ಮಾಡತಕ್ಕದ್ದು ಮತ್ತು ಇಲಾಖೆಯು 2025 ರ ವೇಳೆಗೆ ಕರ್ನಾಟಕದ ಎಲ್ಲಾ ಪ್ರಮುಖ ಮತ್ತು ಮುಂಬರುವ ಪ್ರವಾಸಿ ತಾಣಗಳನ್ನು ಪ್ರದರ್ಶಿಸಲು ಪ್ರಯತ್ನಪಡತಕ್ಕದ್ದು.

ಉತ್ತೇಜನಾತ್ಮಕ ಅಭಿಯಾನಗಳಲ್ಲದೆ, ಪ್ರವಾಸೋದ್ಯಮ ಇಲಾಖೆಯು, ಪ್ರಮುಖ ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸ ಹಾಗೂ ಪ್ರವಾಸೋದ್ಯಮ ಮಾರ್ಟ್‌ಗಳಲ್ಲಿ ಪ್ರಧಾನ ಸ್ಥಾನವನ್ನು ಹೊಂದಿರತಕ್ಕದ್ದು. ಪ್ರವಾಸ ಮತ್ತು ಪ್ರವಾಸೋದ್ಯಮ ಮಾರ್ಟ್‌ಗಳ ಜೊತೆಯಲ್ಲಿ, ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮ ಕ್ಷೇತ್ರದ ಪ್ರಚಾರಕ್ಕಾಗಿ ಅನೇಕ ದೇಶೀಯ ಮತ್ತು ಅಂತರರಾಷ್ಟ್ರೀಯ ನಗರಗಳಲ್ಲಿ road shows ಸಹ ಆಯೋಜಿಸತಕ್ಕದ್ದು.

### 4.2 ಪ್ರವಾಸೋದ್ಯಮ ಪ್ರಚಾರಕ್ಕಾಗಿ ವಾರ್ಷಿಕ ವೇಳಾಪಟ್ಟಿ

ಕರ್ನಾಟಕ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಪ್ರಮುಖ, ಪ್ರಚಾರ ಚಟುವಟಿಕೆಗಳ ವಾರ್ಷಿಕ ವೇಳಾಪಟ್ಟಿಯನ್ನು ಬಿಡುಗಡೆಗೊಳಿಸತಕ್ಕದ್ದು. ವೇಳಾಪಟ್ಟಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು-

- ಕರ್ನಾಟಕ ಇಂಟರ್ ನ್ಯಾಷನಲ್ ಟ್ರಾವೆಲ್ ಎಕ್ಸ್ ಪೋ (KITE) ಮತ್ತು ಜಾಗತಿಕ ಪ್ರವಾಸೋದ್ಯಮ ಹೂಡಿಕೆದಾರರ ಸಮಾವೇಶ (GTIM- Global Tourism Investers Meet)ಗಳು ಸೇರಿದಂತೆ ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಆಯೋಜಿಸಲು ಪ್ರಸ್ತಾಪಿಸಿರುವ ಎಲ್ಲಾ ಮಹತ್ವಪೂರ್ಣ ಕಾರ್ಯಕ್ರಮಗಳು.
- ಇಲಾಖೆಯು ಆಯೋಜಿಸಲು ಉದ್ದೇಶಿಸಿರುವ ರೋಡ್‌ಶೋಗಳು ಮತ್ತು B2B ಸರಣಿ ಸಭೆಗಳು.
- ಇಲಾಖೆಯು ಪಾಲ್ಗೊಳ್ಳಲು ಉದ್ದೇಶಿಸಿರುವ ದೇಶಿಯ ಮತ್ತು ಅಂತರರಾಷ್ಟ್ರೀಯ ಪ್ರವಾಸ ಮತ್ತು ಪ್ರವಾಸೋದ್ಯಮ ಮಾರ್ಟ್‌ಗಳು.
- ಇಲಾಖೆಯು ನೆರವು ನೀಡುವಂತಹ ಅಥವಾ ಪ್ರಾಯೋಜಿಸುವ ಎಲ್ಲಾ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು ಹಾಗೂ ಉತ್ಸವಗಳು.

### 4.3 ಕರ್ನಾಟಕ ಪ್ರವಾಸೋದ್ಯಮಕ್ಕೆ ಡಿಜಿಟಲ್ ಟಚ್ ಪಾಯಿಂಟ್‌ಗಳು

ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಒಂದು ಸಮಗ್ರ, ಬಳಕೆದಾರ-ಸ್ನೇಹಿ ಮತ್ತು ಆಕರ್ಷಕವಾಗಿರುವಂತಹ ವೆಬ್‌ತಾಣವನ್ನು ಹಾಗೂ ಮೊಬೈಲ್ APP ಅಭಿವೃದ್ಧಿಪಡಿಸತಕ್ಕದ್ದು. ಈ ವೆಬ್‌ತಾಣ ಮತ್ತು ಮೊಬೈಲ್ APP ಪ್ರವಾಸಿಗರಿಗೆ ಪ್ರಮುಖ ಟಚ್ ಪಾಯಿಂಟ್ ಆಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಪ್ರವಾಸೋದ್ಯಮ ವ್ಯವಸ್ಥೆಗೆ ಡಿಜಿಟಲ್ ಪರಿಹಾರಗಳನ್ನು ನೀಡಲು ಇಲಾಖೆಯನ್ನು ಶಕ್ತಗೊಳಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ಪ್ರವಾಸೋದ್ಯಮ ಸಮುದಾಯಗಳೊಂದಿಗೆ ನೇರವಾಗಿ ತೊಡಗಿಸಿಕೊಳ್ಳಲು ಸಾಮಾಜಿಕ ಮಾಧ್ಯಮ, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಮತ್ತು ನವೀನ ತಂತ್ರಜ್ಞಾನಗಳನ್ನು ಬಳಸಿಕೊಳ್ಳತಕ್ಕದ್ದು. ಕರ್ನಾಟಕ ಪ್ರವಾಸೋದ್ಯಮವು ಭವಿಷ್ಯವರ್ತಿಯಾದ ಮತ್ತು ಪ್ರತಿಕ್ರಿಯಾತ್ಮಕ ಸ್ವರೂಪಗಳನ್ನು ಒಳಗೊಂಡ ಡಿಜಿಟಲ್ ಎಂಗೇಜ್‌ಮೆಂಟ್ ಮತ್ತು ಪ್ರತಿಸ್ಪಂದನಾ ಕಾರ್ಯತಂತ್ರವನ್ನು ಹೊಂದಿರತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ಎಲ್ಲಾ ಪ್ರಮುಖ ಪ್ರವಾಸಿ ತಾಣಗಳಲ್ಲಿ ಮಾಹಿತಿ ಕಿಯೋಸ್ಕ್‌ಗಳು, ಶ್ರವ್ಯ-ದೃಶ್ಯ ಮಾರ್ಗದರ್ಶಿ, ವಿವರಣ ಕೇಂದ್ರಗಳು ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸತಕ್ಕದ್ದು ಮತ್ತು ನೆರವನ್ನು ನೀಡತಕ್ಕದ್ದು.

### 4.4 ಕಾರ್ಯತಂತ್ರದ ಸಹಭಾಗಿತ್ವ

ಇಲಾಖೆಯು, ಉದ್ಯಮದ ಒಳನೋಟಗಳನ್ನಾಧರಿಸಿ (Industry insight), ಉದ್ಯಮದ ಪ್ರವೃತ್ತಿಗಳನ್ನು (Industry trends) ಅರಿತುಕೊಳ್ಳಲು ಮತ್ತು ಅವುಗಳ ಉತ್ತೇಜನಾ ಕಾರ್ಯಚಟುವಟಿಕೆಗಳನ್ನು ಅಳವಡಿಸಿಕೊಳ್ಳಲು ಕರ್ನಾಟಕ ಪ್ರವಾಸೋದ್ಯಮದ ಪ್ರಾತಿನಿಧಿಕ ಸಂಸ್ಥೆಯಾದ ಕರ್ನಾಟಕ ಪ್ರವಾಸೋದ್ಯಮ ಸಂಘದೊಂದಿಗೆ (Karnataka Tourism Society) ನಿಯತವಾಗಿ ಸಮಾಲೋಚನೆ ನಡೆಸತಕ್ಕದ್ದು.

ಕರ್ನಾಟಕವನ್ನು ಆದ್ಯತಾ ಪ್ರವಾಸಿ ತಾಣವನ್ನಾಗಿ ಉತ್ತೇಜಿಸಲು, ಪ್ರವಾಸ ಆಯೋಜಕರು, ಪ್ರವಾಸ ಏಜೆಂಟರುಗಳು, ಆನ್‌ಲೈನ್ ಸಂಯೋಜಕರು ಮತ್ತು ಭಾರತೀಯ ಪ್ರವಾಸೋದ್ಯಮ ಕಚೇರಿಗಳು, ದೂತವಾಸಗಳು ಮತ್ತು ರಾಯಭಾರಿ ಕಚೇರಿಗಳೂ ಸೇರಿದಂತೆ ವಿದೇಶಿ ಕಚೇರಿಗಳೊಂದಿಗೆ ಕಾರ್ಯತಂತ್ರ ಸಹಭಾಗಿತ್ವವನ್ನು ಸ್ಥಾಪಿಸಿಕೊಳ್ಳತಕ್ಕದ್ದು. ಪ್ರವಾಸೋದ್ಯಮ ಸೇವಾದಾತರಿಗೆ ಮಾರುಕಟ್ಟೆ ಅಭಿವೃದ್ಧಿ ನೆರವೂ ಸಹ ದೊರೆಯುತ್ತದೆ. ಅದಕ್ಕೆ ಸಂಬಂಧಪಟ್ಟ ವಿವರವನ್ನು ವಿಭಾಗ 14- ಪ್ರೋತ್ಸಾಹಕಗಳು, ಸಹಾಯಧನ ಮತ್ತು ವಿನಾಯಿತಿಗಳು ಎಂಬ ವಿಭಾಗದಲ್ಲಿ ವಿವರಿಸಲಾಗಿದೆ.

### 4.5 ಕರ್ನಾಟಕ ಅಂತಾರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ

ದ್ವೈ-ವಾರ್ಷಿಕ, ಕರ್ನಾಟಕ ಅಂತಾರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ (KITE)-ಕರ್ನಾಟಕ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಮಹತ್ವಪೂರ್ಣವಾದ ಸರಣಿ ಕಾರ್ಯಕ್ರಮವಾಗಿದೆ. ಪ್ರವಾಸೋದ್ಯಮ ಇಲಾಖೆಯು, ಕರ್ನಾಟಕ ಅಂತರರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ ಯಶಸ್ವಿಯಾಗುವಂತೆ ಅಗತ್ಯವಾದ ಬೆಂಬಲವನ್ನು ನೀಡತಕ್ಕದ್ದು.

### 4.6 ನಿಯತ ಪರಿಚಯ ಪ್ರವಾಸಗಳು (FAM Trips)

ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮದ ಬಗ್ಗೆ word of mouth buzz (ಬಾಯಿ ಮಾತಿನ) ಪ್ರಚಾರವನ್ನು ಹೆಚ್ಚಿಸಲು ಪ್ರವಾಸಿ ಆಯೋಜಕರು, ಪ್ರವಾಸಿ ಏಜೆಂಟರುಗಳು, ಪತ್ರಕರ್ತರು, ಛಾಯಾಗ್ರಾಹಕರು, ಬರಹಗಾರರು ಮತ್ತು ಬ್ಲಾಗರ್ ಗಳಿಗಾಗಿ ನಿಯತವಾದ ಪರಿಚಯಾತ್ಮಕವಾದ ಪ್ರವಾಸವನ್ನು ಪ್ರಾಯೋಜಿಸಿ, ಆಯೋಜಿಸತಕ್ಕದ್ದು.



# 5 ಪ್ರವಾಸೋದ್ಯಮ ಮೂಲಸೌಕರ್ಯ



ಕೆ.ಎಸ್.ಟಿ.ಡಿ.ಸಿ. ಮಯೂರ ಭುವನೇಶ್ವರಿ, ಹಂಪೆ

ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿಯು, ಪ್ರವಾಸೋದ್ಯಮ ಸ್ಥಳಗಳ ದೀರ್ಘಾಕಾಲಿಕ ಬೆಳವಣಿಗೆಗೆ ಹಾಗೂ ಪ್ರವಾಸಿಗರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವಲ್ಲಿ ವಿಶೇಷ ಮಹತ್ವವನ್ನು ಹೊಂದಿದೆ. ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿಯು, ಈ ಕೆಳಕಂಡ ಪ್ರಮುಖ ಕ್ಷೇತ್ರಗಳ ಮೇಲೆ ಹೆಚ್ಚಿನ ಒತ್ತನ್ನು ನೀಡುತ್ತದೆ.

1. ಪ್ರವಾಸಿ ತಾಣಗಳ ಅಭಿವೃದ್ಧಿ
2. ಪ್ರವಾಸೋದ್ಯಮ ವಲಯ (Tourism Circuit) ಅಭಿವೃದ್ಧಿ
3. ಪ್ರವಾಸೋದ್ಯಮ ಅಭಿವೃದ್ಧಿ ನಿಧಿ
4. ಆತಿಥ್ಯ ಮೂಲಸೌಕರ್ಯ
5. ಪ್ರವಾಸೋದ್ಯಮ ಭೂ ಬ್ಯಾಂಕ್ ಬಳಕೆ (Land Bank utilization)
6. ದೂರದ ಪ್ರದೇಶಗಳಲ್ಲಿ ಹಾಲಿ ಇರುವ ಮೂಲಸೌಕರ್ಯಗಳನ್ನು ಬಳಸಿಕೊಳ್ಳುವುದು.
7. ಪ್ರವಾಸಿ ತಾಣಗಳು ಮತ್ತು ಪ್ರವಾಸೋದ್ಯಮ ಸ್ವತ್ತುಗಳ ದತ್ತು ಸ್ವೀಕಾರ ಮತ್ತು ನಿರ್ವಹಣೆ
8. ರಸ್ತೆಬದಿ ಸೌಕರ್ಯಗಳು
9. ಪೂರಕ ಮೂಲಸೌಕರ್ಯದ ನೆರವು

ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್‌ಧಿ ನಿಗಮ ನಿಯಮಿತವು ಕರ್ನಾಟಕದಲ್ಲಿ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ನೋಡೆಲ್ ಏಜೆನ್ಸಿಯಾಗಿರತಕ್ಕದ್ದು. ಮೇಲೆ ಉಲ್ಲೇಖಿಸಿದ ಪ್ರಮುಖ ಕ್ಷೇತ್ರಗಳಿಗೆ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿಯನ್ನು ಕಲ್ಪಿಸುವುದರ ಜೊತೆಗೆ, ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ನಿಯಮಿತವು, ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಅಥವಾ ಜಂಟಿ ಉದ್ಯಮಗಳಂತಹ (Joint Venture) ಸೂಕ್ತ ವಿಧಾನಗಳ ಮೂಲಕ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ನೆರವನ್ನು ನೀಡತಕ್ಕದ್ದು. ಕರ್ನಾಟಕದಾದ್ಯಂತ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಅನುಕೂಲ ಕಲ್ಪಿಸಲು ಬೃಹತ್ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರೋತ್ಸಾಹ ನೀಡತಕ್ಕದ್ದು.

### 5.1 ಪ್ರವಾಸಿ ಸ್ಥಳಗಳ ಅಭಿವೃದ್ಧಿ

ಪ್ರವಾಸಿ ತಾಣಗಳ ಒಂದು ಸಮಗ್ರ ಅಭಿವೃದ್ಧಿಯು (Comprehensive Development) ಆ ತಾಣದ ಸಮಗ್ರ ಅಭಿವೃದ್ಧಿ, ಅಗತ್ಯವಾದ ಮೂಲಸೌಕರ್ಯ ಅಭಿವೃದ್ಧಿ, ಎಲ್ಲಾ ರೀತಿಯ ಪೂರಕ ಸೌಲಭ್ಯ ಅಭಿವೃದ್ಧಿ ಮತ್ತು ನಿರ್ವಹಣೆ ಒಳಗೊಂಡಿರುತ್ತದೆ.

ಪ್ರವಾಸಿಗರಿಗೆ ಒಂದು ಅವಿಸ್ಮರಣೀಯ ಅನುಭವವನ್ನು ಕಟ್ಟಿಕೊಡಲು ನಿರ್ಣಾಯಕವಾಗಿರುವಂತಹ ಸ್ವಚ್ಛ ಶೌಚಾಲಯಗಳು, ತ್ಯಾಜ್ಯ ನಿರ್ವಹಣಾ ವ್ಯವಸ್ಥೆ, ವಿಶ್ರಾಂತಿ ತಾಣಗಳು, ಪಾರ್ಕಿಂಗ್ ಸೌಲಭ್ಯ, ಸಂಪರ್ಕ ರಸ್ತೆ ಅಭಿವೃದ್ಧಿ, ಮಾಹಿತಿ ಕಿಯೋಸ್ಕ್ ಗಳು ಮತ್ತು ಇತರೆ ಸಾರ್ವಜನಿಕ ಸೇವೆಗಳು ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಸಮನ್ವಯಗೊಳಿಸುವುದಕ್ಕಾಗಿ ಕರ್ನಾಟಕ





ಪ್ರವಾಸೋದ್ಯಮ ಮೂಲಸೌಕರ್ಯ ನಿಗಮ ನಿಯಮಿತವು ನೋಡಲ್ ಏಜೆನ್ಸಿಯಾಗಿರತಕ್ಕದ್ದು. ಅಲ್ಲದೆ, ಸಂಭಾವ್ಯ ಪ್ರವಾಸೋದ್ಯಮ ಅವಕಾಶಗಳ ಅಭಿವೃದ್ಧಿ ಮತ್ತು ಪರಿಣಾಮಕಾರಿ ಅಂತರ ಇಲಾಖಾ ಸಮನ್ವಯಕ್ಕಾಗಿ ಕರ್ನಾಟಕ ಪ್ರವಾಸೋದ್ಯಮವು ಇತರೆ ಸರ್ಕಾರಿ ಇಲಾಖೆಗಳು ಮತ್ತು ಏಜೆನ್ಸಿಗಳ ಸಹಯೋಗವನ್ನು ಕೋರತಕ್ಕದ್ದು.

ಪ್ರವಾಸೋದ್ಯಮ ಇಲಾಖೆಯು, ಪ್ರವಾಸಿಗರಿಗೆ ಒಂದು ಸಮಗ್ರ ಮತ್ತು ಸರ್ವಾಂಗೀಣ ಅನುಭವವನ್ನು ಕಟ್ಟಿಕೊಡಲು ಆದ್ಯತೆ ಆಧಾರಿತ ಅಭಿವೃದ್ಧಿಗಾಗಿ Focus Tourism Destinations (FTDs) ಗುರುತಿಸಿದೆ. ಕರ್ನಾಟಕದ ಈ FTD ಪಟ್ಟಿಯು ಕಾಲಕಾಲಕ್ಕೆ ಇಲಾಖೆಯು ಅಧಿಸೂಚಿಸಿದಂತೆ ಇರತಕ್ಕದ್ದು. ಈ ಪ್ರವಾಸೋದ್ಯಮ ನೀತಿಯ ಆರಂಭದಲ್ಲಿದ್ದ ಪ್ರಮುಖ ಪ್ರವಾಸಿ ತಾಣಗಳ ಪಟ್ಟಿಯನ್ನು ವಿಭಾಗ-13-ಪರಿಭಾಷೆಗಳು ವಿಭಾಗದಲ್ಲಿ ನೀಡಲಾಗಿದೆ.

### 5.2 ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿ

ಇಲಾಖೆಯು ಈ ಮುಂದಿನ ಪರಿಕಲ್ಪನೆಗಳ ಅಡಿಯಲ್ಲಿ ಪ್ರಮುಖ ಪ್ರವಾಸೋದ್ಯಮ ಸ್ಥಳಗಳನ್ನು ಸಂಯೋಜಿಸುವ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿಯನ್ನು ಕೈಗೊಳ್ಳತಕ್ಕದ್ದು.

- ಕರಾವಳಿ ಪ್ರವಾಸೋದ್ಯಮ
- ಪರಿಸರ ಪ್ರವಾಸೋದ್ಯಮ
- ಪಾರಂಪರಿಕ ಪ್ರವಾಸೋದ್ಯಮ
- ಗ್ರಾಮೀಣ ಪ್ರವಾಸೋದ್ಯಮ
- ಆಧ್ಯಾತ್ಮಿಕ ಪ್ರವಾಸೋದ್ಯಮ
- ವನ್ಯಜೀವಿ ಪ್ರವಾಸೋದ್ಯಮ

### 5.3 ಪ್ರವಾಸೋದ್ಯಮ ಅಭಿವೃದ್ಧಿ ನಿಧಿ :-

ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ನೆರವು ನೀಡುವುದಕ್ಕೆ ಕಾರ್ಯತಂತ್ರ ಮಧ್ಯಸ್ಥಿಕೆಯಾಗಿ ಕೆಟಿಐಎಲ್ ಅಡಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿದೆ.ಈ ನಿಧಿಯನ್ನು ಆತಿಥ್ಯ ಮೂಲಸೌಕರ್ಯ, ಪ್ರವಾಸೋದ್ಯಮ ಭೂ ಬ್ಯಾಂಕ್ ಮತ್ತು ಪೂರಕ ಮೂಲಸೌಕರ್ಯ ನೆರವಿಗೆ ಸಂಬಂಧಿಸಿದ ಯೋಜನೆಗಳಿಗೆ ಬಳಸತಕ್ಕದ್ದು, ಪ್ರವಾಸೋದ್ಯಮ ಅಭಿವೃದ್ಧಿ ನಿಧಿಯನ್ನು ಹೆಚ್ಚಿಸಲು ರಾಜ್ಯ ಸರ್ಕಾರದ ಆಯವ್ಯಯ ಹಂಚಿಕೆಯ ಜೊತೆಗೆ ಬಾಹ್ಯ ಸಂಪನ್ಮೂಲಗಳಿಂದಲೂ ನೆರವನ್ನು ಕೋರಬಹುದು.


ಶೃಂಗೇರಿ

### 5.4 ಆತಿಥ್ಯ ಮೂಲಸೌಕರ್ಯಗಳು

ಕರ್ನಾಟಕದಾದ್ಯಂತ ಇರುವ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸೋದ್ಯಮ ಮೂಲಸೌಕರ್ಯಗಳ ಅಭಿವೃದ್ಧಿಗೆ ನೀಡುವ ಪ್ರಾಮುಖ್ಯತೆಯು, ಹೆಚ್ಚುತ್ತಿರುವ ಪ್ರವಾಸಿಗರ ಭೇಟಿಗಳಿಂದಾಗಿ ಉಂಟಾಗುತ್ತಿರುವ ಹೆಚ್ಚಿನ ಪ್ರಮಾಣದ ಬೇಡಿಕೆಯನ್ನು ಪೂರೈಸುವುದಕ್ಕೆ, ಆತಿಥ್ಯ ವಲಯದ ಹೂಡಿಕೆಗಳೊಂದಿಗೆ ಹೊಂದಿಕೆಯಾಗತಕ್ಕದ್ದು. ಪ್ರವಾಸೋದ್ಯಮ ಇಲಾಖೆಯು ಹೊಂದಿರುವ ಭೂ ಬ್ಯಾಂಕ್‌ನಲ್ಲಿ ಆತಿಥ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪ್ರವಾಸೋದ್ಯಮ ಅಭಿವೃದ್ಧಿ ನಿಧಿಯನ್ನು ಬಳಸಿಕೊಳ್ಳತಕ್ಕದ್ದು.

### 5.5 ಪ್ರವಾಸೋದ್ಯಮ ಭೂ ಬ್ಯಾಂಕ್‌ನ ಬಳಕೆ

ಪ್ರವಾಸೋದ್ಯಮ ಇಲಾಖೆಯ ಭೂ ಬ್ಯಾಂಕ್‌ನಲ್ಲಿ ಸಾಮಾನ್ಯವಾದ ಮೂಲಸೌಕರ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪ್ರವಾಸೋದ್ಯಮ ಅಭಿವೃದ್ಧಿ ನಿಧಿಯನ್ನು ಬಳಕೆ ಮಾಡಿಕೊಳ್ಳತಕ್ಕದ್ದು. ಭೂ-ಬ್ಯಾಂಕ್‌ನಲ್ಲಿ ಸಾಮಾನ್ಯವಾದ ಮೂಲಸೌಕರ್ಯಗಳ ಸೌಲಭ್ಯಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಒಂದು ಪಾರದರ್ಶಕ ಟೆಂಡರ್ ಪ್ರಕ್ರಿಯೆಯ ಮೂಲಕ ಭೂ-ಗುತ್ತಿಗೆ ನೀತಿಯ ಅಡಿಯಲ್ಲಿ ಖಾಸಗಿ ಉದ್ಯಮಿಗಳಿಗೆ ಭೂಮಿಯನ್ನು ಗುತ್ತಿಗೆ ನೀಡತಕ್ಕದ್ದು. ಭೂಮಿಯ ಗುತ್ತಿಗೆಯಿಂದ ಗಳಿಸಿದ ಆದಾಯವನ್ನು ಮತ್ತಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಮತ್ತು ಇತರೆ ಸ್ಥಳಗಳಲ್ಲಿ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಅಭಿವೃದ್ಧಿ ನಿಧಿಗೆ ಜಮೆ ಮಾಡತಕ್ಕದ್ದು. ಭೂಮಿ ಗುತ್ತಿಗೆ ನೀತಿಗೆ ಸಂಬಂಧಿಸಿದ ಅನುಷ್ಠಾನದ ಮಾರ್ಗಸೂಚಿಗಳನ್ನು ಈ ನೀತಿಯ ಕಾರ್ಯಾಚರಣಾ ಮಾರ್ಗಸೂಚಿಗಳಲ್ಲಿ ಒದಗಿಸತಕ್ಕದ್ದು.

### 5.6 ಈಗಾಗಲೇ ಇರುವ ಸೌಕರ್ಯಗಳನ್ನು ಪ್ರವಾಸೋದ್ಯಮಕ್ಕೆ ಬಳಸುವುದು.

ಕರ್ನಾಟಕದ ಕೆಲವು ದೂರದ ಪ್ರದೇಶಗಳು ಸಾಕಷ್ಟು ಅತ್ಯುತ್ತಮ ಪ್ರವಾಸೋದ್ಯಮ ಅಂತಃಸತ್ವ ಹೊಂದಿದ್ದರೂ, ಅಂತಹ ಪ್ರವಾಸಿ ತಾಣಗಳಿಗೆ ಹೊಸದಾಗಿ ಸೌಲಭ್ಯಗಳನ್ನು ಸೃಜಿಸಲು ಕಷ್ಟ ಸಾಧ್ಯ ವಾಗಿರಬಹುದು. ಅಂತಹ ಸ್ಥಳಗಳಿಗೆ, ಇತರೆ ಇಲಾಖೆಗಳ ಮತ್ತು ಕರ್ನಾಟಕ ಸರ್ಕಾರದ ಒಡೆತನದ/ ಕಾರ್ಯಾಚರಣೆಯ ಹಾಲಿ ಇರುವ ಅತಿಥಿಗೃಹಗಳನ್ನು ಮತ್ತು ಇತರ ಸೂಕ್ತವೆನಿಸಬಹುದಾದ ಸೌಲಭ್ಯಗಳನ್ನು ಪ್ರವಾಸೋದ್ಯಮ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಕರ್ನಾಟಕ ಪ್ರವಾಸೋದ್ಯಮವು ಅಂತಹ ಸ್ವತ್ತು / ಸೌಲಭ್ಯಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಪ್ರವಾಸೋದ್ಯಮ ಉದ್ದೇಶಗಳಿಗಾಗಿ ಅವುಗಳನ್ನು ಬಳಸಿಕೊಳ್ಳತಕ್ಕದ್ದು.





**5.7 ಪ್ರವಾಸಿ ತಾಣಗಳು ಮತ್ತು ಸ್ವತ್ತುಗಳ ದತ್ತು ಸ್ವೀಕಾರ ಮತ್ತು ನಿರ್ವಹಣೆ :-**

ಕರ್ನಾಟಕ ಪ್ರವಾಸೋದ್ಯಮವು ಕರ್ನಾಟಕದ ಪ್ರವಾಸಿ ತಾಣಗಳ ಮತ್ತು ಸ್ವತ್ತುಗಳ ದತ್ತು ಸ್ವೀಕಾರ, ನಿರ್ವಹಣೆ ಅಥವಾ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತಹ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡತಕ್ಕದ್ದು. ಅಂತಹ ಕಾರ್ಯಕ್ರಮಗಳು ಸ್ಥಳೀಯ ಸಮುದಾಯಗಳಿಗೆ ಮತ್ತು ಕಾರ್ಪೋರೇಟ್ ಸಂಸ್ಥೆಗಳಿಗೆ ಹೆಚ್ಚಿನ ಮಾಲೀಕತ್ವದ ಭಾವನೆಯನ್ನು (Greater sense of ownership) ಮೂಡಿಸುವ ಮೂಲಕ ಹಾಲಿ ಇರುವ ಪ್ರವಾಸಿ ಸ್ಥಳಗಳು ಮತ್ತು ಸ್ವತ್ತುಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಸುಧಾರಿಸುವುದು ಸಾಧ್ಯವಾಗುತ್ತದೆ.

**5.8 ರಸ್ತೆಬದಿ ಸೌಲಭ್ಯಗಳು**

ಕರ್ನಾಟಕದಲ್ಲಿ ಪ್ರವಾಸಿಗರ ಅನುಕೂಲತೆ ಮತ್ತು ಸುರಕ್ಷತೆಯನ್ನು ಸುಧಾರಿಸುವುದಕ್ಕೆ ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಮುಖ್ಯ ರಸ್ತೆಗಳುದ್ದಕ್ಕೂ, ರಸ್ತೆಬದಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

ರಸ್ತೆಬದಿ ಸೌಲಭ್ಯಗಳ ಸಂಕೀರ್ಣಗಳನ್ನು ಪ್ರಾಥಮಿಕವಾಗಿ ಈ ಮುಂದಿನ 3 ಮಾದರಿಗಳಲ್ಲಿ ಯಾವುದಾದರೊಂದು ಮಾದರಿಯ ಮೂಲಕ ಕರ್ನಾಟಕದಾದ್ಯಂತ ಅಭಿವೃದ್ಧಿಪಡಿಸತಕ್ಕದ್ದು:

1. **ಫ್ರಾಂಚೈಸಿ ಮಾದರಿ:** ಕರ್ನಾಟಕ ಪ್ರವಾಸೋದ್ಯಮ ಬ್ರಾಂಡ್‌ನ ಅಡಿಯಲ್ಲಿ ಉದ್ಯಮಿಗಳು ಖಾಸಗಿ ಭೂಮಿಯಲ್ಲಿ ನಿರ್ಮಿಸಿ ನಿರ್ವಹಿಸುವ ರಸ್ತೆಬದಿ ಸೌಕರ್ಯಗಳು.
2. **ಗ್ರೀನ್ ಫೀಲ್ಡ್ ಮಾದರಿ:** ಪಾರದರ್ಶಕ ಟೆಂಡರ್ ಪ್ರಕ್ರಿಯೆಯ ಮೂಲಕ ಆಯ್ಕೆಯಾದ ಉದ್ಯಮಿಗಳು ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿಯಲ್ಲಿ ನಿರ್ಮಿಸಿ, ನಿರ್ವಹಿಸುವ ರಸ್ತೆಬದಿ ಸೌಲಭ್ಯಗಳು.
3. **ಬ್ರೌನ್‌ಫೀಲ್ಡ್ ಮಾದರಿ:** ಇಲಾಖೆಯೇ ತನ್ನ ಭೂಮಿಯಲ್ಲಿ ನಿರ್ಮಿಸಿ, ಅದರ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ, ಪಾರದರ್ಶಕ ಟೆಂಡರ್ ಪ್ರಕ್ರಿಯೆಯ ಮೂಲಕ, ಆಯ್ಕೆಯಾದ ಉದ್ಯಮಿಗಳಿಗೆ ಗುತ್ತಿಗೆ ನೀಡುವ ರಸ್ತೆಬದಿ ಸೌಲಭ್ಯಗಳು.

   ರಸ್ತೆ ಬದಿ ಸೌಲಭ್ಯಗಳ ಅಭಿವೃದ್ಧಿಗಾಗಿ ಇತರೆ ಸೂಕ್ತವೆನಿಸಬಹುದಾದ ಮಾದರಿಗಳನ್ನು ಸಹ ಅನುಸರಿಸಬಹುದು. ಈ ನೀತಿಯ ಕಾರ್ಯಾಚರಣೆಯ ಮಾರ್ಗಸೂಚಿಗಳು, ಕರ್ನಾಟಕದ ರಸ್ತೆಬದಿ ಸೌಲಭ್ಯ ನೀತಿಯನ್ನು ವಿವರಿಸತಕ್ಕದ್ದು.


**5.9 ಪೂರಕ ಮೂಲಸೌಕರ್ಯಗಳ ನೆರವು**

ಪ್ರವಾಸೋದ್ಯಮ ಇಲಾಖೆಯು, ಯೋಜನೆಗಳ ಅಗತ್ಯತೆಯನ್ನು ಆಧರಿಸಿ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ಪೂರಕ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ನೆರವನ್ನು ಒದಗಿಸತಕ್ಕದ್ದು. ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ಪೂರಕ ಮೂಲಸೌಕರ್ಯಗಳ ನೆರವಿನ ಕುರಿತ ವಿವರಗಳಿಗಾಗಿ ವಿಭಾಗ-14 - ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು - ಇದರಲ್ಲಿ ವಿವರಿಸಿದೆ.

ಕೆಟಿಐಎಲ್ ಸಂಸ್ಥೆಯು ಪ್ರತಿಯೊಂದು ಪ್ರಕರಣಗಳ ಅಗತ್ಯತೆಗಳನ್ನಾಧರಿಸಿ, ಹೊಸ ಮೂಲಸೌಕರ್ಯಗಳನ್ನು ಸ್ಥಾಪಿಸುವ ಅಥವಾ ಲಭ್ಯವಿದ್ದಲ್ಲಿ ಪ್ರವಾಸೋದ್ಯಮ ಯೋಜನೆಗಳ ನಿರ್ದಿಷ್ಟ ಅಗತ್ಯತೆಗಳಿಗೆ ಅನುಸಾರವಾಗಿ ಹಾಲಿ ಇರುವ ಪೂರಕ ಮೂಲಸೌಕರ್ಯಗಳನ್ನು ಬಲಪಡಿಸುವ ಮೂಲಕ ಪ್ರವಾಸೋದ್ಯಮ ಯೋಜನೆಗಳಿಗೆ ನೆರವನ್ನು ಒದಗಿಸತಕ್ಕದ್ದು. ಈ ನೀತಿಯ ಕಾರ್ಯಾಚರಣೆ ಮಾರ್ಗಸೂಚಿಗಳು ಪೂರಕ ಮೂಲಸೌಕರ್ಯಗಳ ನೆರವು ಪಡೆಯುವ ವಿಧಾನವನ್ನು ವಿವರಿಸತಕ್ಕದ್ದು.



ದೇವಬಾಗ್ ಕಡಲಕಿನಾರೆ




ಅಗಸ್ತ್ಯತೀರ್ಥ ಸರೋವರ, ಬಾದಾಮಿ



# 6 ಪ್ರವಾಸೋದ್ಯಮ ಉತ್ಪನ್ನಗಳು

ಪ್ರಪಂಚದ ಅತ್ಯುತ್ಕೃಷ್ಟ ತಾಣಗಳು ತಮ್ಮ ಬಳಿ ಬರುವ ಪ್ರವಾಸಿಗರಿಗೆ ಅನನ್ಯ ಅನುಭವಗಳನ್ನು ನೀಡುತ್ತವೆ. ಪ್ರವಾಸೋದ್ಯಮ ಉತ್ಪನ್ನಗಳು ಪ್ರವಾಸಿ ತಾಣಗಳಲ್ಲಿ ಅನುಭವ ಆಧಾರಿತ ಪ್ರವಾಸೋದ್ಯಮ ಒದಗಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ವ್ಯಾಪಕ ಪ್ರಮಾಣದ ವೈವಿಧ್ಯಮಯ ಪ್ರವಾಸೋದ್ಯಮ ಉತ್ಪನ್ನ ಗಳಿರುವುದರಿಂದ, ವಿಭಿನ್ನ ಅಭಿರುಚಿಯ ಪ್ರವಾಸಿಗರಿಗೆ ಈ ಪ್ರವಾಸಿ ತಾಣಗಳು ತುಂಬಾ ಅಪೇಕ್ಷಣೀಯವಾಗಿದ್ದು ಧೀರ್ಘ ಕಾಲ ತಂಗುವಿಕೆಗೆ ಮತ್ತು ಮತ್ತೆ, ಮತ್ತೆ ಭೇಟಿ ನೀಡುವಂತೆ ಪ್ರೋತ್ಸಾಹಿಸುತ್ತದೆ.

ಕರ್ನಾಟಕ ಪ್ರವಾಸೋದ್ಯಮವು ತನ್ನ ಪ್ರವಾಸಿ ತಾಣಗಳ ಅಭಿವೃದ್ಧಿಯಲ್ಲಿ ವೈವಿಧ್ಯಮಯ ಪ್ರವಾಸೋದ್ಯಮ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಅಂಶವನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಯಲ್ಲಿ ವಿವಿಧ ಪ್ರವಾಸೋದ್ಯಮ ಉತ್ಪನ್ನಗಳ ಅಭಿವೃದ್ಧಿಗೂ ಸಹ ಆದ್ಯತೆ ನೀಡುವುದು.

ಕರ್ನಾಟಕವು **"ಒಂದು ರಾಜ್ಯ, ಹಲವು ಜಗತ್ತು"** ಎನ್ನುವ ಶೀರ್ಷಿಕೆಯೊಂದಿಗೆ ಪ್ರವಾಸಿಗರಿಗೆ ಅವಿಸ್ಮರಣೀಯ ಅನುಭವಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವ ವೈವಿಧ್ಯಮಯ ಪ್ರವಾಸೋದ್ಯಮ ಅನುಭವಗಳನ್ನು ನೀಡುತ್ತದೆ. ಇಲಾಖೆಯು, ನೀತಿಯ ಅವಧಿಯಲ್ಲಿ, ಪ್ರವಾಸೋದ್ಯಮ ಪರಿಕಲ್ಪನೆಗಳೆಂದು ಉಲ್ಲೇಖಿಸಬಹುದಾದಂತಹ ಈ ಕೆಳಕಂಡ ರೀತಿಯ ಪ್ರವಾಸೋದ್ಯಮ ಪರಿಕಲ್ಪನೆಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಉದ್ದೇಶಿಸುತ್ತದೆ.

1. ಸಾಹಸ ಪ್ರವಾಸೋದ್ಯಮ
2. ಕೃಷಿ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮ
3. ಕಾರವಾನ್ ಪ್ರವಾಸೋದ್ಯಮ
4. ಕರಾವಳಿ ಪ್ರವಾಸೋದ್ಯಮ ಮತ್ತು ಕಡಲತೀರ ಪ್ರವಾಸೋದ್ಯಮ
5. ಸಾಂಸ್ಕೃತಿಕ ಪ್ರವಾಸೋದ್ಯಮ
6. ಪಾರಂಪರಿಕ ಪ್ರವಾಸೋದ್ಯಮ
7. ಪರಿಸರ ಪ್ರವಾಸೋದ್ಯಮ (ನೈಸರ್ಗಿಕ ಪ್ರವಾಸೋದ್ಯಮ ಮತ್ತು ವನ್ಯಜೀವಿ ಪ್ರವಾಸೋದ್ಯಮ ಒಳಗೊಂಡಂತೆ)
8. ಶಿಕ್ಷಣ ಪ್ರವಾಸೋದ್ಯಮ
9. ಚಲನಚಿತ್ರ ಪ್ರವಾಸೋದ್ಯಮ
10. ಪಾಕಶಾಸ್ತ್ರ ಪ್ರವಾಸೋದ್ಯಮ (Gastronomy- Cuisine)
11. ಒಳನಾಡು ಜಲ ಪ್ರವಾಸೋದ್ಯಮ (Inland water)
12. ನೌಕಯಾನ ವಿಹಾರ ಪ್ರವಾಸೋದ್ಯಮ
13. ಮೈಸ್ ಮತ್ತು ವ್ಯಾವಹಾರಿಕ ಪ್ರವಾಸೋದ್ಯಮ (MICE and Business Tourism)
14. ಗಣಿಗಾರಿಕೆ ಪ್ರವಾಸೋದ್ಯಮ
15. ಆಧ್ಯಾತ್ಮಿಕ ಪ್ರವಾಸೋದ್ಯಮ (ಧಾರ್ಮಿಕ ಪ್ರವಾಸೋದ್ಯಮ ಮತ್ತು ಆಧ್ಯಾತ್ಮಿಕ ಸ್ಥಳಗಳ ವೀಕ್ಷಣೆಯನ್ನು ಒಳಗೊಂಡಂತೆ)
16. ಕ್ರೀಡಾ ಪ್ರವಾಸೋದ್ಯಮ
17. ಸ್ವಾಸ್ಥ್ಯ ಪ್ರವಾಸೋದ್ಯಮ (Wellness Tourism)
18. ಇತರೆ ಸೂಕ್ತವಾದ ಪ್ರವಾಸೋದ್ಯಮ ಪರಿಕಲ್ಪನೆಗಳು (Other Niche Tourism Themes)

ಮೇಲೆ ಉಲ್ಲೇಖಿಸಿರುವಂತಹ ವಿವಿಧ ಬಗೆಯ ಪ್ರವಾಸೋದ್ಯಮ ಪರಿಕಲ್ಪನೆಗಳಲ್ಲಿ ಕೆಲವು ಸಮರ್ಥವಾದ ಪೂರಕ ವ್ಯವಸ್ಥೆಯನ್ನು ಹೊಂದಿದ್ದರೆ, ಇನ್ನಿತರ ಪರಿಕಲ್ಪನೆಗಳು ಇನ್ನೂ ಆರಂಭಿಕ ಹಂತದಲ್ಲಿಯೇ ಇವೆ. ಆದರೆ, ಕರ್ನಾಟಕದಲ್ಲಿ ಅವುಗಳ ಬೆಳವಣಿಗೆಗೆ ಅಪರಿಮಿತ ಅವಕಾಶಗಳಿವೆ. ಕರ್ನಾಟಕ ಪ್ರವಾಸೋದ್ಯಮವು ಮೇಲೆ ನಮೂದಿಸಿದ ಅಥವಾ ಹೆಚ್ಚಿನ ಪರಿಕಲ್ಪನೆಗಳ ಜೊತೆಗೆ ಕರ್ನಾಟಕದಲ್ಲಿ ಎಲ್ಲಾ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಪ್ರಯತ್ನಿಸತಕ್ಕದ್ದು.

ಕರ್ನಾಟಕ ಸರ್ಕಾರವು, ಕರ್ನಾಟಕದಲ್ಲಿ ಎಲ್ಲಾ ರೀತಿಯ ಪ್ರವಾಸೋದ್ಯಮ ಚಟುವಟಿಕೆಗಳನ್ನು ಬೆಂಬಲಿಸಿ ಪ್ರೋತ್ಸಾಹಿಸಲು ಪ್ರಯತ್ನಿಸತಕ್ಕದ್ದು, ವಿಭಾಗ-14-ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು-ವಿಭಾಗದಲ್ಲಿ ಪಟ್ಟಿಮಾಡಲಾದಂತಹ ನೆರವಿನ ಜೊತೆಗೆ ಕರ್ನಾಟಕದ ವಿವಿಧ ಪ್ರವಾಸೋದ್ಯಮ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಈ ಮುಂದಿನ ನೆರವನ್ನು ಒದಗಿಸತಕ್ಕದ್ದು.


ದಿ ಗೋಲ್ಡನ್ ಚಾರಿಯಟ್

## 6.1 ಸಾಹಸ ಪ್ರವಾಸೋದ್ಯಮ

ಕರ್ನಾಟಕದ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯು ಎಲ್ಲಾ ರೀತಿಯ ಭೂ ಆಧಾರಿತ, ಜಲ ಆಧಾರಿತ ಮತ್ತು ವಾಯು ಆಧಾರಿತ ಸಾಹಸ ಚಟುವಟಿಕೆಗಳ ಅಭಿವೃದ್ಧಿಗೆ ಅದ್ಭುತ ಸಾಧ್ಯತೆಗಳನ್ನು ಸೃಷ್ಟಿಸುತ್ತದೆ. ಕರ್ನಾಟಕದಲ್ಲಿ ಸಾಹಸ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಉತ್ತೇಜಿಸುವುದಕ್ಕಾಗಿ ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ



ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕದ ಸಾಹಸ ಪ್ರವಾಸೋದ್ಯಮದ ನಿರ್ವಾಹಕರೊಂದಿಗೆ ಸಮನ್ವಯವನ್ನು ಸಾಧಿಸತಕ್ಕದ್ದು. ಕರ್ನಾಟಕ ಪ್ರವಾಸೋದ್ಯಮವು, ರಾಜ್ಯದಲ್ಲಿ ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು ಸುಗಮಗೊಳಿಸಲು ಪ್ರಯತ್ನಿಸತಕ್ಕದ್ದು, ಕರ್ನಾಟಕದಲ್ಲಿ ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳ ಕಾರ್ಯಾಚರಣೆಗಾಗಿ ಕಾಲಕಾಲಕ್ಕೆ ವಿಸ್ತೃತವಾದ ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು.

ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಸಾಹಸ ಕ್ರೀಡಾ ಉತ್ಸವಗಳನ್ನು ಆಯೋಜಿಸುವುದಕ್ಕಾಗಿ ಸಾಹಸ ಕ್ರೀಡಾ ನಿರ್ವಾಹಕರನ್ನು ಪಟ್ಟಿ ಮಾಡತಕ್ಕದ್ದು.

### 6.2 ಕೃಷಿ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮ

ಕರ್ನಾಟಕ ಪ್ರವಾಸೋದ್ಯಮವು ರಾಜ್ಯದ ಸಮರ್ಥ ಪ್ರವಾಸಿ ಪರಿಕಲ್ಪನೆಗಳಲ್ಲಿ ಕೃಷಿ ಪ್ರವಾಸೋದ್ಯಮವು ಒಂದೆಂದು ಪರಿಗಣಿಸಿ ಅದನ್ನು ಅಭಿವೃದ್ಧಿಪಡಿಸಿ ಉತ್ತೇಜಿಸಲು ಉದ್ದೇಶಿಸಿರುತ್ತದೆ. ಕರ್ನಾಟಕದಲ್ಲಿ ಕೃಷಿ ಮತ್ತು ಗ್ರಾಮೀಣ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ; ಉತ್ತೇಜಿಸುವುದರಿಂದ ಪ್ರವಾಸಿಗರು ಕೃಷಿ ಮತ್ತು ಬೇಸಾಯದ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿಕೊಳ್ಳಲು ಪ್ರೋತ್ಸಾಹ ನೀಡಿದಂತಾಗುವುದಲ್ಲದೆ, ಸ್ಥಳೀಯ ತಿಂಡಿ-ತಿನಿಸುಗಳು, ಸಂಸ್ಕೃತಿ, ಆಚಾರ-ವಿಚಾರ, ಕಲೆ ಮತ್ತು ಕ್ರೀಡೆ ಮುಂತಾದ ಕರ್ನಾಟಕದ ಗ್ರಾಮೀಣ ಜೀವನದ ವಿವಿಧ ಆಯಾಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಕರ್ನಾಟಕ ಪ್ರವಾಸೋದ್ಯಮವು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹಂತಹಂತವಾಗಿ ಕೃಷಿ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮವನ್ನು ಯಶಸ್ವಿಯಾಗಿ ಕೈಗೆತ್ತಿಕೊಳ್ಳಬಹುದೆಂಬುದನ್ನು ಖಚಿತಪಡಿಸಲು ಪ್ರಯತ್ನಿಸತಕ್ಕದ್ದು. ಆ ಮೂಲಕ ಗ್ರಾಮೀಣ ಸಮುದಾಯಗಳು ಪ್ರವಾಸೋದ್ಯಮದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವ ಪ್ರಮಾಣವನ್ನು ಹೆಚ್ಚಿಸಲು ಮತ್ತು ಪ್ರವಾಸೋದ್ಯಮದಿಂದ ಆಗಬಹುದಾದ ಸಾಮಾಜಿಕ-ಆರ್ಥಿಕ ಲಾಭಗಳನ್ನು ಅವರು ಪಡೆಯಲು ಅನುಕೂಲವಾಗುತ್ತದೆ.

ಈ ನೀತಿಯು ಕೃಷಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಾಗೃತಿ ಮತ್ತು ಸಾಮರ್ಥ್ಯವೃದ್ಧಿಯಂತಹ ಎರಡು ಪ್ರಮುಖ ಸವಾಲುಗಳನ್ನು ಎದುರಿಸುತ್ತದೆ. ಈ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಲು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಸಂಬಂಧಪಟ್ಟ ಇತರೆ ಇಲಾಖೆಗಳ ನೆರವನ್ನು ಕೋರತಕ್ಕದ್ದು. ಗ್ರಾಮೀಣ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ಭಾರತ ಸರ್ಕಾರ ಹಾಗೂ ವಿಶ್ವ ಬ್ಯಾಂಕ್ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಂತಹ ಅಂತರರಾಷ್ಟ್ರೀಯ ಸಂಸ್ಥೆಗಳ ನೆರವನ್ನು ಪಡೆಯಲು ಪ್ರಯತ್ನಿಸತಕ್ಕದ್ದು.

ಕೃಷಿ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನಕ್ಕೆ ಪ್ರವಾಸ ಸೇವಾದಾತರು, ಶೈಕ್ಷಣಿಕ ಸಂಸ್ಥೆಗಳು ಲಾಭರಹಿತ, ಸ್ವಸಹಾಯ ಗುಂಪುಗಳು, ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಸಂಬಂಧಪಟ್ಟ ಹಿತಾಸಕ್ತಿದಾರರೊಂದಿಗೆ ಯಶಸ್ವಿಯಾಗಿ ಸಹಯೋಗ ಹೊಂದುವುದು ಅಗತ್ಯ.

ಕರ್ನಾಟಕ ಪ್ರವಾಸೋದ್ಯಮವು, ಕೃಷಿ ಪ್ರವಾಸೋದ್ಯಮದ ಆಯೋಜನೆಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಪರಿಣಿತ ಪ್ರವಾಸ ಯೋಜಕರು ಮತ್ತು ಪ್ರವಾಸ ಏಜೆಂಟರುಗಳನ್ನು ಬಳಸಿಕೊಳ್ಳಲು ಮತ್ತು ರೈತರಿಗೆ ಹಾಗೂ ಸ್ಥಳೀಯ ಸಮುದಾಯಗಳಿಗೆ ಕೃಷಿ ಪ್ರವಾಸೋದ್ಯಮದ ಬಗ್ಗೆ ತರಬೇತಿಯನ್ನು ನೀಡಲು ಪ್ರಯತ್ನಿಸತಕ್ಕದ್ದು. ಸ್ಥಳೀಯ ಆಹಾರ ಪದಾರ್ಥಗಳು ಮತ್ತು ಕಲೆ, ಕರಕುಶಲ ಕಲೆಗಳಂತಹ ಸ್ಥಳೀಯ ಸರಕುಗಳನ್ನು ಮಾರಾಟ ಮಾಡುವುದಕ್ಕೆ ಅನುವಾಗುವಂತೆ ಸಹ ಕೃಷಿ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರೋತ್ಸಾಹ ನೀಡತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು ಸಂಬಂಧಪಟ್ಟ ಸಂಸ್ಥೆಗಳು ಮತ್ತು ಏಜೆನ್ಸಿಗಳ ಮುಖಾಂತರ ಕೃಷಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿಯನ್ನು ನೀಡಲು ಪ್ರಯತ್ನಿಸತಕ್ಕದ್ದು. ಕೃಷಿ ಪ್ರವಾಸೋದ್ಯಮ ಕಾರ್ಯಕ್ರಮಗಳು ಮತ್ತು ತರಬೇತಿಯನ್ನು ರೂಪಿಸಲು ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಗಳಲ್ಲಿ ಹಾಲಿ ಇರುವ ಸೌಲಭ್ಯಗಳನ್ನು ಹಾಗೂ ಜಿಲ್ಲಾ ಮಟ್ಟದ ಕಛೇರಿಗಳ ನೆರವನ್ನು ಪಡೆಯಬಹುದು.

### 6.3 ಕಾರವಾನ್ ಪ್ರವಾಸೋದ್ಯಮ (Caravan)

ಕಾರವಾನ್ ಪ್ರವಾಸೋದ್ಯಮವು ಪ್ರವಾಸದ ಮಾರ್ಗ ಮತ್ತು ವಸತಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅವಕಾಶಗಳನ್ನು ದೊರಕಿಸಿಕೊಡುವಲ್ಲಿ ಮತ್ತು ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಒಂದು ಹೊಸ ಆಯಾಮವನ್ನು ನೀಡುವ ಸಾಮರ್ಥ್ಯ ಹೊಂದಿದೆ. ಇಲಾಖೆಯು, ಕರ್ನಾಟಕದಲ್ಲಿ ಕಾರವಾನ್ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರೋತ್ಸಾಹ ನೀಡತಕ್ಕದ್ದು ಮತ್ತು ಪ್ರವಾಸೋದ್ಯಮ ಮಂತ್ರಾಲಯವು ಹೊರಡಿಸಿದ ಮಾರ್ಗಸೂಚಿಗಳಿಗನುಸಾರವಾಗಿ ರಾಜ್ಯದ ಪ್ರಮುಖ ಪ್ರವಾಸಿ ಸರ್ಕ್ಯೂಟ್‌ಗಳಲ್ಲಿ ಕಾರವಾನ್ ಉದ್ಯಾನವನಗಳ ಅಭಿವೃದ್ಧಿಗೆ ನೆರವು ನೀಡತಕ್ಕದ್ದು.

ಇಲಾಖೆಯು, ಕಾರವಾನ್ ಪ್ರವಾಸದ ಕಾರ್ಯಾಚರಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಸುಗಮಗೊಳಿಸುವುದಕ್ಕೆ ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯಂತಹ ಸಂಬಂಧಪಟ್ಟ ಪ್ರಾಧಿಕಾರಗಳ ನೆರವನ್ನು ಸಹ ಕೋರತಕ್ಕದ್ದು.

### 6.4 ಕರಾವಳಿ ಪ್ರವಾಸೋದ್ಯಮ ಮತ್ತು ಕಡಲತೀರ ಪ್ರವಾಸೋದ್ಯಮ

ಕರ್ನಾಟಕದಲ್ಲಿ **"ಕರ್ನಾಟಕ ಮಾರಿಟೈಮ್ ಪರ್ಸ್ಪೆಕ್ಟಿವ್ ಪ್ಲಾನ್ ಗೆ"** (Karnataka Maritime Prespective plan)" ಅನುಗುಣವಾಗಿ ಕರ್ನಾಟಕದ ಕರಾವಳಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳತಕ್ಕದ್ದು, ಇದಲ್ಲದೆ ಸ್ವದೇಶ ದರ್ಶನ ಮತ್ತು ಸಾಗರಮಾಲಾದಂತಹ ಕೇಂದ್ರ ಸರ್ಕಾರದ ಯೋಜನೆಗಳ ಮೂಲಕ ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ





ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ನೆರವು ಪಡೆಯತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು ಕರಾವಳಿ ಕರ್ನಾಟಕವನ್ನು ಬಹು ಉತ್ಪನ್ನ ತಾಣವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸತಕ್ಕದ್ದು ಮತ್ತು ವಿರಾಮ, ಮನರಂಜನೆ ಮತ್ತು ಸಾಹಸ ಚಟುವಟಿಕೆಗಳ ಸೌಲಭ್ಯಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಲೂ ಸಹ ಪ್ರಯತ್ನಿಸತಕ್ಕದ್ದು. ಕಡಲ ಪ್ರವಾಸೋದ್ಯಮ ಮತ್ತು ಒಳನಾಡು ಪ್ರವಾಸೋದ್ಯಮಗಳ (Maritime Tourism and Inland Water Tourism) ಅಭಿವೃದ್ಧಿಯೊಂದಿಗೆ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳತಕ್ಕದ್ದು.

ಕರಾವಳಿ ಪ್ರದೇಶದಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ತನಗಿರುವ ಬದ್ಧತೆಗನುಸಾರವಾಗಿ, ಕರ್ನಾಟಕ ಪ್ರವಾಸೋದ್ಯಮವು ರಾಜ್ಯದ ಕಡಲತೀರಗಳಿಗೆ - "BLUE FLAG - ಬ್ಲೂ ಫ್ಲಾಗ್" ಪ್ರಮಾಣಪತ್ರ ಪಡೆಯಲು ಸಂಬಂಧಪಟ್ಟ ರಾಜ್ಯ ಏಜೆನ್ಸಿಗಳಿಗೆ ಬೆಂಬಲ ನೀಡತಕ್ಕದ್ದು.

### 6.5 ಸಾಂಸ್ಕೃತಿಕ ಪ್ರವಾಸೋದ್ಯಮ

ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯು ಪ್ರವಾಸಿಗರಿಗೆ ಕಲಿಯಲು, ಅನ್ವೇಷಿಸಲು ಮತ್ತು ಆನಂದಿಸಲು ಅನುಭವಗಳ ರಾಶಿಯನ್ನೇ ನೀಡುತ್ತದೆ. ಕರ್ನಾಟಕ ಪ್ರವಾಸೋದ್ಯಮವು ಮೂಲ ಶೈಲಿ ಮತ್ತು ನೈಜತೆಯನ್ನು ಸಂರಕ್ಷಿಸುವಾಗ ಕರ್ನಾಟಕದ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸಿ ಉತ್ತೇಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪುರಾತತ್ವ ಇಲಾಖೆ, ಕರ್ನಾಟಕ ರಾಜ್ಯ ಕರಕುಶಲ ಕಲೆಗಳ ಅಭಿವೃದ್ಧಿ ನಿಗಮ ಮತ್ತು ಇತರೆ ಸಂಬಂಧಪಟ್ಟ ಏಜೆನ್ಸಿ / ಇಲಾಖೆಗಳ ನಿಕಟ ಸಮನ್ವಯದೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.



ಸೋಮನ ಕುಣಿತ

#### ಕಾರ್ಯಕ್ರಮಗಳು ಮತ್ತು ಹಬ್ಬಗಳು

ಕರ್ನಾಟಕ ಪ್ರವಾಸೋದ್ಯಮವು ರಾಜ್ಯಾದ್ಯಂತ ಪ್ರಮುಖ ಹಬ್ಬಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಸಕ್ರಿಯವಾಗಿ ಸಮನ್ವಯ ಸಾಧಿಸತಕ್ಕದ್ದು. ಇದರಿಂದ ಕರ್ನಾಟಕ ವಿವಿಧ ಪ್ರವಾಸೋದ್ಯಮ ಪರಿಕಲ್ಪನೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ.

ರಾಜ್ಯದ ಕಲೆ, ಕುಶಲಕಲೆ ಮತ್ತು ತಿಂಡಿ-ತಿನಿಸುಗಳಿಗೆ ಪ್ರಾಮುಖ್ಯತೆಯನ್ನು ನೀಡುವುದರೊಂದಿಗೆ ಕರ್ನಾಟಕದ ಸಂಪದ್ಭರಿತ ಮತ್ತು ವೈವಿಧ್ಯಮಯ ಪರಂಪರೆಯನ್ನು ಪ್ರದರ್ಶಿಸಲು ಕಾಲಕಾಲಕ್ಕೆ ಪ್ರಾದೇಶಿಕ ಮತ್ತು ಸ್ಥಳೀಯ ಹಬ್ಬಗಳನ್ನು ಸಹ ಆಯೋಜಿಸತಕ್ಕದ್ದು. ಜಿಲ್ಲಾ ಮಟ್ಟದ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ತಮ್ಮತಮ್ಮ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳು, ಹಬ್ಬಗಳು ಮತ್ತು ಉತ್ಸವಗಳ ಮೂಲಕ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳನ್ನು ಉತ್ತೇಜಿಸಲು ನೆರವು ನೀಡತಕ್ಕದ್ದು.

#### ಸಾಂಸ್ಕೃತಿಕ ಸ್ವತ್ತುಗಳ ದತ್ತ ಸಂಚಯ (ಡೇಟಾಬೇಸ್)

ಕರ್ನಾಟಕ ಪ್ರವಾಸೋದ್ಯಮವು, ದತ್ತಸಂಚಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಂಸ್ಕೃತಿಕ ಸ್ವತ್ತುಗಳನ್ನು ಮ್ಯಾಪಿಂಗ್ ಮಾಡುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸತಕ್ಕದ್ದು. ಈ ದತ್ತ ಸಂಚಯವು ಕಲಾವಿದರು, ನೃತ್ಯಗಾರರು, ಪ್ರದರ್ಶನ ಕಲೆಗಳು ಮತ್ತು ಕರಕುಶಲಕಾರರು ಮತ್ತಿತರ ಸಾಂಸ್ಕೃತಿಕ ಪ್ರವಾಸೋದ್ಯಮಕ್ಕಾಗಿ ನುರಿತ ಕಾರ್ಯಪಡೆಯ ಆಕರವಾಗಿಯೂ ಕಾರ್ಯನಿರ್ವಹಿಸುತ್ತದೆ.

ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರದರ್ಶಿಸಬಲ್ಲಂತಹ ಸೂಕ್ತ ಪ್ರವಾಸೋದ್ಯಮ ಸ್ವತ್ತುಗಳನ್ನು ಗುರುತಿಸಲು ಮತ್ತು ಪ್ರವಾಸೋದ್ಯಮ ಪ್ಯಾಕೇಜ್‌ಗಳನ್ನು ಅಭಿವೃದ್ಧಿಪಡಿಸಲು ಪ್ರವಾಸಿ ಸೇವಾದಾತರು ಕರ್ನಾಟಕ ಪ್ರವಾಸೋದ್ಯಮದ ಮಾಹಿತಿಯನ್ನು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುವುದು.

#### ಪ್ರದರ್ಶನ ಕಲೆ ಮತ್ತು ಸಂಸ್ಕೃತಿಯ ಪ್ರದರ್ಶನ

ಕರ್ನಾಟಕ ಪ್ರವಾಸೋದ್ಯಮವು ಕನ್ನಡ ಸಂಸ್ಕೃತಿ ಇಲಾಖೆಯ ನಿಕಟ ಸಹಯೋಗದೊಂದಿಗೆ ಪ್ರವಾಸಿಗರು ಸಾಂಸ್ಕೃತಿಕ ಪ್ರವಾಸೋದ್ಯಮದ ಅನುಭವ ಪಡೆಯುವುದಕ್ಕೆ ಮತ್ತು ಭಾಗವಹಿಸುವುದಕ್ಕೆ ಅವರಿಗೆ ಸೂಕ್ತವಾದಂತಹ ಸೌಲಭ್ಯಗಳನ್ನು, ಸ್ಥಳಾವಕಾಶಗಳನ್ನು ಮತ್ತು ವೇದಿಕೆಗಳನ್ನು ಕಲ್ಪಿಸಿಕೊಡತಕ್ಕದ್ದು. ಅಂಥ ಸೌಲಭ್ಯಗಳನ್ನು, ಸ್ಥಳಾವಕಾಶಗಳನ್ನು ಮತ್ತು ವೇದಿಕೆಗಳನ್ನು ಕಲ್ಪಿಸಿಕೊಡಲು ಅಥವಾ ಒದಗಿಸಲು ಸಂಬಂಧಪಟ್ಟ ಏಜೆನ್ಸಿಗಳ ಮತ್ತು ಪ್ರಮುಖ ಹಿತಾಸಕ್ತಿದಾರರ ನೆರವನ್ನು ಪಡೆಯತಕ್ಕದ್ದು.

#### ಮೈಸೂರನ್ನು ಸಾಂಸ್ಕೃತಿಕ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು

ಮೈಸೂರನ್ನು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪರಿಗಣಿಸಲಾಗಿದೆ ಮತ್ತು ಇಲಾಖೆಯು ಈ ನಗರವನ್ನು

ಜಾಗತಿಕವಾಗಿ ಪ್ರಮುಖ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು. ಇದಲ್ಲದೆ, ಇಲಾಖೆಯು, ಸಾಂಸ್ಕೃತಿಕ ಚಟುವಟಿಕೆಗಳು, MICE ಮತ್ತು ಮನರಂಜನೆಗಳಿಗಾಗಿ ವರ್ಷಪೂರ್ತಿ ಸೌಲಭ್ಯಗಳನ್ನು ಒದಗಿಸಿ, ಮೈಸೂರಿನಲ್ಲಿರುವ KEA ವಸ್ತುಪ್ರದರ್ಶನ ಮೈದಾನವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ನೆರವು ನೀಡತಕ್ಕದ್ದು.

### ಸಾಂಸ್ಕೃತಿಕ ಗ್ರಾಮದ ಅಭಿವೃದ್ಧಿ

ಕರ್ನಾಟಕ ಪ್ರವಾಸೋದ್ಯಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗುರುತಿಸಿ ಸೂಚಿಸಿರುವ ಸ್ಥಳಗಳಲ್ಲಿ ಸಾಂಸ್ಕೃತಿಕ ಗ್ರಾಮವನ್ನು ಅಭಿವೃದ್ಧಿಪಡಿಸುವುದಕ್ಕೆ ಅನುಕೂಲಮಾಡಿಕೊಡತಕ್ಕದ್ದು.

## 6.6 ಪರಿಸರ ಪ್ರವಾಸೋದ್ಯಮ

ಕರ್ನಾಟಕದಲ್ಲಿ ಪರಿಸರ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನಕ್ಕೆ ಸಂಬಂಧಿಸಿದಂತೆ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಲಿಮಿಟೆಡ್ (ಜೆಎಲ್‌ಆರ್) ನೋಡಲ್ ಏಜೆನ್ಸಿಯಾಗಿರತಕ್ಕದ್ದು.

ಪರಿಸರ ಪ್ರವಾಸೋದ್ಯಮದಲ್ಲಿ ಪ್ರಕೃತಿ ಪ್ರವಾಸೋದ್ಯಮ ಮತ್ತು ವನ್ಯಜೀವಿ ಪ್ರವಾಸೋದ್ಯಮವೂ ಸೇರಿರತಕ್ಕದ್ದು. ಪರಿಸರ ಪ್ರವಾಸೋದ್ಯಮದ ಕಾರ್ಯಚಟುವಟಿಕೆಗಳು, ಜೀವವೈವಿಧ್ಯತೆ ಮತ್ತು ಸ್ವಾಭಾವಿಕ ಪರಿಸರದ ಸಂರಕ್ಷಣೆ ಮತ್ತು ಸುಸ್ಥಿರತೆಯ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೇಲೆ ಕೇಂದ್ರೀಕೃತವಾಗಿರತಕ್ಕದ್ದು. ತಾಣಗಳ ಸಾಮರ್ಥ್ಯ (Destination carrying capacity) ಮತ್ತು ಕರ್ನಾಟಕ ಸರ್ಕಾರ ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಮತ್ತು ಮಾರ್ಗಸೂಚಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ತರುವಾಯ ಪರಿಸರ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನ ಕಾರ್ಯ ಕೈಗೊಳ್ಳತಕ್ಕದ್ದು.

ಕರ್ನಾಟಕದಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ (Karnataka Eco-Tourism Board) ನಿಕಟ ಸಹಭಾಗಿತ್ವದೊಂದಿಗೆ ಪರಿಸರ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲಾಗುವುದು.

## 6.7 ಶಿಕ್ಷಣ ಪ್ರವಾಸೋದ್ಯಮ

ಇಲಾಖೆಯು, ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅರಿವು ಮೂಡಿಸಲು ಮತ್ತು ಅವರನ್ನು ಸೂಕ್ಷ್ಮಗ್ರಾಹಿಗಳನ್ನಾಗಿಸಲು ಶಾಲಾ ಪ್ರವಾಸಗಳನ್ನು ಆಯೋಜಿಸಲು 'ಕರ್ನಾಟಕ ಚಿಣ್ಣರ ದರ್ಶನ ಕಾರ್ಯಕ್ರಮಕ್ಕೆ' ಈಗಿರುವ ಅವಕಾಶವನ್ನು ವಿಸ್ತರಿಸುವುದಕ್ಕಾಗಿ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯೊಂದಿಗೆ ಸಮನ್ವಯ ಸಾಧಿಸತಕ್ಕದ್ದು. ಕಾರ್ಯಕ್ರಮವು ನಿರ್ದಿಷ್ಟವಾಗಿ ಕೃಷಿ ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮ ಪರಂಪರೆ ಪ್ರವಾಸೋದ್ಯಮ ಮತ್ತು ಪರಿಸರ


ಕಾಫಿ ತೋಟ, ಕೊಡಗು

ಪ್ರವಾಸೋದ್ಯಮಕ್ಕೆ ವಿಶೇಷ ಆದ್ಯತೆಯನ್ನು ನೀಡತಕ್ಕದ್ದು.

ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಮತ್ತು ಉತ್ಪಾದನೆಯ ಪ್ರಮುಖ ಕೇಂದ್ರ, ರಾಜ್ಯವನ್ನು ಬಿಂಬಿಸಲು ಕರ್ನಾಟಕ ಶೈಕ್ಷಣಿಕ, ಕೈಗಾರಿಕೆ ಮತ್ತು ಉತ್ಪಾದನಾ ಕೇಂದ್ರಗಳಿಗೆ ಶೈಕ್ಷಣಿಕ ಪ್ರವಾಸಗಳನ್ನು ರೂಪಿಸಲು ಪ್ರೋತ್ಸಾಹಿಸತಕ್ಕದ್ದು.

ಕೃಷಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ, ಇಲಾಖೆಯು ಕೃಷಿ ಪ್ರವಾಸೋದ್ಯಮ ಯೋಜನೆಗಳಿಗೆ ಜ್ಞಾನಾಧಾರಿತ ಪ್ರವಾಸಗಳನ್ನು ಉತ್ತೇಜಿಸಲು ಪ್ರೋತ್ಸಾಹಿಸತಕ್ಕದ್ದು. ಕರ್ನಾಟಕದಲ್ಲಿ ಐದನೆಯ ತರಗತಿಯಿಂದ ಏಳನೆಯ ತರಗತಿಯವರೆಗೆ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸಗಳಲ್ಲಿ ಕೃಷಿ ಪ್ರವಾಸೋದ್ಯಮ ಯೋಜನೆಗಳನ್ನು ಸೇರಿಸಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಇಲಾಖೆಯ ಸಹಯೋಗದೊಂದಿಗೆ ವಿಶೇಷ ಪ್ರಯತ್ನಗಳನ್ನು ಮಾಡತಕ್ಕದ್ದು.

ಆರ್ & ಡಿ, ಐಟಿ ಮತ್ತು ಉತ್ಪಾದನೆಯ ಪ್ರಧಾನ ಕೇಂದ್ರವಾಗಿ ರಾಜ್ಯದ ಸ್ಥಾನಮಾನವನ್ನು ಪ್ರದರ್ಶಿಸಲು ಕರ್ನಾಟಕದ ಶೈಕ್ಷಣಿಕ, ಕೈಗಾರಿಕಾ ಮತ್ತು ಉತ್ಪಾದನಾ ಕೇಂದ್ರಗಳಿಗೆ ಶೈಕ್ಷಣಿಕ ಪ್ರವಾಸಗಳ ಅಭಿವೃದ್ಧಿಯನ್ನು ಸಹ ಪ್ರೋತ್ಸಾಹಿಸಲಾಗುವುದು.

## 6.8 ಚಲನಚಿತ್ರ ಪ್ರವಾಸೋದ್ಯಮ

ಇಲಾಖೆಯು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಕರ್ನಾಟಕದ ಸ್ಥಳಗಳನ್ನು ಪ್ರದರ್ಶಿಸುವ ಉದ್ದೇಶದಿಂದ ಕರ್ನಾಟಕದ ರಮಣೀಯ ಪ್ರವಾಸೋದ್ಯಮ ತಾಣಗಳಲ್ಲಿ ಚಿತ್ರೀಕರಣ ಮಾಡಲು ಪ್ರಖ್ಯಾತ ಚಲನಚಿತ್ರ ನಿರ್ಮಾಪಕರು ಮತ್ತು ನಿರ್ದೇಶಕರುಗಳನ್ನು ಪ್ರೋತ್ಸಾಹಿಸುವುದಕ್ಕೆ ಕರ್ನಾಟಕ ಚಲನಚಿತ್ರ ಪ್ರವಾಸೋದ್ಯಮ ನೀತಿ - 2018ರ ಅಡಿಯಲ್ಲಿ ವಿತ್ತೀಯ ಪ್ರೋತ್ಸಾಹಕಗಳನ್ನು ನೀಡಲಾಗುತ್ತದೆ. ಕರ್ನಾಟಕ ಚಲನಚಿತ್ರ ಪ್ರವಾಸೋದ್ಯಮ





ನೀತಿ, 2018ರ ಮಾರ್ಗಸೂಚಿಗಳನ್ನು, ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ರ ಅನುಗುಣವಾಗಿ ಹೊರಡಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ಕರ್ನಾಟಕದಲ್ಲಿ ಚಲನಚಿತ್ರ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕೆ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸಹಯೋಗವನ್ನು ಕೋರತಕ್ಕದ್ದು.

ಕರ್ನಾಟಕ ಚಲನಚಿತ್ರ ಪ್ರವಾಸೋದ್ಯಮ ನೀತಿ 2018ಕ್ಕೆ ಸಂಬಂಧಿಸಿದ ಅನುಮೋದನೆಗಳು ಮತ್ತು ಅನುಮತಿಗಳಿಗಾಗಿ ಆನ್‌ಲೈನ್ ಸಿಂಗಲ್ ವಿಂಡೋ ಯಾಂತ್ರಿಕ ವ್ಯವಸ್ಥೆಯನ್ನು (Single window mechanism) ರಚಿಸಲು ಒತ್ತು ನೀಡಲಾಗುವುದು.

### 6.9 ಪಾಕಶಾಸ್ತ್ರ (ಅಡುಗೆ ಕಲೆ) ಪ್ರವಾಸೋದ್ಯಮ

ಕರ್ನಾಟಕ ಪ್ರವಾಸೋದ್ಯಮವು ರಾಜ್ಯದ ಶ್ರೀಮಂತ ಪಾಕಪದ್ಧತಿಯ ಪರಂಪರೆಯನ್ನು ಪ್ರದರ್ಶಿಸುವ ಪಾಕಶಾಸ್ತ್ರ ಪ್ರಯೋಗಗಳನ್ನು ಅಭಿವೃದ್ಧಿಪಡಿಸಲು ಮತ್ತು ಉತ್ತೇಜಿಸಲು ಪ್ರಯತ್ನಿಸುತ್ತದೆ. ಕರ್ನಾಟಕ ಪ್ರವಾಸೋದ್ಯಮವು ಶ್ರೀಮಂತ ಆಹಾರ ಪರಂಪರೆಯನ್ನು ಬಿಂಬಿಸುವ ಕಾರ್ಯಕ್ರಮಗಳು ಮತ್ತು ಉತ್ಸವಗಳನ್ನು ಹಾಗು ರಾಜ್ಯದ ಪಾಕಪದ್ಧತಿಯಲ್ಲಿ ಆಧುನಿಕ ಆವಿಷ್ಕಾರಗಳನ್ನು ಬೆಂಬಲಿಸಲು ಪ್ರಯತ್ನಿಸತಕ್ಕದ್ದು.

ಕರ್ನಾಟಕದಲ್ಲಿ ವೈನ್ ಪ್ರವಾಸೋದ್ಯಮ ಪ್ಯಾಕೇಜ್‌ಗಳನ್ನು ಅಭಿವೃದ್ಧಿ ಪಡಿಸಲು ಮತ್ತು ರಾಜ್ಯವನ್ನು ಭಾರತದ ಅತ್ಯುತ್ಕೃಷ್ಟ ವೈನ್ ಪ್ರವಾಸೋದ್ಯಮ ಸ್ಥಾನವಾಗಿ ನೆಲೆಗೊಳಿಸಲು ಕರ್ನಾಟಕ ವೈನ್ ಬೋರ್ಡ್‌ನೊಂದಿಗೆ ಸಹಯೋಗ ಪಡೆದುಕೊಳ್ಳತಕ್ಕದ್ದು. ಅಲ್ಲದೆ, ಕಾಫಿ ಪ್ರವಾಸೋದ್ಯಮ ಪ್ಯಾಕೇಜ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಕರ್ನಾಟಕವನ್ನು ಭಾರತದ ಪ್ರಮುಖ ಕಾಫಿ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಲು ಭಾರತದ ಕಾಫಿ ಮಂಡಳಿಯೊಂದಿಗೆ ಸಹಯೋಗ ಹೊಂದಲು ಸಹ ಪ್ರಯತ್ನಿಸತಕ್ಕದ್ದು.


ಪಟ್ಟದಕಲ್ಲು

### 6.10 ಪಾರಂಪರಿಕ ಪ್ರವಾಸೋದ್ಯಮ :

ಕರ್ನಾಟಕದ ಶ್ರೀಮಂತ ಪರಂಪರೆಯು, ಕರ್ನಾಟಕದ ಪ್ರವಾಸೋದ್ಯಮಕ್ಕೆ ಬಲವಾದ ಜಾಗತಿಕ ಸ್ಥಾನಮಾನವನ್ನು ಕಲ್ಪಿಸುವಲ್ಲಿ ಪ್ರಮುಖ ಚಾಲಕ ಶಕ್ತಿಯಾಗಿದೆ. ಕರ್ನಾಟಕ ಪ್ರವಾಸೋದ್ಯಮವು ರಾಜ್ಯದಲ್ಲಿ ಪಾರಂಪರಿಕ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮತ್ತು ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯೊಂದಿಗೆ ಸಹಯೋಗವನ್ನು ಪಡೆಯಲು ಪ್ರಯತ್ನಿಸತಕ್ಕದ್ದು. ಯೋಜನೆ ಮತ್ತು ಅಭಿವೃದ್ಧಿ ಕಾರ್ಯಚಟುವಟಿಕೆಗಳಲ್ಲಿ ಕರ್ನಾಟಕ ಪರಂಪರೆಯ ಸಂರಕ್ಷಣೆ ಮತ್ತು ಸುರಕ್ಷತೆ ಮತ್ತು ಉತ್ತೇಜನಕ್ಕೆ ಹೆಚ್ಚಿನ ಪರಿಗಣನೆಯನ್ನು ನೀಡಲಾಗಿದೆ ಎಂಬುದನ್ನು ಖಚಿತಪಡಿಸಲು ನಗರಾಭಿವೃದ್ಧಿ ಇಲಾಖೆ, ನಗರ ಮತ್ತು ಪಟ್ಟಣ ಯೋಜನಾ ನಿರ್ದೇಶನಾಲಯ ಮತ್ತು ಇತರೆ ಸಂಬಂಧಪಟ್ಟ ಪ್ರಾಧಿಕಾರಿಗಳು ಮತ್ತು ಏಜೆನ್ಸಿಗಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಹ ಪ್ರಯತ್ನಿಸತಕ್ಕದ್ದು.

#### ಪಾರಂಪರಿಕ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಾಯೋಗಿಕ ಯೋಜನೆ

ಕರ್ನಾಟಕ ಪ್ರವಾಸೋದ್ಯಮವು ರಾಜ್ಯದ 4-5 ಪಾರಂಪರಿಕ ಪ್ರವಾಸೋದ್ಯಮ ತಾಣಗಳನ್ನು ಅವುಗಳ ಪೂರ್ಣ ಸಾಮರ್ಥ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಲು ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.

#### ವಿಶ್ವ ಪಾರಂಪರಿಕ ತಾಣಗಳು

ಕರ್ನಾಟಕದಲ್ಲಿ ಮೂರು UNESCO ವಿಶ್ವ ಪಾರಂಪರಿಕ ತಾಣಗಳಿವೆ. ಮತ್ತಷ್ಟು ಪಾರಂಪರಿಕ ಸ್ಥಳಗಳನ್ನು, ಗಮನಾರ್ಹ ರೀತಿಯಲ್ಲಿ ಅಂತರರಾಷ್ಟ್ರೀಯ ಮಾನ್ಯತೆ ತರುವ ಮೂಲಕ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ, ಅವುಗಳನ್ನೂ ಸಹ UNESCO ವಿಶ್ವ ಪಾರಂಪರಿಕ ಸ್ಥಳಗಳ ಪಟ್ಟಿಯಲ್ಲಿ ಸೇರಿಸಲು ಪ್ರಯತ್ನಿಸತಕ್ಕದ್ದು.

#### ಪಾರಂಪರಿಕ ಸ್ಥಳಗಳ ದಾಖಲೀಕರಣ

ಕರ್ನಾಟಕ ಪ್ರವಾಸೋದ್ಯಮವು ಸಂಬಂಧಪಟ್ಟ ಪ್ರಾಧಿಕಾರಗಳ ಸಹಯೋಗದೊಂದಿಗೆ ರಾಜ್ಯದಲ್ಲಿ ಪಾರಂಪರಿಕ ಮಹತ್ವವುಳ್ಳ ಎಲ್ಲಾ ಸ್ಥಳಗಳನ್ನು ದಾಖಲೀಕರಿಸಲು ಪ್ರಯತ್ನಿಸತಕ್ಕದ್ದು.

#### ಪಾರಂಪರಿಕ ಪ್ರವಾಸಿ ವಲಯಗಳ ಅಭಿವೃದ್ಧಿ

ಕರ್ನಾಟಕ ಪ್ರವಾಸೋದ್ಯಮವು ಪ್ರಮುಖ ಪಾರಂಪರಿಕ ನೆಲೆಗಳಲ್ಲಿ ಪಾರಂಪರಿಕ ಪ್ರವಾಸೋದ್ಯಮದ ಸಮಗ್ರ ಮತ್ತು ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕರ್ನಾಟಕದಲ್ಲಿ ರಾಜ್ಯ ಏಜೆನ್ಸಿಗಳ ಸಹಯೋಗದೊಂದಿಗೆ ಪ್ರವಾಸಿ ಸ್ಥಳಗಳ ಸುತ್ತಲೂ ಪಾರಂಪರಿಕ ಪ್ರವಾಸೋದ್ಯಮ ವಲಯಗಳನ್ನು ಸ್ಥಾಪಿಸಲು ಪ್ರಯತ್ನಿಸತಕ್ಕದ್ದು. ಪಾರಂಪರಿಕ ಪ್ರವಾಸೋದ್ಯಮ ವಲಯಗಳ ಅವಶ್ಯಕತೆಗಳ ಮೌಲ್ಯಮಾಪನದ ಆಧಾರದ ಮೇಲೆ, ಸಮುಚಿತ ಪ್ರಾಧಿಕಾರಿಗಳಿಗೆ ನಿಯಂತ್ರಣ, ನಿಯಮಗಳಂತಹ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ, ಕರ್ನಾಟಕ ಪ್ರವಾಸೋಧ್ಯಮ ಮಾಹಿತಿಯನ್ನು ಒದಗಿಸುವುದು.





**ಪಾರಂಪರಿಕ ಮಹತ್ವದ ಕಟ್ಟಡಗಳು ಮತ್ತು ಸ್ವತ್ತುಗಳ ಸಂರಕ್ಷಣೆ:**

ಕರ್ನಾಟಕ ಪ್ರವಾಸೋದ್ಯಮವು, ಕರ್ನಾಟಕದಲ್ಲಿ ಪಾರಂಪರಿಕ ಮಹತ್ವದ ಕಟ್ಟಡಗಳ ಸಂರಕ್ಷಣೆ ಮತ್ತು ಸುರಕ್ಷತೆಗಾಗಿ 'ಸಂರಕ್ಷಣೆ' ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಅಗತ್ಯ ನೆರವನ್ನು ಒದಗಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ಕರ್ನಾಟಕದಲ್ಲಿ ಪಾರಂಪರಿಕ ಮಹತ್ವದ ಕಟ್ಟಡಗಳನ್ನು ಮತ್ತು ಸ್ವತ್ತುಗಳನ್ನು ಗುರುತಿಸಲು ಸ್ಥಳೀಯ ಸಂಸ್ಥೆಗಳೊಂದಿಗೂ ಸಹ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಅವುಗಳ ಸಂರಕ್ಷಣೆ ಮತ್ತು ಪುನಶ್ಚೇತನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು. ಈ ಕ್ರಮಗಳಲ್ಲಿ, ಕಟ್ಟಡ/ಸ್ವತ್ತುಗಳನ್ನು ಪ್ರವಾಸೋದ್ಯಮ ಉದ್ದೇಶಕ್ಕಾಗಿ ಸ್ವಾಧೀನ ಪಡೆಯಲು, ಬಳಸಿಕೊಳ್ಳಲು, ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವುದು ಸಹ ಒಳಗೊಂಡಿರುತ್ತದೆ.

**ಕಾರ್ಪೋರೇಟ್ ಮತ್ತು ಸಮುದಾಯದ ಬೆಂಬಲ**

ಕರ್ನಾಟಕ ಪ್ರವಾಸೋದ್ಯಮವು ಕಾರ್ಪೋರೇಟ್ ಸಂಸ್ಥೆಗಳ ನೆರವು ಮತ್ತು ಸಮುದಾಯ ಚಾಲಿತ ಉಪಕ್ರಮಗಳ ಮೂಲಕ ಸಾಂಸ್ಕೃತಿಕ ಮತ್ತು ಪಾರಂಪರಿಕ ಪ್ರವಾಸೋದ್ಯಮ ಸ್ವತ್ತುಗಳ ನಿರ್ವಹಣೆ ಮತ್ತು ಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ಸುಗಮಗೊಳಿಸಲು ಪ್ರಯತ್ನಿಸತಕ್ಕದ್ದು. ಪಾರಂಪರಿಕ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನಕ್ಕೆ ನೆರವು ನೀಡಲು ಕರ್ನಾಟಕ ಪ್ರವಾಸೋದ್ಯಮವು ಹೆಚ್ಚುವರಿ ಹಣಕಾಸು ನೆರವಿನ ಮೂಲಗಳನ್ನು ಸಹ ಅವಲಂಬಿಸಬಹುದು.

## 6.11 ಒಳನಾಡು ಜಲ ಪ್ರವಾಸೋದ್ಯಮ (Inland Water Tourism)

ಕರ್ನಾಟಕ ಪ್ರವಾಸೋದ್ಯಮವು ಒಳನಾಡು ಜಲಮಾರ್ಗಗಳ ಅಭಿವೃದ್ಧಿಗಾಗಿ, ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರದಂತಹ ಸಂಬಂಧಪಟ್ಟ ಏಜೆನ್ಸಿಗಳಿಗೆ ಅಗತ್ಯ ನೆರವು ಮತ್ತು ಅನುಕೂಲ ಕಲ್ಪಿಸಿಕೊಡತಕ್ಕದ್ದು.



ಸರ್ಕಾರಿ ಏಜೆನ್ಸಿಗಳು ಮತ್ತು ಉದ್ಯಮ ಹಿತಾಸಕ್ತಿದಾರರ ಸಹಯೋಗದೊಂದಿಗೆ ಒಳನಾಡು ಜಲ ಪ್ರವಾಸೋದ್ಯಮವನ್ನು, ಅದರಲ್ಲೂ ವಿಶೇಷವಾಗಿ ಹೌಸ್‌ಬೋಟ್‌ಗಳನ್ನು ಉತ್ತೇಜಿಸತಕ್ಕದ್ದು.

## 6.12 ಕಡಲತೀರದ ಪ್ರವಾಸೋದ್ಯಮ (Maritime Tourism)

ಕರ್ನಾಟಕ ಪ್ರವಾಸೋದ್ಯಮವು, ನೌಕಾ ವಿಹಾರ, ಕ್ರೀಡಾ ದೋಣಿ ವಿಹಾರ, ದೋಣಿ ವಿಹಾರ ಮತ್ತು ಕಡಲ ಸಂಬಂಧಿ ಕ್ರೀಡೆಗಳಂತಹ ಕಡಲತೀರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಶಕ್ತಗೊಳಿಸುವುದಕ್ಕೆ ಸಂಬಂಧಿಸಿದ ಭೂ ಕೇಂದ್ರಿತ ಸೇವೆಗಳು ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗೆ ಅಗತ್ಯವಾದ ಬೆಂಬಲ ಮತ್ತು ಸೌಲಭ್ಯವನ್ನು ಒದಗಿಸತಕ್ಕದ್ದು. ಅಲ್ಲದೆ, ಕರ್ನಾಟಕ ಪ್ರವಾಸೋದ್ಯಮವು ಕರ್ನಾಟಕದಲ್ಲಿ ಕಡಲತೀರ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕರ್ನಾಟಕದ ಉದ್ದಕ್ಕೂ ಇರುವ ಕರಾವಳಿಯನ್ನು ಬಳಸಿಕೊಳ್ಳುವುದಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಸಮನ್ವಯ ಸಾಧಿಸುವುದು ಮತ್ತು ಕಡಲತೀರದ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ನೌಕಾ ವಿಹಾರದ ಆಪರೇಟರುಗಳೊಂದಿಗೆ ಮತ್ತು ಇತರ ಹಿತಾಸಕ್ತಿದಾರರೊಂದಿಗೆ ಸಮನ್ವಯ ಸಾಧಿಸಲು ಪ್ರಯತ್ನಿಸತಕ್ಕದ್ದು.

## 6.13 ಮೈಸ್ ಮತ್ತು ವ್ಯವಹಾರಿಕ ಪ್ರವಾಸೋದ್ಯಮ

ಬೆಂಗಳೂರು ನಗರದಲ್ಲಿ ವ್ಯವಹಾರಿಕ ಪ್ರವಾಸೋದ್ಯಮಕ್ಕೆ ಅತ್ಯುತ್ತಮ ಅವಕಾಶಗಳಿದ್ದು, ಅದನ್ನು ಭಾರತದ ಪ್ರಮುಖ MICE (MICE-Meetings, Incentives, Conferences and Exhibitions) ಕೇಂದ್ರವಾಗಿ ಉತ್ತೇಜಿಸತಕ್ಕದ್ದು. ಕರ್ನಾಟಕ ಪ್ರವಾಸೋದ್ಯಮವು ಬೆಂಗಳೂರು ಮತ್ತು ಕರ್ನಾಟಕದ ಇತರೆ ನಗರಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮಾರಂಭಗಳನ್ನು ತರಲು ಅವುಗಳಿಗೆ ಸಂಬಂಧಿಸಿದ ಬಿಡ್ಡಿಂಗ್ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮೈಸ್ ಉದ್ಯಮದಲ್ಲಿನ ಖ್ಯಾತ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮದ MICE ಯೋಜನೆಗಳ ಕಾರ್ಯಸಾಧ್ಯತೆಯನ್ನು ವಿಸ್ತರಿಸಲು ಕರ್ನಾಟಕದ ಹೋಟೆಲ್ ಮತ್ತು ಸಾರಿಗೆ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಲು ಉದ್ಯಮಿಗಳಿಗೆ ನೆರವು ನೀಡತಕ್ಕದ್ದು. ಮೈಸ್ ಕಾರ್ಯಕ್ರಮಗಳೊಂದಿಗೆ, ಕಾರ್ಯಕ್ರಮ ಪೂರ್ವ ಅಥವಾ ಕಾರ್ಯಕ್ರಮೋತ್ತರ ವಿರಾಮ ಕಾರ್ಯಚಟುವಟಿಕೆಗಳ ಭಾಗವಾಗಿ ಗ್ರಾಹಕಸ್ನೇಹಿ ಪ್ರವಾಸಗಳನ್ನು ಮತ್ತು ಪ್ಯಾಕೇಜ್‌ಗಳನ್ನು ಉತ್ತೇಜಿಸಲು ಪ್ರವಾಸ ಪ್ರವರ್ತಕರು ಮತ್ತು ಪ್ರವಾಸ ಏಜೆನ್ಸಿಗಳನ್ನು ಪ್ರೋತ್ಸಾಹಿಸತಕ್ಕದ್ದು. ಪ್ರವಾಸಿ ತಾಣಗಳಲ್ಲಿ Destination Wedding Packages ಆಯೋಜಿಸಲು ಸೂಕ್ತ ತಾಣಗಳನ್ನು ಗುರುತಿಸಿ ಪ್ರಾಯೋಗಿಕವಾಗಿ ಅಭಿವೃದ್ಧಿ ಪಡಿಸಲು ಪ್ರೋತ್ಸಾಹಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಅಥವಾ ಜಂಟಿ ಉದ್ಯಮ (JV- Joint Venture) ವಿಧಾನಗಳಂತಹ ಸಮುಚಿತ ಯೋಜನಾ

ನಿರ್ಮಾಣ ವ್ಯವಸ್ಥೆಗಳ ಮೂಲಕ ರಾಜ್ಯಾದ್ಯಂತ ಸೂಕ್ತ ಸ್ಥಳಗಳಲ್ಲಿ ಮೈಸ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸತಕ್ಕದ್ದು. ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ ಮತ್ತು ಇತರ ಸಂಬಂಧಪಟ್ಟ ಇತರೆ ಇಲಾಖೆಗಳು ಮತ್ತು ಏಜೆನ್ಸಿಗಳ ಸಹಯೋಗದ ಮೂಲಕ ಸಮಾವೇಶ ಕೇಂದ್ರಗಳು ಮತ್ತು ಮೈಸ್ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸತಕ್ಕದ್ದು.

### 6.14 ಗಣಿಗಾರಿಕೆ ಪ್ರವಾಸೋದ್ಯಮ

ಹೆಚ್ಚು ಖನಿಜ ಸಂಪದ್ಭರಿತವಾದ ಭಾರತದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದಲ್ಲಿ ಸಕ್ರಿಯ ಹಾಗೂ ತೆರವಾದ ಗಣಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವು ರಾಜ್ಯದಲ್ಲಿ ಗಣಿಗಾರಿಕೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಮಹತ್ವದ ಅವಕಾಶಗಳನ್ನು ಒದಗಿಸುತ್ತದೆ. ತೆರವಾದ ಅಥವಾ ಕೈಬಿಟ್ಟ ಗಣಿಗಳನ್ನು ಪುನಃ ಬಳಸುವುದರಿಂದ ಸ್ಥಳೀಯ ಆರ್ಥಿಕ ವ್ಯವಸ್ಥೆಯನ್ನು ಪುನಃಶ್ಚೇತನಗೊಳಿಸಬಹುದಲ್ಲದೆ, ಉದ್ಯೋಗ ಸೃಜನೆ ಮತ್ತು ಪರಿಸರ ಪ್ರವಾಸೋದ್ಯಮದ ಬಗ್ಗೆ ಜಾಗೃತಿಯನ್ನು ಮೂಡಿಸುವುದಕ್ಕೂ ಸಹ ನೆರವಾಗಬಹುದು. ಕರ್ನಾಟಕ ಪ್ರವಾಸೋದ್ಯಮವು ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಇತರೆ ಇಲಾಖೆಗಳು ಹಾಗೂ ಹಿತಾಸಕ್ತಿದಾರರ ಸಹಭಾಗಿತ್ವದೊಂದಿಗೆ ಅವುಗಳನ್ನು ಪ್ರವಾಸೋದ್ಯಮ ತಾಣಗಳನ್ನಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸತಕ್ಕದ್ದು.

### 6.15 ಆಧ್ಯಾತ್ಮಿಕ ಪ್ರವಾಸೋದ್ಯಮ

ಕರ್ನಾಟಕದ ವಿವಿಧ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಗಳನ್ನು ಪರಿಗಣನೆಗೆ ತೆಗೆದುಕೊಂಡು ಆಧ್ಯಾತ್ಮಿಕ ಪ್ರವಾಸೋದ್ಯಮ ವಲಯಗಳ ಸೃಜನೆಗಾಗಿ ನೆರವನ್ನು ನೀಡತಕ್ಕದ್ದು. ಕರ್ನಾಟಕ ಪ್ರವಾಸೋದ್ಯಮವು ಅಂತಹ ಆಧ್ಯಾತ್ಮಿಕ ಪ್ರವಾಸಿ ತಾಣಗಳಲ್ಲಿ ವಸತಿ ಸೌಲಭ್ಯಗಳು ಮತ್ತು ಪ್ರವಾಸಿ ಸೌಲಭ್ಯಗಳ ಲಭ್ಯತೆ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸತಕ್ಕದ್ದು. ರಾಜ್ಯದಲ್ಲಿನ 60 ವರ್ಷ ವಯಸ್ಸಿಗೂ ಮೇಲ್ಪಟ್ಟ ಮತ್ತು ಬಡತನ ರೇಖೆಗಿಂತ ಕೆಳಗಿರುವ ಆಯ್ದ ಫಲಾನುಭವಿಗಳು ಹೆಸರಾಂತ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಲು ಸಾಧ್ಯವಾಗುವಂತೆ 'ಜೀವನ ಚೈತ್ರ ಯಾತ್ರೆ' ಕಾರ್ಯಕ್ರಮದಡಿ ಅವಕಾಶ ಕಲ್ಪಿಸತಕ್ಕದ್ದು.

### 6.16 ಕ್ರೀಡಾ ಪ್ರವಾಸೋದ್ಯಮ

ಕರ್ನಾಟಕಕ್ಕೆ ಪ್ರಮುಖವಾದ ಕ್ರೀಡಾ ಕಾರ್ಯಕ್ರಮಗಳನ್ನು ಮತ್ತು ಬ್ರಾಂಡ್‌ಗಳನ್ನು ಆಕರ್ಷಿಸುವುದಕ್ಕೆ, ಇಲಾಖೆಯು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯೊಂದಿಗೆ ಸಮನ್ವಯ ಸಾಧಿಸತಕ್ಕದ್ದು. ಕರ್ನಾಟಕದಲ್ಲಿ ಪ್ರಮುಖ ಕ್ರೀಡಾ ಕಾರ್ಯಕ್ರಮಗಳು ನಡೆಯುವಾಗ ಪ್ರವಾಸೋದ್ಯಮ ಕೇಂದ್ರಿತ ಚಟುವಟಿಕೆಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಸಂಬಂಧಪಟ್ಟ ಹಿತಾಸಕ್ತಿದಾರರೊಂದಿಗೆ ಸಮನ್ವಯವನ್ನು ಸಾಧಿಸತಕ್ಕದ್ದು.

ಇದರ ಜೊತೆಗೆ, ಕರ್ನಾಟಕ ಪ್ರವಾಸೋದ್ಯಮವು, ದೋಣಿವಿಹಾರ, ಶಿಲಾರೋಹಣ (ಬೌಲ್ಡರಿಂಗ್), ಕ್ರಿಕೆಟ್, ಕಾಲ್ಚೆಂಡು (football), ದೀರ್ಘನಡಿಗೆ (ಮ್ಯಾರಾಥಾನ್), ಟೆನ್ನಿಸ್, ಗಾಲ್ಫ್, ಓಟದ ಸ್ಪರ್ಧೆ, ದೋಣಿ ವಿಹಾರ, ಮುಂತಾದಂತಹ ಕ್ರೀಡೆ ಆಧಾರಿತ ಚಟುವಟಿಕೆಗಳನ್ನು ಒಳಗೊಂಡ ಪ್ರವಾಸಿ ಪ್ಯಾಕೇಜ್‌ಗಳ ಅಭಿವೃದ್ಧಿಗಾಗಿ ಸಂಬಂಧಪಟ್ಟ ಏಜೆನ್ಸಿಗಳೊಂದಿಗೆ ಕಾರ್ಯ ನಿರ್ವಹಿಸತಕ್ಕದ್ದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕದ ಸಾಂಪ್ರದಾಯಿಕ ಕ್ರೀಡೆಗಳಿಗೆ ಸಹ ಪ್ರೋತ್ಸಾಹ ನೀಡತಕ್ಕದ್ದು.

### 6.17 ಸ್ವಾಸ್ಥ್ಯ ಪ್ರವಾಸೋದ್ಯಮ (Wellness Tourism)

ಕರ್ನಾಟಕ ಪ್ರವಾಸೋದ್ಯಮವು ಭಾರತದಲ್ಲಿ ಕರ್ನಾಟಕವನ್ನು ಅತ್ಯುತ್ತಮ ಸ್ವಾಸ್ಥ್ಯ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸುವುದಕ್ಕೆ ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ (ಆಯುಷ್) ಇಲಾಖೆಯೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ಪ್ರತಿಷ್ಠಿತ ಸ್ವಾಸ್ಥ್ಯ ಪ್ರವಾಸೋದ್ಯಮ ಸೇವಾ ಪೂರೈಕೆದಾರರು, ಸ್ವಾಸ್ಥ್ಯ ಕೇಂದ್ರಗಳು ಮತ್ತು ಸ್ವಾಸ್ಥ್ಯ ರೆಸಾರ್ಟ್‌ಗಳ ಸಹಯೋಗದೊಂದಿಗೆ ಪ್ರವಾಸಿಗರಿಗಾಗಿ ಆಕರ್ಷಕ ಪ್ಯಾಕೇಜ್‌ಗಳನ್ನು ವಿನ್ಯಾಸಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು.

ಪ್ರಚಾರ ಸಾಮಗ್ರಿಗಳು ಮತ್ತು ಡಿಜಿಟಲ್ ವೇದಿಕೆಗಳು ಸೇರಿದಂತೆ ಸೂಕ್ತ ಸಂಪರ್ಕ ಮಾಧ್ಯಮಗಳ ಮೂಲಕ ಕರ್ನಾಟಕದಲ್ಲಿ ಸ್ವಾಸ್ಥ್ಯ ಪ್ರವಾಸೋದ್ಯಮ ಸಂಬಂಧಿತ ಕೊಡುಗೆಗಳ ಬಗ್ಗೆ ಮಾಹಿತಿಯನ್ನು ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

### 6.18 ಇತರ ಸ್ಥಾಪಿತ ಪ್ರವಾಸೋದ್ಯಮ ಪರಿಕಲ್ಪನೆಗಳು

ಮೇಲೆ ಹೇಳಲಾದ ಪ್ರವಾಸೋದ್ಯಮ ಪರಿಕಲ್ಪನೆಗಳ ಜೊತೆಗೆ, 'ಒಂದು ರಾಜ್ಯ ಹಲವು ಜಗತ್ತುಗಳು' ಎಂಬ ಬ್ರಾಂಡ್‌ಗೆ ಮತ್ತಷ್ಟು ಮೆರಗನ್ನು ನೀಡುವ ಇತರೆ ಪ್ರಚಲಿತ ಪ್ರವಾಸೋದ್ಯಮ ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆಯೂ ಸಹ ಪರಿಶೀಲಿಸತಕ್ಕದ್ದು.

ಹೆಲಿ ಟೂರಿಸಂ, ಫಿಶಿಂಗ್ ಟೂರಿಸಂ, ಶಾಪಿಂಗ್ ಫೆಸ್ಟಿವಲ್ಸ್, ವಿಜ್ಞಾನ ಟೂರಿಸಂ, ವೆಡ್ಡಿಂಗ್ ಟೂರಿಸಂ ಸೇರಿದಂತೆ ಹಲವು ಪ್ರಮುಖ ಪ್ರವಾಸೋದ್ಯಮ ಥೀಮ್ ಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯ ವನ್ನು ಕರ್ನಾಟಕ ಹೊಂದಿದೆ. ಕರ್ನಾಟಕ ಪ್ರವಾಸೋದ್ಯಮ ಇಂತಹ ಪ್ರವಾಸೋದ್ಯಮ ದ ಅಭಿವೃದ್ಧಿಗೆ ಅಗತ್ಯ ಸೌಲಭ್ಯ ಮತ್ತು ಮಾರ್ಗದರ್ಶನವನ್ನು ನೀಡಬೇಕು.



# 7 ಕೌಶಲ್ಯಾಭಿವೃದ್ಧಿ


ಬೀದರ್ ಕೋಟೆ

ಮುನ್ನೋಟ - 2025 ಗುರಿಗಳಿಗೆ ಸಂಬಂಧಪಟ್ಟಂತಹ, ಕರ್ನಾಟಕ ಪ್ರವಾಸೋದ್ಯಮ ಬೆಳವಣಿಗೆಯು, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮತ್ತು ಗುಣಮಟ್ಟ ಉದ್ಯೋಗಾವಕಾಶಗಳನ್ನು ಸೃಜಿಸಲು ಅವಕಾಶವನ್ನು ಕಲ್ಪಿಸುತ್ತದೆ. ಪ್ರವಾಸೋದ್ಯಮ ವಲಯದ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ನಿರೀಕ್ಷಿತ ವೃದ್ಧಿ ತಲುಪಲು ಕರ್ನಾಟಕಕ್ಕೆ ಸೂಕ್ತ ಮಾನವ ಸಂಪನ್ಮೂಲದ ಅಡಿಪಾಯವನ್ನು ಕಲ್ಪಿಸುವ ಅಗತ್ಯವಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25 ಇದು, ಕರ್ನಾಟಕ ಪ್ರವಾಸೋದ್ಯಮದ ಅಗತ್ಯತೆಯನ್ನು ಪೂರೈಸಲು ಪ್ರತಿಭಾವಂತ ಮತ್ತು ಪರಿಣಿತ ಕಾರ್ಯಪಡೆಯನ್ನು ಒದಗಿಸುವ ಸಾಮರ್ಥ್ಯವಿರುವ ಒಂದು ಪೂರಕ ವ್ಯವಸ್ಥೆಯನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿರುತ್ತದೆ. ಮಾರ್ಗದರ್ಶನ ನೀಡುವುದಕ್ಕೆ ಮತ್ತು ಪ್ರಗತಿಯ ಮೇಲ್ವಿಚಾರಣೆಗಾಗಿ ಕೈಗಾರಿಕೆ, ಶೈಕ್ಷಣಿಕ (ಅಕಾಡೆಮಿಗಳು) ಮತ್ತು ಪ್ರತಿಷ್ಠಿತ ಕೌಶಲ್ಯಾಭಿವೃದ್ಧಿ ಏಜೆನ್ಸಿಗಳ ಪ್ರತಿನಿಧಿಗಳೊಂದಿಗೆ ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆಯ ಅಡಿಯಲ್ಲಿ ಒಂದು ಕೌಶಲ್ಯಾಭಿವೃದ್ಧಿ ಸಮಿತಿಯನ್ನು ರಚಿಸತಕ್ಕದ್ದು.

### 7.1 ಕರ್ನಾಟಕದ ಕೌಶಲ್ಯ ಕೊರತೆಯ (Skill gap) ಅಧ್ಯಯನ

ವಿವಿಧ ಪ್ರಯಾಣ, ಪ್ರವಾಸೋದ್ಯಮ ಮತ್ತು ಆತಿಥ್ಯ ವಲಯ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಉದ್ಯಮದ ಅಗತ್ಯಗಳನ್ನು ನಿರ್ಣಯಿಸಲು ಮತ್ತು ಮ್ಯಾಪ್ ಮಾಡಲು ಹಾಗೂ ಕರ್ನಾಟಕದ ಪ್ರಮುಖ ಪ್ರವಾಸೋದ್ಯಮ ತಾಣಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳಲು ನಿಯತವಾಗಿ ಕೌಶಲ್ಯದ ಕೊರತೆಯ ಅಂತರ (Skill Gap) ಅಧ್ಯಯನಗಳನ್ನು ನಡೆಸತಕ್ಕದ್ದು. ನುರಿತ ಕಾರ್ಯಪಡೆಗೆ ಸಂಬಂಧಿಸಿದಂತೆ ಪ್ರಸಕ್ತ ಮತ್ತು ವಿಕಾಸಗೊಳ್ಳುತ್ತಿರುವ ಮಾರುಕಟ್ಟೆ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯಾಣ ಮತ್ತು ಪ್ರವಾಸೋದ್ಯಮ (Travel and Tourism Industry) ವ್ಯವಹಾರದ ಪ್ರಸಿದ್ಧ ಸಂಸ್ಥೆಗಳನ್ನು ಸಂಪರ್ಕಿಸತಕ್ಕದ್ದು. ಇಲಾಖೆಯು ಅಧ್ಯಯನದ ಸಂಶೋಧನೆಗಳನ್ನು ಆಧರಿಸಿ ಮತ್ತು ಕೌಶಲ್ಯಾಭಿವೃದ್ಧಿ ಸಮಿತಿಯೊಂದಿಗೆ ಸಮಾಲೋಚನೆ ನಡೆಸಿದ ನಂತರ, ಉದ್ದೇಶಿತ ಕಾರ್ಯತಂತ್ರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

### 7.2 ಕೌಶಲ್ಯ ಉನ್ನತೀಕರಣ, ಮರು-ಕೌಶಲ್ಯ ಮತ್ತು ಅಲ್ಪಾವಧಿ ತರಬೇತಿ

ಪ್ರವಾಸೋದ್ಯಮ ಇಲಾಖೆ ಮತ್ತು ಅದರ ಅಂಗ ಸಂಸ್ಥೆಗಳು, ಪ್ರಯಾಣ, ಪ್ರವಾಸೋದ್ಯಮ ಮತ್ತು ಆತಿಥ್ಯ ಉದ್ದಿಮೆಗಳಿಗಾಗಿ ಕೌಶಲ್ಯ ಉನ್ನತೀಕರಣ, ಮರು ಕೌಶಲ್ಯ ಮತ್ತು ಅಲ್ಪಾವಧಿ ತರಬೇತಿ ಕೋರ್ಸ್‌ಗಳಿಗೆ ಅವಕಾಶ ಕಲ್ಪಿಸತಕ್ಕದ್ದು. ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಪ್ರವಾಸಿ ಮಾರ್ಗದರ್ಶಿಗಳ ಕೌಶಲ್ಯಕ್ಕಾಗಿ ವಿಶೇಷ ಒತ್ತು ನೀಡತಕ್ಕದ್ದು, ಪ್ರವಾಸೋದ್ಯಮದಲ್ಲಿ ಬೇಡಿಕೆಯನ್ನು ಹೆಚ್ಚಿಸಲು, ಕೆಲಸ-ಸಂಯೋಜಿತ (work-integrated) ಕಲಿಕೆಯ ಮಾದರಿಯನ್ನು ಉತ್ತೇಜಿಸತಕ್ಕದ್ದು. ಅನ್ವಯವಾಗುವ ಕಡೆಯಲ್ಲೆಲ್ಲಾ ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯವು ಹೊರಡಿಸಿದ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು. ಈ ಕೋರ್ಸ್‌ಗಳಲ್ಲಿ ಸುರಕ್ಷತೆ ಮತ್ತು ನೈರ್ಮಲ್ಯ ವಿಧಾನಗಳನ್ನು ಒಳಗೊಳ್ಳುವಂತೆ ನೂತನ ಮತ್ತು ವಿವರವಾದ ಪರಿಷ್ಕೃತ ಮಾಡ್ಯೂಲ್‌ಗಳನ್ನು ಅಳವಡಿಸತಕ್ಕದು.

ಈ ಕೋರ್ಸ್‌ಗಳನ್ನು, ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ (IHM), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾವೆಲ್ ಅಂಡ್ ಟೂರಿಸಂ ಮ್ಯಾನೇಜ್‌ಮೆಂಟ್ (IITTM) ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಾಟರ್ ಸ್ಪೋರ್ಟ್ಸ್, ಗೋವಾ (NIWS), ಕೇರಳ ಇನ್‌ಸ್ಟಿಟ್ಯೂಟ್ ಫ್ ಟೂರಿಸಂ ಅಂಡ್ ಟ್ರಾವೆಲ್ ಸ್ಟಡೀಸ್ (KITTS), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (IIMs) ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ (IIFM) ಮುಂತಾದಂತಹ ರಾಷ್ಟ್ರಮಟ್ಟದ ತಾಂತ್ರಿಕ ಸಂಸ್ಥೆಗಳ ಸಹಯೋಗದೊಂದಿಗೆ ಸಿದ್ಧಪಡಿಸಿ ಅಳವಡಿಸತಕ್ಕದು.




ಗೋಳ ಗುಮ್ಮಟ, ವಿಜಯಪುರ



ಪ್ರವಾಸೋದ್ಯಮವು, ಕೌಶಲ್ಯಾಭಿವೃದ್ಧಿ ಸಮಿತಿಯು ಶಿಫಾರಸು ಮಾಡಿದ ಸ್ಥಳಗಳಲ್ಲಿ ಈ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದಕ್ಕೆ ಉದ್ದಿಮೆದಾರರು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಹೊಂದತಕ್ಕದ್ದು. ಕೃಷಿ ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮ, ಪಾರಂಪರಿಕ ಪ್ರವಾಸೋದ್ಯಮ ಮತ್ತು ಕರಾವಳಿ ಪ್ರವಾಸೋದ್ಯಮದಂತಹ ಕರ್ನಾಟಕದ ಪ್ರಮುಖ ಪ್ರವಾಸೋದ್ಯಮ ಪರಿಕಲ್ಪನೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆಯನ್ನು ನೀಡತಕ್ಕದ್ದು.

### 7.3 ಹಂಪಿಯಲ್ಲಿ ಪರಂಪರೆ ಮತ್ತು ಸಂಸ್ಕೃತಿ ಪ್ರವಾಸೋದ್ಯಮ ಕೇಂದ್ರಿತ ಕೋರ್ಸ್‌ಗಳು

ಕರ್ನಾಟಕವು ಜಾಗತಿಕವಾಗಿ ಗುರುತಿಸಲ್ಪಟ್ಟ ವಿಶ್ವ ಪರಂಪರೆಯ ತಾಣಗಳಿಗೆ ನೆಲೆಯಾಗಿದೆ. ಆದುದರಿಂದ, ಹಂಪಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಪಾರಂಪರಿಕ ಮತ್ತು ಸಾಂಸ್ಕೃತಿಕ ಪ್ರವಾಸೋದ್ಯಮ ಕೇಂದ್ರಿತ ಕೋರ್ಸ್‌ಗಳನ್ನು ಆರಂಭಿಕವಾಗಿ ನೀಡತಕ್ಕದ್ದು. ಈ ಕೋರ್ಸ್‌ಗಳನ್ನು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್ಐ) ಮತ್ತು ಇತರೆ ಏಜೆನ್ಸಿಗಳೊಡನೆ ಸಮಾಲೋಚಿಸಿ ರೂಪಿಸತಕ್ಕದ್ದು.



### 7.4 ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯೊಂದಿಗೆ ಸಹಭಾಗಿತ್ವ:

ಪ್ರವಾಸೋದ್ಯಮ ಇಲಾಖೆ ಮತ್ತು ಅದರ ಅಂಗ ಸಂಸ್ಥೆಗಳು ಆತಿಥ್ಯ ಮತ್ತು ಪ್ರವಾಸೋದ್ಯಮ ವಲಯದಲ್ಲಿ ಕೌಶಲ್ಯಾಭಿವೃದ್ಧಿ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಲು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯೊಂದಿಗೆ ಸಹಯೋಗವನ್ನು ಸಾಧಿಸತಕ್ಕದ್ದು.

ಇಲಾಖೆ ಮತ್ತು ಅದರ ಅಂಗ ಸಂಸ್ಥೆಗಳು ವಲಯ ನಿರ್ದಿಷ್ಟ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ವೃತ್ತಿಪರ ತರಬೇತಿ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.

### 7.5 ರಾಜ್ಯ ಸರ್ಕಾರದ ಆತಿಥ್ಯ ತರಬೇತಿ ಸಂಸ್ಥೆಗಳನ್ನು ಬಲಪಡಿಸುವುದು ಮತ್ತು ಉನ್ನತೀಕರಿಸುವುದು

ಇಲಾಖೆಯು, ಮೈಸೂರಿನಲ್ಲಿರುವ ಫುಡ್ ಕ್ರಾಫ್ಟ್ ಇನ್ಸ್‌ಟ್ಯೂಟ್‌ನ್ನು (FCI-Food Craft Institute) ಕರ್ನಾಟಕದ ಆತಿಥ್ಯ ವಲಯದ ಅತ್ಯುತ್ಕೃಷ್ಟ ಕೇಂದ್ರವಾಗಿ ಉನ್ನತೀಕರಿಸತಕ್ಕದ್ದು. ಈ ನಿಟ್ಟಿನಲ್ಲಿ, ಮೈಸೂರಿನ ಫುಡ್ ಕ್ರಾಫ್ಟ್ ಇನ್ಸ್‌ಟಿಟ್ಯೂಟ್‌ನ್ನು ಸ್ಟೇಟ್ ಇನ್ಸ್‌ಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್‌ಗೆ (SIHM) ಉನ್ನತೀಕರಿಸತಕ್ಕದ್ದು.

ಇಲಾಖೆಯು, ಸಂದರ್ಭ - ಸನ್ನಿವೇಶವನ್ನಾಧರಿಸಿ (Case by Case basis), ರಾಜ್ಯ ಸರ್ಕಾರದ ಇತರೆ ಆತಿಥ್ಯ ತರಬೇತಿ ಸಂಸ್ಥೆಗಳನ್ನು ಬಲಪಡಿಸುವ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳತಕ್ಕದ್ದು.

### 7.6 ಕೈಗಾರಿಕೆ ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹಭಾಗಿತ್ವ

ಪ್ರವಾಸ ಮತ್ತು ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರಯಾಣ, ಪ್ರವಾಸ ಮತ್ತು ಆತಿಥ್ಯ ಉದ್ಯಮದ ಖ್ಯಾತ ಸಂಸ್ಥೆಗಳೊಂದಿಗೆ ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಅನುಸರಿಸತಕ್ಕದ್ದು.

### 7.7 ಜಾಗೃತಿ ಮತ್ತು ಸಂವೇದನಾ ಅಭಿಯಾನಗಳು

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಉದ್ಯೋಗವಕಾಶಗಳು ಮತ್ತು ಸಂಬಂಧಿತ ವೃತ್ತಿಗಳ ಬಗ್ಗೆ ಅರಿವು ಮೂಡಿಸಲು ಪ್ರಚಾರ ಕಾರ್ಯಕೈಗೊಳ್ಳುವುದು.

# 8 ಪ್ರವಾಸಿಗರ ಆರಾಮ ಮತ್ತು ಸುರಕ್ಷತೆ



ವನ್ಯಮೃಗ ವೀಕ್ಷಣೆ, ಕಬಿನಿ

ಕರ್ನಾಟಕವನ್ನು ಆದ್ಯತಾ ತಾಣವನ್ನಾಗಿ ಮಾಡುವ ಪ್ರಯತ್ನದಲ್ಲಿ ಕರ್ನಾಟಕ ಪ್ರವಾಸೋದ್ಯಮವು, ಪ್ರವಾಸಿಗರು ಮತ್ತು ಪ್ರವಾಸೋದ್ಯಮ ಉದ್ಯೋಗಿಗಳ ಆರೋಗ್ಯ ಮತ್ತು ಸುರಕ್ಷತೆಯನ್ನು ಖಚಿತಪಡಿಸಲು ನೈರ್ಮಲ್ಯ ಮತ್ತು ಸುರಕ್ಷತಾ ಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಗುರಿ ಇಟ್ಟುಕೊಂಡಿದೆ. ಅಲ್ಲದೆ ಇಂದಿನ ನೂತನ ಸನ್ನಿವೇಶದಲ್ಲಿ ಕರ್ನಾಟಕದ ಪ್ರವಾಸೋದ್ಯಮವನ್ನು ಯಶಸ್ವಿಯಾಗಿ ಪುನಶ್ಚೇತನಗೊಳಿಸವುದನ್ನು ಖಚಿತಪಡಿಸಲು, ಕರ್ನಾಟಕವು ಸುರಕ್ಷಿತ ತಾಣವಾಗಿದೆ ಎಂದು ಪ್ರವಾಸಿಗರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದು ಕಡ್ಡಾಯವಾಗಿದೆ.

## 8.1 ಸುರಕ್ಷತೆ ಹಾಗೂ ನೈರ್ಮಲ್ಯಕ್ಕಾಗಿ ಮಾರ್ಗಸೂಚಿಗಳು:-

ಪ್ರವಾಸೋದ್ಯಮ ಇಲಾಖೆಯು ಕರ್ನಾಟಕದ ಎಲ್ಲ ಪ್ರವಾಸಿ ತಾಣಗಳಲ್ಲಿ ಅನುಷ್ಠಾನಗೊಳಿಸಬೇಕಾದ ಸುರಕ್ಷತೆ ಮತ್ತು ನೈರ್ಮಲ್ಯ ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು. ಈ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಇತರ ಸಂಬಂಧಪಟ್ಟ ಪ್ರಾಧಿಕಾರಗಳು ಹೊರಡಿಸುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ರೂಪಿಸತಕ್ಕದ್ದು ಮತ್ತು ಅಗತ್ಯವೆನಿಸಿದರೆ ಕಾಲಕಾಲಕ್ಕೆ ಅವುಗಳನ್ನು ಪರಿಷ್ಕರಿಸತಕ್ಕದ್ದು.

ಈ ಮಾರ್ಗಸೂಚಿಗಳ ಅಡಿಯಲ್ಲಿ ರೂಪಿಸಲಾದ ಶಿಷ್ಟಾಚಾರಗಳಲ್ಲಿ ಸಂಭವನೀಯ touch points ಕಡಿಮೆಮಾಡುವುದು, ರೋಗಲಕ್ಷಣ ಅಥವಾ ಅನಾರೋಗ್ಯದ ಪ್ರವಾಸಿಗರೊಂದಿಗೆ ವ್ಯವಹರಿಸುವುದು, ಸಾಮಾಜಿಕ ಅಂತರ ಕಾಯ್ದಿಕೊಳ್ಳುವುದು, ವೈಯಕ್ತಿಕ ನೈರ್ಮಲ್ಯವನ್ನು ಖಾತರಿಪಡಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಮಾರ್ಗಸೂಚಿಗಳು, ಭವಿಷ್ಯದಲ್ಲಿ ಉದ್ಭವಿಸಬಹುದಾದ ಸನ್ನಿವೇಶಗಳಿಗೆ ಅಗತ್ಯವಿದ್ದಲ್ಲಿ ಸಂದರ್ಶಕರ ಪತ್ತೆಹಚ್ಚುವಿಕೆಯನ್ನು ಸುಗಮಗೊಳಿಸುವಂತೆ ಸಹ ರೂಪಿಸುವುದು.

## 8.2 ಜಾಗೃತಿ ಮತ್ತು ತರಬೇತಿ

ಪ್ರವಾಸೋದ್ಯಮ ಕಾರ್ಮಿಕ-ತೀವ್ರ (Labour intensive) ಆಧಾರಿತ ಉದ್ಯಮವಾಗಿದೆ. ಪ್ರವಾಸಿಗರು ತಮ್ಮ ಪ್ರಯಾಣದ ಅವಧಿಯಲ್ಲಿ ಹಲವಾರು ಜನರ ಸಂಪರ್ಕಕ್ಕೆ ಬರುತ್ತಾರೆ. ಹಾಗಾಗಿ ಪ್ರವಾಸೋದ್ಯಮ ವಲಯದಲ್ಲಿ ಕೆಲಸ ಮಾಡುವ ಎಲ್ಲ ಜನರು ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಹೊರಡಿಸಲಾದ ಮಾರ್ಗಸೂಚಿಗಳನ್ನು ಪಾಲಿಸುವ ಮಹತ್ವವನ್ನು ಅರಿತುಕೊಳ್ಳುವಂತೆ ಮಾಡುವುದು ಅಗತ್ಯ. ಕರ್ನಾಟಕವನ್ನು ಸುರಕ್ಷಿತ ಮತ್ತು ವಿಶ್ವಾಸಾರ್ಹ ಸ್ಥಾನಕ್ಕೆ ಏರಿಸಲು ನುರಿತ ಮತ್ತು ಸುಶಿಕ್ಷಿತ ಕಾರ್ಯಪಡೆಯ ಅಗತ್ಯವಿದೆ.

ಮಹಿಳೆಯರು, ಮಕ್ಕಳು ಮತ್ತು ವಿಶೇಷ ಅಗತ್ಯತೆ ಇರುವ ಪ್ರವಾಸಿಗರಿಗೆ ವಿಶೇಷ ಆದ್ಯತೆಯನ್ನು ನೀಡುವುದರೊಂದಿಗೆ ಪ್ರವಾಸಿಗರ ಸುರಕ್ಷತೆ ಮತ್ತು ಸೌಕರ್ಯವನ್ನು ಖಚಿತಪಡಿಸುವ ಸಲುವಾಗಿ ಪ್ರವಾಸೋದ್ಯಮ ಸಿಬ್ಬಂಧಿ ಮತ್ತು ಸೇವಾದಾತರನ್ನು ಸಂವೇದನಾಶೀಲರನ್ನಾಗಿಸಲು ವಿಶೇಷ ಅಭಿಯಾನಗಳನ್ನು ಅನುಷ್ಠಾನಗೊಳಿಸತಕ್ಕದ್ದು.





ಕರ್ನಾಟಕ ಪ್ರವಾಸೋದ್ಯಮವು ಪ್ರವಾಸಿಗರಲ್ಲಿ ಕರ್ನಾಟಕವು ಸುರಕ್ಷಿತ ತಾಣವೆಂಬ ಸುರಕ್ಷತಾ ಭಾವ ಮೂಡಿಸಲು ಮತ್ತು ಸಕಾರಾತ್ಮಕ ದೃಷ್ಟಿಕೋನ ಬೆಳೆಯುವಂತೆ ಮಾಡುವ ನಿಟ್ಟಿನಲ್ಲಿ ಸಹ ಕಾರ್ಯನಿರ್ವಹಿಸತಕ್ಕದ್ದು. ಕರ್ನಾಟಕಕ್ಕೆ ಭೇಟಿ ನೀಡುವವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು ಉದ್ಯಮದ ಸಹಯೋಗದೊಂದಿಗೆ ಸಂಘಟಿತ ಮಾರುಕಟ್ಟೆ ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

### 8.3 ಪ್ರವಾಸಿ ಮಿತ್ರ:

'ಪ್ರವಾಸಿ ಮಿತ್ರ' ಎಂದು ಕರೆಯಲಾಗುವ ಪ್ರವಾಸೋದ್ಯಮ ಪೊಲೀಸ್ ಪಡೆಯನ್ನು ಪ್ರವಾಸಿಗರ ಸುರಕ್ಷತೆ ಮತ್ತು ಭದ್ರತೆಗಾಗಿ ಪ್ರಮುಖ ಪ್ರವಾಸಿ ತಾಣಗಳಲ್ಲಿ ನಿಯೋಜಿಸತಕ್ಕದ್ದು. ಪ್ರವಾಸಿಗರಿಗೆ ಆಹ್ಲಾದಕರ ಪ್ರವಾಸವನ್ನು ಖಚಿತಪಡಿಸಲು ಎಲ್ಲ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ವಿಶೇಷವಾಗಿ ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ಪ್ರಮುಖ ಬಸ್ ನಿಲ್ದಾಣಗಳ ಪ್ರವೇಶ ಮಾರ್ಗಗಳಲ್ಲಿ ಪ್ರವಾಸಿಗರ ಸುರಕ್ಷತಾ ಮತ್ತು ಮಾರ್ಗದರ್ಶನ ಕೇಂದ್ರಗಳನ್ನು ಸ್ಥಾಪಿಸತಕ್ಕದ್ದು.

### 8.4 ಸುಲಭ ಪ್ರವೇಶ ಸಾಧ್ಯತೆ :

ರ್‍ಯಾಂಪ್‌ಗಳು, ಎಸ್ಕಲೇಟರ್ ಗಳು ಮತ್ತು ಇತರ ರೀತಿಯ ನೆರವಿನ ಪರಿಕರಗಳಂತಹ ಸೌಲಭ್ಯಗಳನ್ನು ಒದಗಿಸುವ ಮೂಲಕ ಎಲ್ಲ ಪ್ರಮುಖ ಪ್ರವಾಸೋದ್ಯಮ ಸ್ಥಳಗಳಲ್ಲಿ ವಿಶೇಷ ಚೇತನರು, ದುರ್ಬಲರು ಮತ್ತು ವಯಸ್ಸಾದ ವ್ಯಕ್ತಿಗಳಿಗೆ ಅನುಕೂಲಕರವಾಗಿ ಹಾಗೂ ಸುರಕ್ಷಿತವಾಗಿ ಪ್ರವೇಶಿಸಲು ಸಾಧ್ಯವಾಗುವಂತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಪ್ರೋತ್ಸಾಹಿಸತಕ್ಕದ್ದು.

### 8.5 ಕುಂದು ಕೊರತೆ ನಿವಾರಣೆ:

ಪ್ರವಾಸಿಗರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಕರ್ನಾಟಕ ಪ್ರವಾಸೋದ್ಯಮದ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಒಂದು ಪ್ರತ್ಯೇಕ ಆನ್‌ಲೈನ್ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು.

ಪ್ರವಾಸಿಗರ ಅನುಕೂಲಕ್ಕಾಗಿ ಮೀಸಲಾದ 24X7 ಕೇಂದ್ರೀಕೃತ ಸಹಾಯವಾಣಿಯನ್ನು ಪ್ರತ್ಯೇಕವಾಗಿ ಪ್ರಾರಂಭಿಸುವುದು.


ಮುರುಡೇಶ್ವರ

# 9 ಸಮುದಾಯದ ಸಹಬಾಗಿತ್ವ


ಸಕ್ರೆಬೈಲು

ಯಾವುದೇ ಸ್ಥಳದಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಯು, ಸ್ಥಳೀಯ ಸಮುದಾಯಕ್ಕೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ರಂಗಗಳಲ್ಲಿ ಪ್ರಯೋಜನವನ್ನು ಉಂಟುಮಾಡುವಂತಿರಬೇಕು, ಪ್ರವಾಸೋದ್ಯಮವು, ಆದಾಯ ಮತ್ತು ಉದ್ಯೋಗವನ್ನು ಸೃಜಿಸುವ ಸಾಮರ್ಥ್ಯವನ್ನು ನೆರವೇರಿಸುತ್ತದೆಂಬುದನ್ನು ಖಚಿತಪಡಿಸಿಕೊಳ್ಳಲು ವಲಯ ಘಟಕಗಳು, ಸ್ಥಳೀಯ ಮತ್ತು ರಾಜ್ಯಮಟ್ಟದ ಅಧಿಕಾರಿಗಳು ಖಾಸಗಿ ವಲಯ ಹಾಗೂ ಸ್ಥಳೀಯ ಸಮುದಾಯಗಳನ್ನು ಒಳಗೊಳ್ಳಲು ಪ್ರಯತ್ನಗಳನ್ನು ಮಾಡತಕ್ಕದ್ದು.

ಸ್ಥಳೀಯ ಸಮುದಾಯಗಳ ಪಾಲ್ಗೊಳ್ಳುವಿಕೆ ಮತ್ತು ಅಂಗೀಕಾರವು ಒಂದು ಸ್ಥಳದ ಪ್ರವಾಸೋದ್ಯಮ ಅಭಿವೃದ್ಧಿಗೆ ಅಗತ್ಯವಾದ ಪೂರ್ವ ಅವಶ್ಯಕತೆಯಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಸಲುವಾಗಿ, ಸ್ಥಳೀಯ ಸಮುದಾಯಗಳೊಂದಿಗೆ ತೊಡಗಿಸಿಕೊಳ್ಳಲು ಮತ್ತು ಅವರನ್ನು ತಮ್ಮ ತಮ್ಮ ಪ್ರವಾಸಿ ವಲಯಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನೆರವು ನೀಡಲು ಜಿಲ್ಲಾ ಮಟ್ಟದಲ್ಲಿ ಒಂದು ಪ್ರತಿನಿಧಿ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು, ತನ್ನ ನಾಲ್ಕು ಆಡಳಿತ ವಿಭಾಗಗಳಲ್ಲಿ ಪ್ರತಿಯೊಂದರಲ್ಲೂ ಸಮುದಾಯ ಪಾಲ್ಗೊಳ್ಳುವಿಕೆಯ ಬಗ್ಗೆ ಒಂದು ಮಾದರಿ ಯೋಜನೆ/ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸತಕ್ಕದ್ದು.

ಪ್ರವಾಸೋದ್ಯಮ ಇಲಾಖೆಯು ರಚಿಸುವ ಜಿಲ್ಲಾ ಮಟ್ಟದ ಸಂಸ್ಥೆಯು ನಿರ್ವಹಿಸಬೇಕಾದ ಪ್ರಮುಖ ಕಾರ್ಯಾಚಟುವಟಿಕೆಗಳು ಈ ಮುಂದಿನಂತಿವೆ.

### 9.1 ಮಾಹಿತಿ, ಶಿಕ್ಷಣ ಮತ್ತು ಸಂವಹನ

ಪ್ರವಾಸೋದ್ಯಮದಿಂದ ಸೃಜನೆಯಾಗುವ ಆದಾಯ ಮತ್ತು ಉದ್ಯೋಗವಕಾಶಗಳ ಬಗ್ಗೆ ಸ್ಥಳೀಯ ಸಮುದಾಯಗಳಿಗೆ ಅರಿವು ಮೂಡಿಸತಕ್ಕದ್ದು. ಅಲ್ಲದೆ, ಸ್ಥಳೀಯ ಸಮುದಾಯದಲ್ಲಿ ಲಭ್ಯವಿರುವ ಕೌಶಲ್ಯಗಳು, ಸ್ಥಳೀಯರನ್ನು ಪ್ರವಾಸೋದ್ಯಮದಲ್ಲಿ ನಿಯೋಜಿಸುವುದರ ಪ್ರಯೋಜನಗಳು ಹಾಗೂ ಸ್ಥಳೀಯ ಉತ್ಪನ್ನಗಳನ್ನು ಖರೀದಿಸುವುದರ ಪ್ರಯೋಜನಗಳ ಬಗ್ಗೆ ಪ್ರವಾಸಿಗರಿಗೆ ಮತ್ತು ಪ್ರವಾಸೋದ್ಯಮಕ್ಕೆ ಮನವರಿಕೆ ಮಾಡಿಕೊಡತಕ್ಕದ್ದು.

ಎಲ್ಲ ಪ್ರವಾಸೋದ್ಯಮ ಹಿತಾಸಕ್ತಿದಾರರಿಗೆ ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸತಕ್ಕದ್ದು. ಪ್ರವಾಸೋದ್ಯಮದ ಎಲ್ಲಾ ಋಣಾತ್ಮಕ ಪರಿಣಾಮಗಳನ್ನು ಕಡಿಮೆಮಾಡಿಕೊಂಡು ಮತ್ತು ಪ್ರಕೃತಿ, ಸಂಸ್ಕೃತಿ ಮತ್ತು ಆಚಾರ-ವಿಚಾರಗಳೊಂದಿಗೆ ಸಮುದಾಯಗಳು ಸಾಮರಸ್ಯದದಿಂದ ಬಾಳಲು ಪ್ರವಾಸಿಗರು ಮತ್ತು ಪ್ರವಾಸೋದ್ಯಮಕ್ಕೆ ಅರಿವುಮೂಡಿಸತಕ್ಕದ್ದು.

### 9.2 ಉದ್ಯಮ ಶೀಲತೆ ಮತ್ತು ಉದ್ಯೋಗವಕಾಶಗಳ ಸೃಜನೆ

ಪ್ರವಾಸೋದ್ಯಮ ವಲಯದಲ್ಲಿ ಸ್ಥಳೀಯ ಸಮುದಾಯಗಳು ಪಾಲ್ಗೊಳ್ಳುವಂತೆ ಅವರನ್ನು ಸಮರ್ಥಗೊಳಿಸಲು ಅವರ ಕೌಶಲ್ಯಾಭಿವೃದ್ಧಿಗಾಗಿ ಸೂಕ್ತ ಕಾರ್ಯವ್ಯವಸ್ಥೆಯನ್ನು ರೂಪಿಸತಕ್ಕದ್ದು. ಈ ಕಾರ್ಯಕ್ರಮಗಳು, ಪ್ರವಾಸೋದ್ಯಮ ಕೇಂದ್ರಿತ ಲಘು ಮತ್ತು ಕಠಿಣ (soft and hard skills) ಕೌಶಲ್ಯತೆಗಳ ಜೊತೆಗೆ, ಪ್ರವಾಸೋದ್ಯಮವು ಬೇಡುವಂತಹ ಉತ್ಪನ್ನಗಳನ್ನು ಉತ್ಪಾದಿಸಿ ಸರಬರಾಜು ಮಾಡಲು ಸ್ಥಳೀಯ ಕುಟುಂಬಗಳನ್ನು ಮತ್ತು ವ್ಯಕ್ತಿಗಳನ್ನು ಸಮರ್ಥಗೊಳಿಸುವಂತೆ ಇರತಕ್ಕದ್ದು.


### 9.3 ಸ್ಥಳೀಯ ಸ್ವಯಂ ಸರ್ಕಾರದ / ಪ್ರಾಧಿಕಾರಗಳ (Local Self Government) ಒಳಗೊಳ್ಳುವಿಕೆ.

ಪ್ರವಾಸೋದ್ಯಮ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಸ್ಥಳೀಯ ಸರ್ಕಾರ /ಪ್ರಾಧಿಕಾರಗಳ ಇತರೆ ಅಭಿವೃದ್ಧಿ ಕಾರ್ಯಚಟಿವಟಿಕೆಗಳ ಜೊತೆಗೆ ಏಕೀಕರಿಸುವುದನ್ನು ಖಚಿತಪಡಿಸಲು ಪ್ರವಾಸಿ ತಾಣಗಳ ಮಟ್ಟದಲ್ಲಿ ಸ್ಥಳೀಯ ಹಿತಾಸಕ್ತಿದಾರರನ್ನು ಒಳಗೊಂಡ ಪ್ರವಾಸೋದ್ಯಮ ಕಾರ್ಯತಂಡಗಳನ್ನು ರಚಿಸುವಂತೆ ಸ್ಥಳೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸತಕ್ಕದ್ದು.

ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆಯ ಮಹತ್ವದ ಬಗ್ಗೆ ಪ್ರಾಧಿಕಾರಗಳಿಗೆ ಮತ್ತು ಸಮುದಾಯಗಳಿಗೆ ಮನವರಿಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ನೆರವನ್ನು ಒದಗಿಸತಕ್ಕದ್ದು







ವಿಜಯ ವಿಠ್ಠಲ ದೇವಾಲಯ, ಹಂಪೆ



# 10 ಸುಸ್ಥಿರ ಪ್ರವಾಸೋದ್ಯಮ

ವಿಶ್ವಸಂಸ್ಥೆಯು ನಿಗದಿಪಡಿಸಿದ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG s) ಅದರಲ್ಲೂ ವಿಶೇಷವಾಗಿ ಅನುಕ್ರಮವಾಗಿ ಯೋಗ್ಯ ಕೆಲಸ ಮತ್ತು ಆರ್ಥಿಕ ಬೆಳವಣಿಗೆ (Decent work and Economic growth), "ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ (Responsible consumption and production" ಹಾಗೂ "ಗುರಿಗಳಿಗೆ ಸಂಬಂಧಪಟ್ಟ ಸಹಭಾಗಿತ್ವಗಳು (Partnerships for Goals)" ಎಂಬ 8, 12 ಮತ್ತು 17ಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಪ್ರವಾಸೋದ್ಯಮವು ಪ್ರಮುಖ ಪಾತ್ರವನ್ನು ಹೊಂದಿದೆ.

ಪ್ರವಾಸಿ ತಾಣಗಳ ಯೋಜನೆ, ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುವಾಗ ಪರಿಸರ ಮತ್ತು ಸ್ವಾಭಾವಿಕ ಸಂಪನ್ಮೂಲಗಳ ಪರಿಣಾಮಕಾರಿ ಸಂರಕ್ಷಣೆ ಹಾಗೂ ಸ್ಥಳೀಯ ಸಂಪ್ರದಾಯಗಳು, ಸಂಸ್ಕೃತಿ ಮತ್ತು ಉತ್ಪನ್ನಗಳ ಪಾಲನೆಯ ಬಗ್ಗೆಯೂ ಗಮನಹರಿಸತಕ್ಕದ್ದು.

ಕರ್ನಾಟಕದಲ್ಲಿ ಪ್ರವಾಸೋದ್ಯಮ ಹಿತಾಸಕ್ತಿದಾರರ ನಡುವೆ ಸುಸ್ಥಿರ ಪ್ರವಾಸೋದ್ಯಮ ಪದ್ಧತಿಗಳನ್ನು ಉತ್ತೇಜಿಸಲು ಪ್ರವಾಸೋದ್ಯಮ ಇಲಾಖೆಯು ಉಪಕ್ರಮಗಳನ್ನು ಕೈಗೊಳ್ಳತಕ್ಕದ್ದು. ಜೊತೆಗೆ, ವಿಭಾಗ-14 ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಅಧ್ಯಾಯದಲ್ಲಿ ವಿವರಿಸಲಾದಂತೆ ಸುಸ್ಥಿರ ಪ್ರವಾಸೋದ್ಯಮ ಪದ್ಧತಿಗಳ ಅಳವಡಿಕೆಯನ್ನು ಉತ್ತೇಜಿಸಲು ಇಲಾಖೆಯು ಅರ್ಹ ಪ್ರವಾಸೋದ್ಯಮ ಯೋಜನೆಗಳಿಗಾಗಿ ರಿಯಾಯತಿಗಳು ಮತ್ತು ಹೂಡಿಕೆ ಸಹಾಯಧನವನ್ನು ನೀಡತಕ್ಕದ್ದು.

### 10.1 ಪರಿಸರ ಸುಸ್ಥಿರ ಪದ್ಧತಿಗಳು:

ಪ್ರವಾಸೋದ್ಯಮ ತಾಣಗಳಲ್ಲಿ ವಿಶೇಷವಾಗಿ ಸೂಕ್ಷ್ಮ ಜೈವಿಕ ತಾಣಗಳಲ್ಲಿ ಮತ್ತು ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಸಮರ್ಥನೀಯ ಪದ್ಧತಿಗಳಿಗೆ ಸಂಬಂಧಿಸಿದಂತೆ ಮಾನದಂಡಗಳನ್ನು ಮತ್ತು ಕ್ಲುಪ್ತ ಮಾದರಿಗಳನ್ನು ರೂಪಿಸುವಾಗ ಪ್ರವಾಸೋದ್ಯಮದ ತಾಳಿಕೆ ಸಾಮರ್ಥ್ಯ (carrying capacity) ಅಧ್ಯಯನಗಳನ್ನು ಕೈಗೊಳ್ಳತಕ್ಕದ್ದು. ಅಂತಹ, ಪ್ರವಾಸೋದ್ಯಮ ತಾಳಿಕೆ ಸಾಮರ್ಥ್ಯ ಅಧ್ಯಯನಗಳನ್ನಾಧರಿಸಿ ಈ ಸ್ಥಳಗಳಲ್ಲಿ ಸುಸ್ಥಿರ ಪದ್ಧತಿಗಳ ಅನುಷ್ಠಾನ & ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಕಾರ್ಯವ್ಯವಸ್ಥೆಯನ್ನು ರೂಪಿಸತಕ್ಕದ್ದು.

### 10.2 ಪ್ರಮಾಣೀಕರಣ ಕಾರ್ಯಚೌಕಟ್ಟು

ಪ್ರವಾಸೋದ್ಯಮ ಯೋಜನೆಗಳ ಸುಸ್ಥಿರ ಪದ್ಧತಿಗಳನ್ನು ಪ್ರಮಾಣಬದ್ಧಗೊಳಿಸಲು ಮತ್ತು ಮೌಲ್ಯಮಾಪನ ಮಾಡಲು ಇಲಾಖೆಯು ಪ್ರಮಾಣೀಕರಣ ಕಾರ್ಯಚೌಕಟ್ಟೊಂದನ್ನು ರೂಪಿಸತಕ್ಕದ್ದು. ಈ ಕಾರ್ಯಚೌಕಟ್ಟು ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಕಾರ್ಯಾಚರಣೆಗಳ ಅನೇಕ ಅಂಶಗಳನ್ನು ಒಳಗೊಂಡಿರಬೇಕು ಮತ್ತು ಸಂಪನ್ಮೂಲಗಳ ಬಳಕೆ, ಸಮುದಾಯವನ್ನು ತೊಡಗಿಸಿಕೊಳ್ಳುವಿಕೆ, ತ್ಯಾಜ್ಯ ನಿರ್ವಹಣೆ ಇತ್ಯಾದಿಗಳನ್ನು ಒಳಗೊಂಡ ಸಮರ್ಥನೀಯ ಆಯಾಮಗಳ ಸಹಿತ ಅವುಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಬೇಕು.

### 10.3 ಸ್ವಾಭಾವಿಕ ಮತ್ತು ನಿರ್ಮಿತ ಪರಿಸರದ ಸಂಯೋಜನೆ

ಕರ್ನಾಟಕ ಪ್ರವಾಸೋದ್ಯಮವು, ಪ್ರವಾಸಿ ತಾಣಗಳ ಸ್ವಾಭಾವಿಕ ಪರಿಸರವನ್ನು ಕಾಪಾಡಿಕೊಳ್ಳಲು ಮತ್ತು ಹೆಚ್ಚಿಸಲು ಪ್ರಯತ್ನಿಸತಕ್ಕದ್ದು. ಅಲ್ಲದೆ, ಪ್ರವಾಸಿ ಸ್ಥಳಗಳ ಸ್ವಾಭಾವಿಕ ಪರಿಸರ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ಹೊಂದಿಕೆಯಾಗುವಂತೆ ನೋಡಿಕೊಳ್ಳಲು ಪ್ರವಾಸಿ ತಾಣಗಳಲ್ಲಿ ನಿರ್ಮಿತ ಪರಿಸರದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಯು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಮಾರ್ಗದರ್ಶನ ಮಾಡಲು ಮತ್ತು ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಪ್ರಯತ್ನಿಸತಕ್ಕದ್ದು.

ಹೊಸ ಮತ್ತು ವಿಸ್ತರಣೆ ಪ್ರವಾಸೋದ್ಯಮ ಯೋಜನೆಗಳಿಗಾಗಿ ಸ್ಥಳೀಯ ವಸ್ತುಗಳ ಬಳಕೆ ಮತ್ತು ಸ್ಥಳೀಯ ವಾಸ್ತುಶಿಲ್ಪದ ಶೈಲಿಗಳನ್ನು ಅನುಸರಿಸಲು ಪ್ರೋತ್ಸಾಹಿಸುವುದು.

### 10.4 ಪರಿಸರದ ಮೇಲೆ ಕಡಿಮೆ ಪ್ರತಿಕೂಲ ಪರಿಣಾಮ ಬೀರುವ ಪ್ರವಾಸೋದ್ಯಮ

ಪ್ರವಾಸೋದ್ಯಮ ಇಲಾಖೆಯು ಪರಿಸರ ಮತ್ತು ಸಂಪನ್ಮೂಲಗಳ ಮೇಲೆ ಅಲ್ಪ ಪರಿಣಾಮ ಬೀರುವ ಪ್ರವಾಸೋದ್ಯಮ ಅನುಭವ ಕೇಂದ್ರಿತ ಚಟುವಟಿಕೆಗಳನ್ನು ಪ್ರೋತ್ಸಾಹಿಸತಕ್ಕದ್ದು ಹಾಗೂ ಉತ್ತೇಜಿಸತಕ್ಕದ್ದು. ಪ್ರವಾಸೋದ್ಯಮ ಸೌಕರ್ಯಗಳು ಮತ್ತು ಸೇವೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ವಿರಳ ಹಾಗೂ ನವೀಕರಿಸಲಾಗದ ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವಂತೆ ಪ್ರವಾಸೋದ್ಯಮ ಸೇವಾದಾತರು, ಸರ್ಕಾರಿ ಏಜೆನ್ಸಿಗಳು/ ಪ್ರಾಧಿಕಾರಗಳು ಮತ್ತು ಸ್ಥಳೀಯ ಸಮುದಾಯಗಳಿಗೆ ಮನವರಿಕೆ ಮಾಡಿಕೊಡತಕ್ಕದ್ದು.

ಗ್ರೀನ್ ರೇಟಿಂಗ್ ಫಾರ್ ಇಂಟಿಗ್ರೇಟೆಡ್ ಹೆಬಿಟೆಟ್ ಅಸೆಸ್‌ಮೆಂಟ್ (GRIHA- Green Rating for integrated Habitat Assessment) ಅಥವಾ ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್‌ನ (IGBC- Indian Green Building Council) ಮಾರ್ಗಸೂಚಿಗಳಿಗೆ ಹೊಂದಿಕೆಯಾಗುವ ಪ್ರವಾಸೋದ್ಯಮ ಯೋಜನೆಗಳಿಗೆ ಇಲಾಖೆಯಿಂದ ವಿಶೇಷ ಮಾನ್ಯತೆಯು ದೊರೆಯತಕ್ಕದ್ದು.

### 10.5 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ

ಕರ್ನಾಟಕ ಪ್ರವಾಸೋದ್ಯಮ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ (CSR) ಉಪಕ್ರಮಗಳ ಮೂಲಕ ಪ್ರವಾಸೋದ್ಯಮ ಯೋಜನೆಗಳಲ್ಲಿ ಖಾಸಗಿ ವಲಯದ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಿ ಉತ್ತೇಜಿಸತಕ್ಕದ್ದು. ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಮತ್ತು ಸುರಕ್ಷತಾ ಹಾಗೂ ನೈರ್ಮಲ್ಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅಭಿಯಾನಗಳನ್ನು ನಡೆಸಲು ಸಹ ಕರ್ನಾಟಕ ಪ್ರವಾಸೋದ್ಯಮವು ಪ್ರಯತ್ನಿಸತಕ್ಕದ್ದು



# 11 ಪ್ರವಾಸೋದ್ಯಮ ದತ್ತಾಂಶ ವಿಶ್ಲೇಷಣೆ ಮತ್ತು ಡಿಜಿಟಲ್ ಉಪಕ್ರಮಗಳು





ಆಗುಂಬೆ

## 11.1 ಪ್ರವಾಸೋದ್ಯಮ ದತ್ತಾಂಶ ವಿಶ್ಲೇಷಣೆ

ಕರ್ನಾಟಕದ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಮುನ್ನೋಟ - 2025ರ ಗುರಿಗಳನ್ನು ಸಾಧಿಸುವುದಕ್ಕೆ ಯೋಜನೆ ಮತ್ತು ಕಾರ್ಯವನ್ನು ರೂಪಿಸಲು ಪ್ರವಾಸೋದ್ಯಮ ಇಲಾಖೆ ಮತ್ತು ಅದರ ಅಂಗ ಸಂಸ್ಥೆಗಳು, ತಿಳುವಳಿಕೆಯುಳ್ಳ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ಪ್ರವಾಸೋದ್ಯಮ ದತ್ತಾಂಶವನ್ನು ನಿಖರವಾಗಿ ಸಂಗ್ರಹಿಸಲು, ವಿಶ್ಲೇಷಿಸಲು ಮತ್ತು ವರದಿ ಮಾಡಲು ವ್ಯವಸ್ಥೆಗಳನ್ನು ರೂಪಿಸತಕ್ಕದ್ದು. ದತ್ತಾಂಶ ಸಂಗ್ರಹ ವ್ಯವಸ್ಥೆಗಳು ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ ಹಾಗೂ ವಿಶ್ವ ಪ್ರವಾಸೋದ್ಯಮ ಸಂಸ್ಥೆಯು (UNWTO) ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿರ ತಕ್ಕದ್ದು.

ಪ್ರವಾಸೋದ್ಯಮ ಅಂಕಿ-ಅಂಶಗಳು ಹಾಗೂ ಇಲಾಖೆಯ ಮಾರುಕಟ್ಟೆ ಸಂಶೋಧನಾ ಕಾರ್ಯಚಟುವಟಿಕೆಗಳ ಮೇಲೆ ಗಮನ ಕೇಂದ್ರೀಕರಿಸಲು ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ಪ್ರವಾಸೋದ್ಯಮ ದತ್ತಾಂಶ ವಿಶ್ಲೇಷಣಾ ವಿಭಾಗವೊಂದನ್ನು ಸ್ಥಾಪಿಸತಕ್ಕದ್ದು. ಈ ವಿಭಾಗವು ಪ್ರವಾಸೋದ್ಯಮ ದತ್ತಾಂಶ ಸಂಗ್ರಹಣೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಕರ್ನಾಟಕ ಪ್ರವಾಸೋದ್ಯಮದ ಕಾರ್ಯಕ್ಷಮತೆಯ ವೈವಿಧ್ಯಮಯ ಆಯಾಮಗಳನ್ನು ನಿರ್ಧರಿಸುವ ಕಾರ್ಯತಂತ್ರಗಳನ್ನು ವಿನ್ಯಾಸಗೊಳಿಸಿ ರೂಪಿಸತಕ್ಕದ್ದು.

ದತ್ತಾಂಶ ಆಧಾರಿತ ನೀತಿ ಮತ್ತು ನಿರ್ಣಯ ತೆಗೆದುಕೊಳ್ಳುವ ವ್ಯವಸ್ಥೆಯೊಂದನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ ಪ್ರವಾಸೋದ್ಯಮ ಇಲಾಖೆಯ ಸಮಗ್ರ ದತ್ತಾಂಶ ವಿಶ್ಲೇಷಣಾ ತಾಂತ್ರಿಕ ವ್ಯವಸ್ಥೆಯು ತಂತ್ರಜ್ಞಾನ ಮತ್ತು ತಳಮಟ್ಟದ ಮಾಹಿತಿಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳತಕ್ಕದ್ದು.

### 11.1.1 ವಾರ್ಷಿಕ ಪ್ರವಾಸೋದ್ಯಮ ಸಮೀಕ್ಷೆಗಳು

ಕರ್ನಾಟಕದಲ್ಲಿ ಪ್ರವಾಸೋದ್ಯಮ ಪರಿಸರ ವ್ಯವಸ್ಥೆಯ ವಿವಿಧ ಅಂಶಗಳನ್ನು ಅವಲೋಕಿಸಲು ಮತ್ತು ದಾಖಲಿಸಲು ಪ್ರವಾಸೋದ್ಯಮ ಇಲಾಖೆಯು ವಾರ್ಷಿಕ ಪ್ರವಾಸೋದ್ಯಮ ಸಮೀಕ್ಷೆಗಳನ್ನು ಕೈಗೊಳ್ಳತಕ್ಕದ್ದು.

ಇದರ ಜೊತೆಗೆ, ಪ್ರವಾಸೋದ್ಯಮ ಇಲಾಖೆಯು, ಪ್ರವಾಸಿ ಸ್ಥಳಗಳ ಗುಣಮಟ್ಟವನ್ನು ನಿರ್ಧರಿಸಲು ಮತ್ತು ಪ್ರವಾಸಿಗರ ಸಮಸ್ಯೆಗಳು ಮತ್ತು ಕಳಕಳಿಗಳನ್ನು ನೇರವಾಗಿ ಪರಿಹರಿಸುವ ಸುಧಾರಕ ಕ್ರಮಗಳನ್ನು ಕೈಗೊಳ್ಳಲು ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ನಿಯತಕಾಲಿಕ ಸಮೀಕ್ಷೆಗಳನ್ನು ನಡೆಸತಕ್ಕದ್ದು.

ಕರ್ನಾಟಕ ಪ್ರವಾಸೋದ್ಯಮವು ವಿವರವಾದ ಪ್ರವಾಸಿ ಪ್ರೊಫೈಲನ್ನು ಕಲೆಹಾಕುವುಕ್ಕಾಗಿ (ಗುರುತಿಸುವಿಕೆ ಅಥವಾ ವೈಯುಕ್ತಿಕ ಮಾಹಿತಿ ಇಲ್ಲದೆ ಮತ್ತು ಅನ್ವಯವಾಗುವ ಡೇಟಾ





ಗೌಪ್ಯತೆ ವಿನಿಮಯಗಳಿಗೆ ಅನುಸಾರವಾಗಿ) ಒಂದು ವ್ಯವಸ್ಥೆಯನ್ನು ಸಂಯೋಜಿಸಲು ಪ್ರವಾಸೋದ್ಯಮ ಸೇವಾದಾತರು ಹಾಗು ಇತರೆ ಉದ್ಯಮದಾರರೊಂದಿಗೆ ಪಾಲುದಾರಿಕೆ ಹೊಂದಲು ಪ್ರಯತ್ನಿಸತಕ್ಕದ್ದು.

ಈ ವ್ಯವಸ್ಥೆಯಿಂದ ಪ್ರವಾಸಿಗರ ವರ್ತನೆ ಮತ್ತು ಆದ್ಯತೆಯನ್ನು ತಿಳಿದುಕೊಳ್ಳಲು ಅವರ ಮನೋಭಾವನೆಗಳನ್ನು ನಿರ್ಧರಿಸಲು, ಪ್ರಮುಖ ಸಮಸ್ಯೆಗಳನ್ನು ಗುರುತಿಸಿ ಬಗೆಹರಿಸಿಕೊಳ್ಳಲು ಮತ್ತು ಯೋಜನೆ ಹಾಗೂ ನೀತಿ ನಿರ್ಣಯಗಳ ಬಗ್ಗೆ ಮಾರ್ಗದರ್ಶನ ನೀಡಲು ನೆರವಾಗತಕ್ಕದ್ದು.

### 11.1.2 ಪ್ರವಾಸೋದ್ಯಮ ಡ್ಯಾಷ್‌ಬೋರ್ಡ್

ಪ್ರಮುಖ ಪ್ರವಾಸೋದ್ಯಮ ಮಾಪಕಗಳನ್ನು ವರದಿ ಮಾಡುವುದು, ತಳಮಟ್ಟದ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು, ನಿಧಿ ಬಳಕೆಯನ್ನು ಟ್ರ್ಯಾಕ್ ಮಾಡುವುದು, ಆಗಮಿಸಿದ ಪ್ರವಾಸಿಗರ ಮತ್ತು ಬಂದುಹೋದ ಪ್ರವಾಸಿಗರ ಜಿಲ್ಲಾವಾರು ವಿಶ್ಲೇಷಣೆ ಹಾಗೂ ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರದ ಪರಿಣಾಮಕಾರಿ ವರದಿ ಮತ್ತು ವಿಶ್ಲೇಷಣೆಗಾಗಿ ಪ್ರವಾಸೋದ್ಯಮ ಇಲಾಖೆಯು, ಪ್ರವಾಸೋದ್ಯಮ ಡ್ಯಾಷ್‌ಬೋರ್ಡ್‌ವೊಂದನ್ನು ಸೃಜಿಸತಕ್ಕದ್ದು.

### 11.1.3 ಪ್ರವಾಸೋದ್ಯಮ ಸಂಶೋಧನೆ ಮತ್ತು ಮೌಲ್ಯಮಾಪನ ಅಧ್ಯಯನಗಳು

ಪ್ರವಾಸಿ ತಾಣಗಳು ಮತ್ತು ಸ್ಥಳೀಯ ಸಮುದಾಯಗಳ ಮೇಲೆ ಪ್ರವಾಸೋದ್ಯಮದ ಪರಿಣಾಮವನ್ನು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಜೀವಿಪರಿಸರ ಮತ್ತು ಪರಿಸರ ಮುಂತಾದಂತಹ ವಿವಿಧ ಆಯಾಮಗಳಿಂದ ನಿರ್ಧರಣೆ ಮಾಡಲು ಬಹುಶಿಸ್ತೀಯ (Multi-disciplinary) ಏಜೆನ್ಸಿಗಳ ಮೂಲಕ ಪ್ರವಾಸೋದ್ಯಮ ಪ್ರಭಾವ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸತಕ್ಕದ್ದು.

## 11.2 ಡಿಜಿಟಲ್ ಉಪಕ್ರಮಗಳು

ಕರ್ನಾಟಕವು ಭಾರತದಲ್ಲಿಯೇ ನಾವೀನ್ಯತೆಯ ಮುಂಚೂಣಿ ತಾಣವಾಗಿದ್ದು, ಭಾರತದ ನಾವೀನ್ಯತಾ ಸೂಚ್ಯಂಕದಲ್ಲಿ ಪ್ರಥಮ ಸ್ಥಾನದಲ್ಲಿದೆ. ಭಾರತದ ಸಿಲಿಕಾನ್ ವ್ಯಾಲಿ ಎಂದೇ ಹೆಸರಾಗಿರುವ ಬೆಂಗಳೂರು, ಒಂದು ಅದ್ಭುತ ನವೋದ್ಯಮ ಸಮುದಾಯವನ್ನು ಹೊಂದಿದ್ದು, ಅನೇಕ ಉದ್ಯಮಿಗಳ ಯಶೋಗಾಥೆಗಳನ್ನು ಸಾರಿ ಹೇಳುತ್ತಿದೆ. ಕರ್ನಾಟಕದ ಈ ವಿಶಿಷ್ಟ ಅನುಕೂಲತೆಯನ್ನು ಅಪಾರ ವೈವಿಧ್ಯಮಯ ಡಿಜಿಟಲ್ ಉಪಕ್ರಮಗಳ ಮೂಲಕ ಸಾಧನವನ್ನಾಗಿಸಿಕೊಂಡು ಪ್ರವಾಸೋದ್ಯಮಕ್ಕಿರುವ ಅಗಾಧ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಪ್ರವಾಸೋದ್ಯಮ ವ್ಯವಸ್ಥೆಯಲ್ಲಿ ಸೇವೆಗಳ ಗುಣಮಟ್ಟವನ್ನು ವೃದ್ಧಿಸುವುದು ಪ್ರವಾಸೋದ್ಯಮ ಇಲಾಖೆಯ ಉದ್ದೇಶವಾಗಿದೆ. ನೀತಿಯ ಅವಧಿಯಲ್ಲಿ ಈ ಮುಂದಿನ ಉಪಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

### 11.2.1 ಪ್ರವಾಸೋದ್ಯಮದಲ್ಲಿ ನಾವೀನ್ಯತಾ ಕ್ರಮಗಳಿಗೆ ನೆರವು

ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಗಣನೀಯ ಸಾಮರ್ಥ್ಯವನ್ನು ಹೊಂದಿರುವ ನವೋದ್ಯಮಗಳು ಮತ್ತು ಉದಯೋನ್ಮುಖ (Start-Ups) ತಂತ್ರಜ್ಞಾನಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಅವುಗಳನ್ನು ಬಳಸಿಕೊಳ್ಳಲು ಇಲಾಖೆ ಮತ್ತು ಅದರ ಅಂಗ ಸಂಸ್ಥೆಗಳು, ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ (K-tech- Karnataka Innovation and Technology Society) ಸಂಸ್ಥೆಯೊಂದಿಗೆ ಸಹಯೋಗವನ್ನು ಹೊಂದಿರತಕ್ಕದ್ದು.

ಮೊಬೈಲ್ ಆಪ್, ಕಂಪ್ಯೂಟರ್ ವಿಷನ್, ವರ್ಚುಯಲ್ ರಿಯಾಲಿಟಿ, ಆಗ್ಮೆಂಟೆಡ್ ರಿಯಾಲಿಟಿ, ಸಿಮುಲೇಟೆಡ್ ಕನ್‌ಸ್ಟ್ರಕ್ಷನ್ ಮಷಿನ್ ಲರ್ನಿಂಗ್ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳತಕ್ಕದ್ದು.

ಡಿಜಿಟಲ್ ಸೈನೇಜ್, ಭಾಷಾಂತರ ನೆರವು, ಶ್ರವ್ಯ-ದೃಶ್ಯ ಮಾರ್ಗದರ್ಶಿಗಳು, ಮಾರ್ಗ ಸೂಚಕಗಳು ಮುಂತಾದ ಸೇವೆಗಳ ಮೂಲಕ ಪ್ರವಾಸಿಗರಿಗೆ ಸಮಗ್ರ ಅನುಭವಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸತಕ್ಕದ್ದು.

### 11.2.2 ಪ್ರವಾಸೋದ್ಯಮ ಸ್ವತ್ತುಗಳ ಡಿಜಿಟಲೀಕರಣ

ಕರ್ನಾಟಕದ ಪ್ರಮುಖ ಪಾರಂಪರಿಕ ಮತ್ತು ಸಾಂಸ್ಕೃತಿಕ ಸ್ವತ್ತುಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯಕ್ಕೆ ಪ್ರಸಿದ್ಧ ಸಂಸ್ಥೆಗಳನ್ನು ತೊಡಗಿಸಿಕೊಳ್ಳತಕ್ಕದ್ದು. ಇಲಾಖೆಯು, ಹೈ-ರೆಸಲ್ಯೂಶನ್ ಇಮೇಜ್‌ಗಳು, ಮೂರು - ಆಯಾಮದ (3-Dimensional) ಮಾಡೆಲ್‌ಗಳು ಹಾಗೂ ವರ್ಚುಯಲ್ ಪ್ರವಾಸಗಳ (Virtual Tour) ಮೂಲಕ ಡಿಜಿಟಲೀಕರಿಸಿದ ಸ್ವತ್ತುಗಳಿಗೆ ಸಾರ್ವಜನಿಕರಿಗೆ ಒದಗಿಸಲು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು/ ಸೇವಾದಾತರೊಂದಿಗೆ ಸಹಯೋಗ ಸಾಧಿಸತಕ್ಕದ್ದು.


ರೇಷ್ಮೆ ಸೀರೆ

# 12 ಹೂಡಿಕೆ ಸೌಲಭ್ಯಗಳು



ಸೇಂಟ್ ಅಲೋಶಿಯಸ್ ಚರ್ಚ್

ಕರ್ನಾಟಕ ಸರ್ಕಾರವು, ಕರ್ನಾಟಕದಲ್ಲಿ ಪ್ರವಾಸೋದ್ಯಮ ಯೋಜನೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗಾಗಿ ಪೂರಕವಾದ ವಾತಾವರಣವನ್ನು ಕಲ್ಪಿಸಲು ಬದ್ಧವಾಗಿದೆ. ಪ್ರವಾಸೋದ್ಯಮ ಇಲಾಖೆಯು, ರಾಜ್ಯದಲ್ಲಿ ಸುಲಲಿತ ವ್ಯವಹಾರವನ್ನು ಸುಧಾರಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ.

### 12.1 ಹೂಡಿಕೆ ಕಾರ್ಯತಂತ್ರ

ಕರ್ನಾಟಕ ಸರ್ಕಾರವು, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬಹುತೇಕ ಹೊಸ ಯೋಜನೆಗಳನ್ನು ಖಾಸಗಿವಲಯದ ಹೂಡಿಕೆ ಮೂಲಕ ಜಾರಿಗೆ ತರಲು ಮತ್ತು ಕೆಲವೇ ಯೋಜನೆಗಳನ್ನು ಮಾತ್ರ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಅಥವಾ ನೇರವಾಗಿ ಸರ್ಕಾರಿ ಹೂಡಿಕೆಯ ಮೂಲಕ ಜಾರಿಗೊಳಿಸಲು ಒತ್ತು ನೀಡತಕ್ಕದ್ದು.

ಉದ್ಯಮ ಮತ್ತು ಸರ್ಕಾರಗಳೆರಡಕ್ಕೂ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ನೆರವಾಗಲು ಕರ್ನಾಟಕದಲ್ಲಿನ ಪ್ರಮುಖ ತಾಣಗಳು ಮತ್ತು ಹೂಡಿಕೆ ಅವಕಾಶಗಳನ್ನು ತೋರಿಸುವ "ಕರ್ನಾಟಕ ಪ್ರವಾಸೋದ್ಯಮ ಉದ್ದಿಮೆ ವಿವರ (Karnataka Tourism Industry Profile)"ವನ್ನು ಸರ್ಕಾರವು ಸಿದ್ಧಪಡಿಸತಕ್ಕದ್ದು.

### 12.2 ಜಾಗತಿಕ ಪ್ರವಾಸೋದ್ಯಮ ಹೂಡಿಕೆದಾರರ ಸಭೆ

ಪ್ರವಾಸೋದ್ಯಮ ಇಲಾಖೆಯು, ಹೂಡಿಕೆದಾರರಲ್ಲಿ ಕರ್ನಾಟಕ ಪ್ರವಾಸೋದ್ಯಮದ ಹೂಡಿಕೆ ಸಂಭಾವ್ಯತೆಯನ್ನು ಪ್ರದರ್ಶಿಸಲು ಮತ್ತು ಖಾಸಗಿ ವಲಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು, ಜಾಗತಿಕ ಪ್ರವಾಸೋದ್ಯಮ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸತಕ್ಕದ್ದು.

### 12.3 ಸಾಂಸ್ಥಿಕ ವ್ಯವಸ್ಥೆ

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು, ಯೋಜನೆಗಳ ಅನುಷ್ಠಾನಕ್ಕಾಗಿ ಅಡ್ಡಿಯಾಗಿರುವ ಎಲ್ಲಾ ಅಂತರ ಇಲಾಖಾ ಸಮಸ್ಯೆಗಳನ್ನು ಬಗೆಹರಿಸಲು ಕರ್ನಾಟಕ ಉದ್ಯೋಗ ಮಿತ್ರ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಮತ್ತು ಕರ್ನಾಟಕ ಸರ್ಕಾರದ ಇತರೆ ಇಲಾಖೆಗಳೊಂದಿಗೆ ನಿಕಟ ಸಮನ್ವಯದಿಂದ ಕಾರ್ಯನಿರ್ವಹಿಸತಕ್ಕದ್ದು. ಪ್ರವಾಸೋದ್ಯಮ ಇಲಾಖೆಯು, ರಾಜ್ಯದಲ್ಲಿ ಪ್ರವಾಸೋದ್ಯಮ ಹೂಡಿಕೆಗಳಿಗಾಗಿ ತಡೆ ರಹಿತ ಮತ್ತು ಪರಿಣಾಮಕಾರಿ ಅನುಭವವನ್ನು ಖಚಿತ ಪಡಿಸಿಕೊಳ್ಳಲು ವಿಧಾನಗಳನ್ನು ರೂಪಿಸತಕ್ಕದ್ದು.

ಪ್ರವಾಸೋದ್ಯಮ ಇಲಾಖೆಯು, ಇಲಾಖೆಯೊಳಗೆ ಪ್ರವಾಸೋದ್ಯಮ ಹೂಡಿಕೆ ಸೌಲಭ್ಯ ಕೋಶವನ್ನು (Karnataka Tourism Investment Facilitation Cell) ಸ್ಥಾಪಿಸತಕ್ಕದ್ದು. ಅದು ಹೂಡಿಕೆ, ಅನುಕೂಲ ಮತ್ತು ಮೇಲ್ವಿಚಾರಣೆಯನ್ನು ಸಶಕ್ತಗೊಳಿಸುವ ಒಂದು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರವಾಸೋದ್ಯಮ ಹೂಡಿಕೆ ಸೌಲಭ್ಯ ಕೋಶದ ಪ್ರಮುಖ ಜವಾಬ್ದಾರಿಗಳು ಈ ಮುಂದಿನಂತಿವೆ-

- ತಂತ್ರಜ್ಞಾನವನ್ನು ಪರಿಣಾಮಕಾರಿಯಗಿ ಬಳಸಿಕೊಳ್ಳುವ ಮೂಲಕ ಅನುಮೋದನೆ ಮತ್ತು ಅನುಮತಿಗಾಗಿ ನೆರವನ್ನು ನೀಡಲು ಒಂದೇ ಸ್ಥಳದಲ್ಲಿ ಅನುಕೂಲ ಕಲ್ಪಿಸುವ ಕೇಂದ್ರ (One-Stop- Facilitation) ವಾಗಿಕಾರ್ಯನಿರ್ವಹಣೆ.
- ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಹೂಡಿಕೆಯನ್ನು ಆಹ್ವಾನಿಸುವುದಕ್ಕೆ ಜಾಗತಿಕ ಪ್ರವಾಸೋದ್ಯಮ ಹೂಡಿಕೆದಾರರ ಸಮಾವೇಶ, ರೋಡ್ ಶೋ ಮತ್ತು ಸರಣಿ B2B ಸಭೆಗಳ ಆಯೋಜನೆ.
- ಕರ್ನಾಟಕ ಪ್ರವಾಸೋದ್ಯಮ ವಲಯಕ್ಕಾಗಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು (CSR) ಪ್ರೋತ್ಸಾಹಿಸಿ, ಉತ್ತೇಜಿಸುವುದು
- ಪ್ರವಾಸಿ ತಾಣಗಳ ಮತ್ತು ಪ್ರವಾಸೋದ್ಯಮ ಸ್ವತ್ತುಗಳ ದತ್ತು ಸ್ವೀಕಾರ, ನಿರ್ವಹಣೆ ಅಥವಾ ಪ್ರಾಯೋಜಕತೆಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಬೆಂಬಲಿಸುವುದು.






ಓಂ ಬೀಚ್, ಗೋಕರ್ಣ



# 13 ವ್ಯಾಖ್ಯಾನಗಳು

1. **ಪ್ರವಾಸೋದ್ಯಮ ಯೋಜನೆ** ಎಂದರೆ, ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಯಾವುದೇ ಸೇವೆಯನ್ನು ನೀಡುವಲ್ಲಿ ತೊಡಗಿಕೊಂಡಿರುವ ಅಥವಾ ತೊಡಗಿಸಿಕೊಳ್ಳುವ ಒಂದು ಯೋಜನೆ
2. **ಅರ್ಹ ಪ್ರವಾಸೋದ್ಯಮ ಯೋಜನೆ** ಎಂದರೆ, ಪ್ರವಾಸೋದ್ಯಮ ಕಾರ್ಯನೀತಿಯ ಅವಧಿಯಲ್ಲಿ ಕರ್ನಾಟಕದಲ್ಲಿ ಅಭಿವೃದ್ಧಿಗೆ ಆದ್ಯತೆ ನೀಡಬೇಕಾದ, ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸೋದ್ಯಮ ಯೋಜನೆಗಳ ಪಟ್ಟಿ. ಈ ಕೆಳಗೆ ಗುರುತಿಸಲಾದ ಅರ್ಹ ಪ್ರವಾಸೋದ್ಯಮ ಯೋಜನೆಗಳು, ಅಧ್ಯಾಯ -14 ರಲ್ಲಿ ವಿವರಿಸಿರುವಂತೆ ಕಾರ್ಯನೀತಿಯ ಅಡಿಯಲ್ಲಿ ಪ್ರೋತ್ಸಾಹಕಗಳು, ಸಹಾಯಧನ ಮತ್ತು ರಿಯಾಯಿತಿಗಳನ್ನು ಪಡೆಯಲು ಅರ್ಹವಾಗಿರತಕ್ಕದ್ದು.

| ಕ್ರಮ ಸಂಖ್ಯೆ | ಪ್ರವಾಸೋದ್ಯಮ ಯೋಜನೆಗಳು | ಪ್ರೋತ್ಸಾಹಕ ಗಳಿಗೆ ಅರ್ಹತೆ | ಸಹಾಯಧನಕ್ಕೆ ಅರ್ಹತೆ | ರಿಯಾಯಿತಿಗೆ ಅರ್ಹತೆ |
|---|---|---|---|---|
| 1 | ಸಾಹಸ ಪ್ರವಾಸೋದ್ಯಮ ಯೋಜನೆ | ✓ | ✓ | ✓ |
| 2 | ಕೃಷಿ ಪ್ರವಾಸೋದ್ಯಮ ಯೋಜನೆ | ✓ | ✓ | ✓ |
| 3 | ಮನೋರಂಜನಾ ಪಾರ್ಕ್ | ✓ | | ✓ |
| 4 | ಕಾರವಾನ್ ಪಾರ್ಕ್ ಯೋಜನೆ | ✓ | ✓ | ✓ |
| 5 | ಕಾರವಾನ್ ಪ್ರವಾಸೋದ್ಯಮ ಯೋಜನೆ | ✓ | | ✓ |
| 6 | ಸಮಾವೇಶ ಕೇಂದ್ರ | ✓ | | ✓ |
| 7 | ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ | ✓ | ✓ | ✓ |
| 8 | ಸಾಂಸ್ಕೃತಿಕ ಗ್ರಾಮ | ✓ | | ✓ |
| 9 | ಪರಿಸರ ಪ್ರವಾಸೋದ್ಯಮ ಯೋಜನೆ | ✓ | | ✓ |
| 10 | ಪಾರಂಪರಿಕ ಹೋಟೆಲ್ ಯೋಜನೆ | ✓ | | ✓ |
| 11 | ಪಾರಂಪರಿಕ ಪ್ರವಾಸೋದ್ಯಮ ಯೋಜನೆ | ✓ | ✓ | ✓ |
| 12 | ಪಾರಂಪರಿಕ ನಡಿಗೆ | ✓ | | ✓ |
| 13 | ಹೋಂ ಸ್ಟೇ | ✓ | | ✓ |
| 14 | ಹೋಟೆಲ್ ಯೋಜನೆ (ಬಜೆಟ್) | ✓ | ✓ | ✓ |
| 15 | ಹೋಟೆಲ್ ಯೋಜನೆ (ಪ್ರೀಮಿಯಂ) | ✓ | ✓ | ✓ |
| 16 | ಹೌಸ್ ಬೋಟ್ | ✓ | ✓ | ✓ |
| 17 | ವಸ್ತು ಸಂಗ್ರಹಾಲಯಗಳು ಮತ್ತು ಚಿತ್ರಶಾಲೆಗಳು | ✓ | | ✓ |
| 18 | ರೋಪ್ ವೇ | ✓ | | ✓ |
| 19 | ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆಗಳು | ✓ | ✓ | ✓ |
| 20 | ಧ್ವನಿ ಮತ್ತು ಬೆಳಕಿನ ಪ್ರದರ್ಶನಗಳು | ✓ | | ✓ |
| 21 | ಟೆಂಟ್ ವಸತಿ ಸೌಕರ್ಯ | ✓ | | ✓ |
| 22 | ಥೀಮ್ ಪಾರ್ಕ | ✓ | | ✓ |
| 23 | ಪ್ರವಾಸಿ ವಿವರಣಾ ಕೇಂದ್ರ | ✓ | | ✓ |
| 24 | ಪ್ರವಾಸಿ ಲಕ್ಷುರಿ ಕೋಚ್ | ✓ | | ✓ |
| 25 | ಸ್ವಾಸ್ಥ ಕೇಂದ್ರ | ✓ | ✓ | ✓ |
| 26 | ರಸ್ತೆ ಬದಿ ಸೌಲಭ್ಯಗಳು | ✓ | ✓ | ✓ |





ಸೇಂಟ್ ಫಿಲೋಮಿನಾ ಕ್ಯಾಥಡ್ರಲ್, ಮೈಸೂರು

ಅರ್ಹ ಪ್ರವಾಸೋದ್ಯಮ ಯೋಜನೆಗಳ ಪಟ್ಟಿಯನ್ನು ಪ್ರವಾಸೋದ್ಯಮ ನೀತಿಯಡಿ ರಚಿಸಲಾದ ಪ್ರವಾಸೋದ್ಯಮ ಅಧಿಕಾರಯುತ ಸಮಿತಿಯು ನಿಯತವಾಗಿ ಪರಿಶೀಲಿಸಿ, ಪ್ರಸಕ್ತ ಮಾರುಕಟ್ಟೆಯ ಬೇಡಿಕೆ ಮತ್ತು ಉದ್ಯಮದ ಸಲಹೆಗಳ ಪ್ರಕಾರ ಸೂಕ್ತ ಸೇರ್ಪಡೆ/ ತೆಗೆದುಹಾಕುವಿಕೆ/ ಮಾರ್ಪಾಡುಗಳನ್ನು ಮಾಡಬಹುದು. ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಅಗತ್ಯ ಅಧಿಸೂಚನೆಗಳನ್ನು ಹೊರಡಿಸತಕ್ಕದ್ದು.

ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು ಮತ್ತು ನಿರ್ದಿಷ್ಟ ವಿವರಣೆಗಳು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಕಾರ್ಯಾಚರಣಾ ಮಾರ್ಗಸೂಚಿಗಳು ಮತ್ತು ಸಂಬಂಧಪಟ್ಟ ಅಧಿಸೂಚನೆಗಳ ಪ್ರಕಾರ ಇರತಕ್ಕದ್ದು. ಈ ನೀತಿಯಡಿ ಪ್ರೋತ್ಸಾಹಕಗಳು, ಸಹಾಯಧನ ಮತ್ತು ರಿಯಾಯಿತಿಗಳಿಗೆ ಅರ್ಹರಾಗಬೇಕಾದರೆ, ಅರ್ಹ ಪ್ರವಾಸೋದ್ಯಮ ಯೋಜನೆಗಳನ್ನು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಬೇಕು ಮತ್ತು ಕಾರ್ಯಾಚರಣಾ ಮಾರ್ಗಸೂಚಿಯ ಪ್ರಕಾರ ಷರತ್ತುಗಳನ್ನು ಪಾಲಿಸಬೇಕು.

3. **ನೂತನ ಪ್ರವಾಸೋದ್ಯಮ ಯೋಜನೆ** ಎಂದರೆ, ಈ ನೀತಿಯ ಕಾರ್ಯಾಚರಣೆ ಅವಧಿಯಲ್ಲಿ ರೂಪಿಸಿ ಜಾರಿಗೊಳಿಸಿದ ಅರ್ಹ ಪ್ರವಾಸೋದ್ಯಮ ಯೋಜನೆ.
4. **ಚಾಲ್ತಿಯಲ್ಲಿರುವ ಪ್ರವಾಸೋದ್ಯಮ ಯೋಜನೆ** ಎಂದರೆ, ಈ ನೀತಿಯ ಕಾರ್ಯಾಚರಣೆ ಅವಧಿಯ ಮುನ್ನವೇ ರೂಪಿಸಿ ಜಾರಿಗೊಳಿಸಿದ ಅರ್ಹ ಪ್ರವಾಸೋದ್ಯಮ ಯೋಜನೆ.
5. **ವಿಸ್ತರಿತ ಪ್ರವಾಸೋದ್ಯಮ ಯೋಜನೆ** ಎಂದರೆ, ಇದು ಯೋಜನೆಗೆ ಸಂಬಂಧಿಸಿದ ನಿರ್ಮಿತ ಪ್ರದೇಶ ಮತ್ತು/ ಅಥವಾ ಇಪಿಸಿಯ (ಅರ್ಹ ಯೋಜನಾ ವೆಚ್ಚ) ವಿಷಯದಲ್ಲಿ ಚಾಲ್ತಿಯಲ್ಲಿರುವ ಸಾಮರ್ಥ್ಯದ ಶೇ.50 ಕ್ಕಿಂತ ಹೆಚ್ಚಿರುವ, ಚಾಲ್ತಿಯಲ್ಲಿರುವ ಅರ್ಹ ಪ್ರವಾಸೋದ್ಯಮ ಯೋಜನೆ ಎಂದು ಅರ್ಥೈಸತಕ್ಕದ್ದು. ಚಾಲ್ತಿಯಲ್ಲಿರುವ ಪ್ರವಾಸೋದ್ಯಮ ಯೋಜನೆಯ ಒಂದೇ ಒಂದು ವಿಸ್ತರಣಾ ಯೋಜನೆಯು ಮಾತ್ರವೇ ಈ ನೀತಿಯ ಕಾರ್ಯಾಚರಣೆ ಅವಧಿಯಲ್ಲಿ ನೆರವಿಗೆ ಅರ್ಹವಾಗಿರತಕ್ಕದ್ದು.
6. **ಪ್ರವಾಸೋದ್ಯಮ ಸೇವಾದಾತರು** ಎಂದರೆ: ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತಹ ಯಾವುದೇ ಸೇವೆಯನ್ನು ಒದಗಿಸುವಲ್ಲಿ ನಿರಂತರವಾಗಿರುವ ಸಂಬಂಧಪಟ್ಟ ಕಾನೂನು ಅಡಿಯಲ್ಲಿ ಬರುವ ಯಾವುದೇ ಕಂಪನಿ, ಸಂಘ ಹಾಗೂ ಸಂಸ್ಥೆ. ಇದು ಪ್ರವಾಸೋದ್ಯಮ ಯೋಜನೆಗಳ ಕಾರ್ಯಾಚರಣೆ ಮತ್ತು / ಅಥವಾ ನಿರ್ವಹಣೆಗೆ ಹೊಣೆಯಾದ ಯಾವುದೇ ಸಂಸ್ಥೆ. ಹಾಗೆಯೇ ಇದು ಪ್ರವಾಸ ಪ್ರವರ್ತಕರು, ಪ್ರವಾಸ ಏಜೆಂಟರು, ಸಾರಿಗೆ ಪ್ರವರ್ತಕರು, ಟಿಕೆಟ್ ಏಜೆಂಟರು, ಪ್ರವಾಸಿ ಗೈಡ್ ಗಳು ಮುಂತಾದವರನ್ನು ಒಳಗೊಳ್ಳಬಹುದು. ಆದರೆ ಅವರಿಗೆ ಪರಿಮಿತವಾಗಬಾರದು. ಪ್ರವಾಸೊದ್ಯಮ ಸೇವಾದಾತರು ಅಧ್ಯಾಯ-14 ರಲ್ಲಿ ವಿವರಿಸಿದಂತೆ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು ಹಾಗೂ ವಿನಾಯಿತಿಗಳನ್ನು ಪಡೆಯಲು ಅರ್ಹತೆ ಹೊಂದುವುದಕ್ಕೆ ಪ್ರವಾಸೊದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸಿರಬೇಕು.
7. **ವಾಣಿಜ್ಯ ಕಾರ್ಯಾಚರಣಾ ದಿನಾಂಕ** ಎಂದರೆ, ನೂತನ ಪ್ರವಾಸೋದ್ಯಮ ಯೋಜನೆಯನ್ನು ಸಂಬಂಧಿತ ಸರ್ಕಾರಿ ನಿಯಮಗಳ ಮೇರೆಗೆ ಸೂಕ್ತ ಪರೀಕ್ಷೆ, ಪ್ರಯೋಗಗಳು ಹಾಗೂ ಕಾರ್ಯಾರಂಭಕ್ಕೆ ಒಳಪಡಿಸಿದ ತರುವಾಯ ಅದನ್ನು ವಾಣಿಜ್ಯಾತ್ಮಕವಾಗಿ ಪ್ರವಾಸಿಗರಿಗೆ ಮುಕ್ತಗೊಳಿಸುವಂಥ ದಿನಾಂಕ
8. **ಜಾರಿ ದಿನಾಂಕ** ಎಂದರೆ, ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25ರ ಗೆಜೆಟ್ ಅಧಿಸೂಚನೆಯಾದ ಹೊರಡಿಸಿದ ದಿನದಿಂದ, ನೀತಿಯ ಕಾರ್ಯಾಚರಣೆ ಅವಧಿಯು ಆರಂಭವಾಗುತ್ತದೆ.
9. **ಅರ್ಹ ಯೋಜನಾ ವೆಚ್ಚ (ಇಪಿಸಿ)** ಎಂದರೆ, ಈ ನೀತಿಯಲ್ಲಿ ಪರಿಭಾಷಿಸಿದ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಯ ಉದ್ದೇಶಗಳಿಗಾಗಿ ಸ್ಥಿರ ಸ್ವತ್ತುಗಳಲ್ಲಿ ಹೂಡಿದ ಹೂಡಿಕೆ ಎಂದು ಅರ್ಥ. ಅರ್ಹ ಯೋಜನಾ ವೆಚ್ಚ ಎಂದರೆ ಸಿವಿಲ್ ನಿರ್ಮಾಣಕ್ಕಾಗಿ ಭರಿಸಿದ (ಶೌಚಾಲಯಗಳು, ವಿಕಲಚೇತನರಿಗೆ ಸಂಬಂಧಿಸಿದ ಸೌಕರ್ಯಗಳು, ವಿದ್ಯುದೀಕರಣವೂ ಒಳಗೊಂಡಂತೆ) ಹಾಗೂ ಸುರಕ್ಷತಾ ಸಾಧನಗಳು, ನೀರು ಶುದ್ಧೀಕರಣ, ಡಿಜಿ ಸೆಟ್‌ಗಳು, ಹವಾನಿಯಂತ್ರಣ ಸಾಧನ, ಲಿಫ್ಟ್ ಗಳು, ತ್ಯಾಜ್ಯ ನೀರು ಸಂಸ್ಕರಣಾ ಘಟಕ, ಮಳೆ ನೀರು ಕೊಯ್ಲು, ಸೌರ ಉಷ್ಣತೆ, ಸೌರ ಬೆಳಕು ವ್ಯವಸ್ಥೆ, ಬೋರ್ ವೆಲ್‌ಗಳು ಮುಂತಾದ ಸೌಕರ್ಯಗಳನ್ನು ಒದಗಿಸಲು ಮಾಡಿದ ವೆಚ್ಚಗಳು.

ಅರ್ಹ ಯೋಜನಾ ವೆಚ್ಚವು, ಈ ನೀತಿಯಲ್ಲಿ ಪರಿಭಾಷಿಸಿದ ಈ ಕೆಳಕಂಡ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಪಟ್ಟ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳನ್ನು ನಿರ್ದಿಷ್ಟವಾಗಿ ಕೈಗೊಳ್ಳಲು ಚರ ಮತ್ತು ಸ್ಥಿರ ಸಾಧನ ಹಾಗೂ ಅಗತ್ಯ ವಾಹನಗಳಿಗೆ ಮಾಡಿದ ವೆಚ್ಚಗಳನ್ನು ಸಹ ಒಳಗೊಂಡಿರತಕ್ಕದ್ದು.

i. ಸಾಹಸ (ಅಡ್ವೆಂಚರ್) ಪ್ರವಾಸೋದ್ಯಮ ಯೋಜನೆ
ii. ಹೌಸ್‌ಬೋಟ್ ಯೋಜನೆ







ಕವಳೆದುರ್ಗ, ಶಿವಮೊಗ್ಗ

ಅರ್ಹ ಯೋಜನಾ ವೆಚ್ಚವು ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಈ ಕೆಳಕಂಡ ಹೂಡಿಕೆ ವೆಚ್ಚಗಳನ್ನು ಒಳಗೊಂಡಿರುವುದಿಲ್ಲ.

i. ನಿರ್ವಹಣಾ ಬಂಡವಾಳ;
ii. ಕಾರ್ಯಾಚರಣೆ-ಪೂರ್ವ ವೆಚ್ಚಗಳು ಮತ್ತು ಆರಂಭಿಕ ವೆಚ್ಚಗಳು;
iii. ಭಾರತದ ಒಳಗೆ ಅಥವಾ ಹೊರಗಿನಿಂದ ಖರೀದಿಸಿದ ಅಥವಾ ಸ್ಥಳಾಂತರಿಸಿದ ದ್ವಿತೀಯ ಬಳಕೆಯ ಯಂತ್ರ ಸಾಮಗ್ರಿ ಹಾಗೂ ಯಂತ್ರೋಪಕರಣಗಳು;
iv. ಬಂಡವಾಳೀಕರಿಸಿದ ಬಡ್ಡಿ;
v. ಉತ್ಪಾದನಾ ಪ್ರಕ್ರಿಯೆಗೆ ಬಳಕೆಯಾಗುವ ಪದಾರ್ಥಗಳು;
vi. ನಿರ್ವಹಣೆ ಅಥವಾ ದುರಸ್ತಿಗಳಿಗೆ ಸಂಬಂಧಿಸಿದ ದಾಸ್ತಾನುಗಳು;
vii. ಭೂಮಿಯ ಬೆಲೆಯೂ ಸೇರಿದಂತೆ, ಪ್ರವಾಸೋದ್ಯಮ ಯೋಜನೆಯನ್ನು ಸ್ಥಾಪಿಸಲು ಅಗತ್ಯವಿರುವ ಭೂಮಿಯ ಮೇಲೆ ಮಾಡಿದ ಹೂಡಿಕೆ;
viii. ಮೇಲೆ ನಿರ್ದಿಷ್ಟಪಡಿಸಲಾದಂತೆ, ಕೆಲವು ಪ್ರವಾಸೋದ್ಯಮ ಯೋಜನೆಗಳಿಗೆ ಅನುಮತಿ ನೀಡಿರುವುದನ್ನು ಹೊರತುಪಡಿಸಿದ ವಾಹನಗಳು;
ix. ಪೀಠೋಪಕರಣಗಳು, ಜೋಡಣೆಗಳು, ಕಟ್ಲರಿ, ಕ್ರಾಕರಿ, ಪಾತ್ರೆಗಳು; ಹಾಗೂ
x. ಮಾರಾಟ/ಗುತ್ತಿಗೆ/ಬಾಡಿಗೆಯ ಉದ್ದೇಶದ, ರಿಯಲ್ ಎಸ್ಟೇಟ್ ವ್ಯವಹಾರಗಳ ರೂಪದಲ್ಲಿ ಮಾಡಿದ ಯಾವುದೇ ನಿರ್ಮಾಣ. ಇದು ಅಂಗಡಿಗಳು, ಫ್ಲಾಟ್‌ಗಳು, ಕಚೇರಿಗಳು ಇತ್ಯಾದಿಗಳನ್ನು ಒಳಗೊಂಡಿರಬಹುದು.

ಅರ್ಹ ಯೋಜನಾ ವೆಚ್ಚವು ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕು ಸಿದ್ಧಪಡಿಸಿದ ಮತ್ತು ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಯುಕ್ತ ರೀತಿಯಲ್ಲಿ ಪ್ರಮಾಣೀಕರಿಸಿದ ಮೌಲ್ಯನಿರ್ಣಯ ವರದಿಗೆ ಅನುಗುಣವಾಗಿರತಕ್ಕದ್ದು.


10. **ಬೃಹತ್ ಪ್ರವಾಸೋದ್ಯಮ ಯೋಜನೆ** ಎಂದರೆ, 100 ಕೋಟಿ ರೂಪಾಯಿಗೂ ಮೇಲ್ಪಟ್ಟ ಅರ್ಹ ಯೋಜನಾ ವೆಚ್ಚ (ಇಪಿಸಿ)ವುಳ್ಳ ಪ್ರವಾಸೋದ್ಯಮ ಯೋಜನೆ ಎಂದು ಅರ್ಥೈಸತಕ್ಕದ್ದು.
11. **ಪ್ರವಾಸೋದ್ಯಮ ಇಲಾಖೆ** ಎಂದರೆ, ಆ ಸಂದರ್ಭ ಅಥವಾ ಅರ್ಥಕ್ಕೆ ಅದು ವಿರುದ್ಧವಾದ ಹೊರತು, ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ ಎಂದು ಅರ್ಥೈಸತಕ್ಕದ್ದು.

ಪ್ರವಾಸೋದ್ಯಮ ಮಂತ್ರಾಲಯ ಎಂದರೆ, ಆ ಸಂದರ್ಭ ಅಥವಾ ಅರ್ಥಕ್ಕೆ ಅದು ವಿರುದ್ಧವಾದ ಹೊರತು, ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ ಎಂದು ಅರ್ಥೈಸತಕ್ಕದ್ದು.

ಆದ್ಯತಾ ಪ್ರವಾಸೋದ್ಯಮ ತಾಣಗಳು ಎಂದರೆ, ಆದ್ಯತೆಯ ಮೇರೆಗೆ ಅಭಿವೃದ್ಧಿ ಪಡಿಸುವುದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಗುರುತಿಸಲಾಗಿರುವ ಕರ್ನಾಟಕದ ಪ್ರವಾಸಿ ತಾಣಗಳು. ಇಲಾಖೆಯು ಈ ಹಿಂದೆ ಗುರುತಿಸಲಾಗಿರುವ ಕರ್ನಾಟಕದ ಪ್ರವಾಸಿ ತಾಣಗಳ ಸವಿವರವಾದ ಸಮೀಕ್ಷೆ ಮತ್ತು ಪರಿಶೀಲನೆಯನ್ನು ನಡೆಸಿದೆ. ಇದನ್ನಾಧರಿಸಿ ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮ ನೀತಿ 2020-25 ರ ಆರಂಭದಲ್ಲಿ ಈ ಕೆಳಕಂಡ ಆದ್ಯತಾ ಪ್ರವಾಸಿ ತಾಣಗಳನ್ನು ಗುರುತಿಸಿದೆ.

| ಕ್ರ. ಸಂ | ಜಿಲ್ಲೆ | ಆದ್ಯತಾ ಪ್ರವಾಸಿ ತಾಣಗಳು |
|---|---|---|
| 1 | ಬಾಗಲಕೋಟೆ | ಐಹೋಳೆ, ಬಾದಾಮಿ, ಪಟ್ಟದಕಲ್ಲು, ಕೂಡಲ ಸಂಗಮ |
| 2 | ಬಳ್ಳಾರಿ | ಬಲ್ಲಾರಿ, ಹಂಪಿ, ಹೊಸಪೇಟೆ, ಸಂಡೂರು |
| 3 | ಬೆಳಗಾವಿ | ಬೆಳಗಾವಿ, ಗೋಕಾಕ್, ಕಿತ್ತೂರು, ಸವದತ್ತಿ |
| 4 | ಬೆಂಗಳೂರು ಗ್ರಾಮಾಂತರ | ದಾಬಸ್ ಪೇಟೆ, ದೊಡ್ಡಬಳ್ಳಾಪುರ |
| 5 | ಬೆಂಗಳೂರು ನಗರ | ಅನ್ವಯಿಸುವುದಿಲ್ಲ |
| 6 | ಬೀದರ್ | ಬೀದರ್, ಬಸವಕಲ್ಯಾಣ |
| 7 | ಚಾಮರಾಜನಗರ | ಜಿಲ್ಲೆಯಾದ್ಯಂತ |
| 8 | ಚಿಕ್ಕಬಳ್ಳಾಪುರ | ಚಿಕ್ಕಬಲ್ಲಾಪುರ, ಗೌರಿಬಿದನೂರ್, ಮುದ್ದೇನಹಳ್ಳಿ, ನಂದಿ ಬೆಟ್ಟಗಳು |





| ಕ್ರ. ಸಂ | ಜಿಲ್ಲೆ | ಆದ್ಯತಾ ಪ್ರವಾಸಿ ತಾಣಗಳು |
|---|---|---|
| 9 | ಚಿಕ್ಕಮಂಗಳೂರು | ಜಿಲ್ಲೆಯಾದ್ಯಂತ |
| 10 | ಚಿತ್ರದುರ್ಗ | ಚಿತ್ರದುರ್ಗ, ಹಿರಿಯೂರು |
| 11 | ದಕ್ಷಿಣ ಕನ್ನಡ | ಜಿಲ್ಲೆಯಾದ್ಯಂತ |
| 12 | ದಾವಣಗೆರೆ | ಬಾಗಾಳಿ, ದಾವಣಗೆರೆ, ಶಾಂತಿಸಾಗರ, ಸಂತೇಬೆನ್ನೂರು. |
| 13 | ಧಾರವಾಡ | ಧಾರವಾಡ, ಹುಬ್ಬಳ್ಳಿ, ಮುಂಡಗೋಡು |
| 14 | ಗದಗ | ಡಂಬಳ, ಗದಗ, ಲಕ್ಕುಂಡಿ |
| 15 | ಹಾಸನ | ಜಿಲ್ಲೆಯಾದ್ಯಂತ |
| 16 | ಹಾವೇರಿ | ಚೌಡದಾನಪುರ, ಹಾವೇರಿ, ರಾಣೆಬೆನ್ನೂರು |
| 17 | ಕಲಬುರಗಿ | ಚಿಂಚೋಲಿ, ಗಂಗಾಪುರ, ಕಲಬುರಗಿ, ಮಾಳಖೇಡ ಸನ್ನತಿ |
| 18 | ಕೊಡಗು | ಜಿಲ್ಲೆಯಾದ್ಯಂತ |
| 19 | ಕೋಲಾರ | ಅವನಿ, ಕೋಲಾರ, ಕೋಲಾರ ಗೋಲ್ಡ್ ಫೀಲ್ಡ್ |
| 20 | ಕೊಪ್ಪಳ | ಆನೆಗುಂಡಿ, ಇಟಗಿ, ಕೊಪ್ಪಳ, ಮುನೀರಬಾದ್ |
| 21 | ಮಂಡ್ಯ | ಆದಿಚುಂಚುನಗರಿ, ಕೊಕ್ಕರೆಬೆಳ್ಳೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಶಿವನಸಮುದ್ರ |
| 22 | ಮೈಸೂರು | ಮೈಸೂರು, ಬೈಲಕುಪ್ಪೆ, ನಂಜನಗೂಡು, ಸೋಮನಾಥಪುರ |
| 23 | ರಾಯಚೂರು | ಹಟ್ಟಿ, ಮಸ್ಕಿ, ರಾಯಚೂರು |
| 24 | ರಾಮನಗರ | ಕನಕಪುರ, ಮಾಗಡಿ, ರಾಮನಗರ |
| 25 | ಶಿವಮೊಗ್ಗ | ಜಿಲ್ಲೆಯಾದ್ಯಂತ |
| 26 | ತುಮಕೂರು | ತುಮಕೂರು, ದೇವರಾಯನದುರ್ಗ, ಮಧುಗಿರಿ, |
| 27 | ಉಡುಪಿ | ಜಿಲ್ಲೆಯಾದ್ಯಂತ |
| 28 | ಉತ್ತರ ಕನ್ನಡ | ಜಿಲ್ಲೆಯಾದ್ಯಂತ |
| 29 | ವಿಜಯಪುರ | ವಿಜಯಪುರ, ಆಲಮಟ್ಟಿ, ಬಸವನಬಾಗೇವಾಡಿ, |
| 30 | ಯಾದಗಿರಿ | ಸುರಪುರ, ಯಾದಗಿರಿ |

ಈ ಕೆಳಕಂಡ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಇಡೀ ಜಿಲ್ಲೆಯನ್ನು ಎಂದರೆ ಜಿಲ್ಲೆಯೊಳಗಿರುವ ಎಲ್ಲಾ ಪ್ರವಾಸಿ ತಾಣಗಳನ್ನು ಆದ್ಯತೆ ಪ್ರವಾಸಿ ತಾಣಗಳೆಂದು ಪರಿಗಣಿಸತಕ್ಕದು.

1. ಚಾಮರಾಜನಗರ
2. ಚಿಕ್ಕಮಂಗಳೂರು
3. ದಕ್ಷಿಣ ಕನ್ನಡ
4. ಹಾಸನ
5. ಕೊಡಗು
6. ಶಿವಮೊಗ್ಗ
7. ಉಡುಪಿ
8. ಉತ್ತರ ಕನ್ನಡ

ಆದ್ಯತಾ ಪ್ರವಾಸಿ ತಾಣಗಳ ಪಟ್ಟಿಯು ಕಾಲಕಾಲಕ್ಕೆ ಇಲಾಖೆಯು ಅಧಿಸೂಚಿಸುವಂತೆ ಇರತಕ್ಕದ್ದು. ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ವಲಯದ ಗುರಿಗಳನ್ನಾಧರಿಸಿ ಇಲಾಖೆಯು ಆದ್ಯತಾ ಪ್ರವಾಸಿ ತಾಣಗಳನ್ನು ಪರಿಷ್ಕರಿಸುವುದಕ್ಕೆ ನಿಯತವಾಗಿ ಮೌಲ್ಯ ನಿರ್ಧರಣೆ ಮಾಡತಕ್ಕದ್ದು.







ಗೊಮ್ಮಟೇಶ್ವರ ಮೂರ್ತಿ, ಶ್ರವಣಬೆಳಗೋಳ



# 14 ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು

ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಎಲ್ಲಾ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗೆ ಈ ಕೆಳಕಂಡ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡತಕ್ಕದ್ದು. ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು ಮಾತ್ರವೇ ಈ ನೀತಿಯ ಅಡಿಯಲ್ಲಿ ಸಹಾಯಧನಗಳಿಗೆ ಅರ್ಹವಾಗಿರತಕ್ಕದ್ದು.

ಕಾರ್ಯನೀತಿಯ ಕಾರ್ಯಾಚರಣಾ ಮಾರ್ಗಸೂಚಿಗಳು ಪ್ರತಿಯೊಂದು ಅರ್ಹ ಪ್ರವಾಸೋದ್ಯಮ ಯೋಜನೆಯ ಪರಿಭಾಷೆಯನ್ನು ಮತ್ತು ಈ ಯೋಜನೆಯ ಅಡಿಯಲ್ಲಿ ವಿವಿಧ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಕ್ಲೇಮು ಮಾಡಿಕೊಳ್ಳುವುದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಅನುಸರಿಸಬೇಕಾದ ಕನಿಷ್ಠ ಮೂಲಭೂತ ಯೋಜನಾ ಅಗತ್ಯತೆಗಳನ್ನು ಒಳಗೊಂಡಿರತಕ್ಕದ್ದು. ಈ ಕಾರ್ಯಾಚರಣಾ ಮಾರ್ಗಸೂಚಿಗಳು, ಈ ಯೋಜನೆಯ ಅಡಿಯಲ್ಲಿ ವಿವಿಧ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಕ್ಲೇಮು ಮಾಡುವುದಕ್ಕೆ ಅರ್ಹತೆ ಹೊಂದಲು ಪ್ರವಾಸೋದ್ಯಮ ಯೋಜನೆಯು ಕಡ್ಡಾಯವಾಗಿ ಕೈಗೊಳ್ಳಬೇಕಾದ ಸುಸ್ಥಿರತೆ, ಸುರಕ್ಷತೆ ಮತ್ತು ನೈರ್ಮಲ್ಯತೆಗಳಿಗೆ ಸಂಬಂಧಿಸಿದ ಕ್ರಮಗಳನ್ನು ಸಹ ಪಟ್ಟಿ ಮಾಡತಕ್ಕದ್ದು. ಕರ್ನಾಟಕ ಪ್ರವಾಸೋದ್ಯಮಕ್ಕೆ ಗಣನೀಯ ಪ್ರಯೋಜನಗಳನ್ನು ನೀಡುವಂತಹ ಪ್ರಸ್ತಾವನೆಗಳ ಸಾಮರ್ಥ್ಯಗಳನ್ನಾಧರಿಸಿ ಮತ್ತು ಅವು ಆದ್ಯತಾ ಪ್ರವಾಸಿ ತಾಣಗಳಲ್ಲಿದ್ದರೆ, ಅಂತಹ ಪ್ರಸ್ತಾವನೆಗಳಿಗೆ ಆದ್ಯತೆ ನೀಡತಕ್ಕದ್ದು.

## 14.1 ಪ್ರೋತ್ಸಾಹಕಗಳು

### 14.1.1 ಪ್ರವಾಸೋದ್ಯಮ ಯೋಜನೆಗಳ ಮತ್ತು ಪ್ರವಾಸೋದ್ಯಮ ಸೇವಾದಾತರ ನೋಂದಣಿ.

ಯಾವುದೇ ಒಂದು ಪ್ರವಾಸೋದ್ಯಮ ಯೋಜನೆ ಮತ್ತು ಪ್ರವಾಸೋದ್ಯಮ ಸೇವಾದಾತರು ಈ ಪ್ರಕರಣದ ಅಡಿಯಲ್ಲಿ ಪ್ರಸ್ತಾಪಿಸಿದ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯುವುದಕ್ಕೆ ಅರ್ಹತೆ ಹೊಂದಲು ಮೊದಲಿಗೆ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ನೋಂದಣಿಯು ಈ ನೀತಿಯ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಅನುಸಾರವಾಗಿರತಕ್ಕದ್ದು.

ಪ್ರವಾಸೋದ್ಯಮ ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ 2015 ಮತ್ತು ಅದರ ತಿದ್ದುಪಡಿಗಳ ಅಡಿಯಲ್ಲಿ ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ಸೇವಾದಾತರ ಕಡ್ಡಾಯ ಆನ್ ಲೈನ್ ನೋಂದಾಣಿಗಾಗಿ ಕರ್ನಾಟಕ ಪ್ರವಾಸೋದ್ಯಮ ವೆಬ್ ಸೈಟ್ ನಲ್ಲಿ ಸುಸ್ಥಾಪಿತ ವ್ಯವಸ್ಥೆ end to end system ಅನ್ನು ಸೃಜಿಸತಕ್ಕದ್ದು. ಅಲ್ಲದೆ ಇಲಾಖೆಯು ಪ್ರವಾಸೋದ್ಯಮ ಯೋಜನೆಗಳ ಶ್ರೇಣೀಕರಣಕ್ಕಾಗಿ ಒಂದು ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನಿಸತಕ್ಕದ್ದು.

ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಿರುವ ಎಲ್ಲಾ ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ಸೇವಾದಾತರ ಪಟ್ಟಿಯನ್ನು ಕರ್ನಾಟಕ ಪ್ರವಾಸೋದ್ಯಮ ವೆಬ್ ಸೈಟ್ ನಲ್ಲಿ ಪ್ರಕಟಿಸತಕ್ಕದ್ದು.

### 14.1.2 ಬೆಂಬಲ ಸೌಲಭ್ಯ

ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಯನ್ನು ಮೇಲ್ವಿಚಾರಣೆ ಮಾಡುವಾಗ ಮತ್ತು ಖಾತ್ರಿಪಡಿಸಿಕೊಳ್ಳುವಾಗ ರಾಜ್ಯದಲ್ಲಿ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಯ ವೇಗವನ್ನು ಕಾಪಾಡಿಕೊಳ್ಳಲು ಮತ್ತು ಅಂತರ್-ಇಲಾಖೆಗಳ ನಡುವಿನ ಸಮಸ್ಯೆಗಳನ್ನು ಬಗೆಹರಿಸಲು ಇಲಾಖೆಯು, ಸಾಂಸ್ಥಿಕ ವ್ಯವಸ್ಥೆಗಳ ಏರ್ಪಾಟನ್ನು ಮಾಡತಕ್ಕದ್ದು. ಪ್ರವಾಸೋದ್ಯಮ ಯೋಜನೆಗಳು ಸರ್ಕಾರದ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅವಶ್ಯಕ ಅನುಮೋದನೆಗಳು, ಮಂಜೂರಾತಿಗಳು, ಅನುಮತಿಗಳು, ಪರವಾನಗಿಗಳು, ಪ್ರಮಾಣೀಕರಣಗಳು, ನಿರಾಕ್ಷೇಪಣ ಪ್ರಮಾಣ ಪತ್ರಗಳು (ಎನ್ಓಸಿಗಳು) ಇತ್ಯಾದಿಗಳನ್ನು ಪ್ರವಾಸೋದ್ಯಮ ಇಲಾಖೆಯು ಬೆಂಬಲ ನೀಡತಕ್ಕದ್ದು.

### 14.1.3 ಪ್ರವಾಸೋದ್ಯಮಕ್ಕೆ ಮಾರುಕಟ್ಟೆಯ ಬೆಂಬಲ


ಪ್ರವಾಸೋದ್ಯಮ ಇಲಾಖೆಯು, ಆಯಾ ಸಂದರ್ಭಕ್ಕನುಗುಣವಾಗಿ case to case basis ಪ್ರವಾಸೋದ್ಯಮ ಯೋಜನೆಗಳಿಗೆ ಮಾರುಕಟ್ಟೆ ಬೆಂಬಲವನ್ನು ಒದಗಿಸತಕ್ಕದ್ದು, ಇಲಾಖೆಯು ನಿರ್ಧರಿಸಲಾದಂತೆ ಕರ್ನಾಟಕದ ಆಕರ್ಷಕ ಪ್ರವಾಸೋದ್ಯಮ ಯೋಜನೆಗಳು ಕರ್ನಾಟಕ ಪ್ರವಾಸೋದ್ಯಮದ ಮಾರುಕಟ್ಟೆ ಪೂರಿತವಾದ ಪ್ರಚಾರ ಸಂಗತಿಗಳನ್ನೊಳಗೊಂಡ ವೈಶಿಷ್ಟ್ಯತೆಯುಳ್ಳದ್ದಾಗಿರ ತಕ್ಕದ್ದು. ಇದಕ್ಕೆ ಕರಪತ್ರಗಳು, ಮುದ್ರಣ ಮಾಧ್ಯಮ, ಸಾಮಾಜಿಕ ಮಾಧ್ಯಮ, ವೆಬ್‌ಸೈಟ್ ಮುಂತಾದವುಗಳ ಮೂಲಕ ಪ್ರಚಾರ ನೀಡತಕ್ಕದ್ದು.

### 14.1.4 ಸುಸ್ಥಿರ ಕ್ರಮಗಳಿಗೆ ವಿಶೇಷ ಮನ್ನಣೆ

ಸಮಗ್ರ ಸುಸ್ಥಿರ ಕ್ರಮಗಳನ್ನು ಕೈಗೊಳ್ಳುವಂಥ ಅಥವಾ ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳಿಗೆ ಕಟಿಬದ್ಧತೆಯನ್ನು ತೋರಿಸುವಂಥ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರವಾಸೋದ್ಯಮ ಇಲಾಖೆಯು ವಿಶೇಷ ಮನ್ನಣೆಯನ್ನು ನೀಡತಕ್ಕದ್ದು. ವಿಶೇಷ ಮನ್ನಣೆಯನ್ನು ಪಡೆದಿರುವಂತಹ ಪ್ರವಾಸೋದ್ಯಮ ಯೋಜನೆಗಳ ವಿವರಗಳನ್ನು ಗ್ರಾಹಕರಿಗೆ ತಮ್ಮ ವಿವೇಚಾನುಸಾರ ಆಯ್ಕೆಗಳನ್ನು ಮಾಡಿಕೊಳ್ಳುವ ಅನುಕೂಲಕ್ಕಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸತಕ್ಕದ್ದು.

### 14.1.5 ಸುಸ್ಥಿರ ಉಪಕ್ರಮಗಳಿಗಾಗಿ ನೆರವು

ಪ್ರವಾಸೋದ್ಯಮ ಇಲಾಖೆಯು, ಇಲಾಖೆಯಲ್ಲಿ ನೋಂದಾಯಿತವಾಗಿರುವಂತಹ ಅರ್ಹ ಪ್ರವಾಸೋದ್ಯಮ



| ಕ್ರಮ ಸಂಖ್ಯೆ | ಕ್ರಮ | ಆರ್ಥಿಕ ನೆರವು | ಪ್ರತಿ ಪ್ರವಾಸೋದ್ಯಮ ಯೋಜನೆಯ ಸಹಾಯಧನಕ್ಕೆ ಸಂಬಂಧಿಸಿದ ಗರಿಷ್ಠ ಮೊತ್ತ |
|---|---|---|---|
| 1 | ಜಲ ಸಂರಕ್ಷಣೆ ಮತ್ತು ಮಳೆ ನೀರು ಸಂಗ್ರಹ | ಕ್ರಮ ಕೈಗೊಳ್ಳುವುದಕ್ಕಾಗಿ ಬಂಡವಾಳ ವೆಚ್ಚದ ಶೇಕಡಾ 50ರಷ್ಟು | ರೂ.1,00,000/- (ಒಂದು ಲಕ್ಷ ರೂ.ಗಳು) |
| 2 | ನವೀಕರಿಸಬಹುದಾದ ಇಂಧನ ಮೂಲಗಳ ಅಳವಡಿಕೆ | ಕ್ರಮ ಕೈಗೊಳ್ಳುವುದಕ್ಕಾಗಿ ಬಂಡವಾಳ ವೆಚ್ಚದ ಶೇಕಡಾ 50ರಷ್ಟು | ರೂ.1,00,000/- (ಒಂದು ಲಕ್ಷ ರೂ.ಗಳು) |
| 3 | ಮಾಲಿನ್ಯ ನಿಯಂತ್ರಣ ಕ್ರಮಗಳ ಅಳವಡಿಕೆ | ಕ್ರಮ ಕೈಗೊಳ್ಳುವುದಕ್ಕಾಗಿ ಬಂಡವಾಳ ವೆಚ್ಚದ ಶೇಕಡಾ 50ರಷ್ಟು | ರೂ.1,00,000/- (ಒಂದು ಲಕ್ಷ ರೂ.ಗಳು) |

ಯೋಜನೆಗಳಿಗೆ ಸುಸ್ಥಿರ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಆರ್ಥಿಕ ನೆರವನ್ನು ಒದಗಿಸತಕ್ಕದ್ದು. ಈ ಕೆಳಗಿನ ಕೋಷ್ಟಕವು ಇಲಾಖೆಯಿಂದ ನೀಡಬಹುದಾದ ನೆರವಿನ ಮೊತ್ತದ ಸಂಕ್ಷಿಪ್ತ ವಿವರಣೆಯನ್ನು ನೀಡುತ್ತದೆ -

ಒಂದು ಆರ್ಥಿಕ ವರ್ಷದಲ್ಲಿ ಮೇಲ್ಕಂಡ ಹಣಕಾಸು ನೆರವನ್ನು ಯೋಜನೆಯ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚಿನ ಬಾರಿ ಸಹಾಯಧನ ಸ್ವೀಕರಿಸದಿರುವ ಯೋಜನೆಗಳಿಗೆ, ಪ್ರತಿ ಪ್ರವರ್ಗಕ್ಕೆ ಗರಿಷ್ಠ ಒಟ್ಟು ಐದು ಪ್ರವಾಸೋದ್ಯಮ ಯೋಜನೆಗಳಿಗೆ ಮಿತಿಗೊಳಿಸತಕ್ಕದ್ದು.

ಇಲಾಖೆಯು ಕರ್ನಾಟಕದಾದ್ಯಂತ ಗುರುತಿಸಲಾದ ತಾಣಗಳಲ್ಲಿ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಸುಸ್ಥಿರ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಹೆಚ್ಚವರಿ ನೆರವನ್ನು ಒದಗಿಸಬಹುದು.

### 14.1.6 ಪ್ರವಾಸ ಸಂಘಟಕರು ಮತ್ತು ಆನ್ ಲೈನ್ ಪ್ರವಾಸ ಏಜೆಂಟರೊಂದಿಗೆ ಸಹಭಾಗಿತ್ವ.

ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ವಲಯದಲ್ಲಿ ಕಾರ್ಯನಿರ್ವಹಿಸುವ ಸಂಘಟಕರು ಮತ್ತು ಆನ್ ಲೈನ್ ಪ್ರವಾಸ ಏಜೆಂಟರನ್ನು ಗುರುತಿಸಲು ವ್ಯವಸ್ಥೆಯೊಂದನ್ನು ರೂಪಿಸತಕ್ಕದ್ದು ಮತ್ತು ಪ್ರವಾಸೋದ್ಯಮ ಹಿತಾಸಕ್ತಿದಾರರಿಗೆ ಅನುಕೂಲವಾಗ ಬಹುದಾದಂತಹ ಕಾರ್ಯಕ್ರಮಗಳನ್ನು ಮತ್ತು ಉಪಕ್ರಮಗಳನ್ನು ನಿರೂಪಿಸಲು ಅವರೊಂದಿಗೆ ಸಹಭಾಗಿತ್ವವನ್ನು ಹೊಂದತಕ್ಕದ್ದು.

### 14.1.7 ಅಂತರರಾಜ್ಯ ಪ್ರಯಾಣ ಮಾಡಲು ಪ್ರವಾಸಿ ವಾಹನಗಳಿಗೆ ಅನುಕೂಲ ಕಲ್ಪಿಸುವುದು

ಇಲಾಖೆಯು, ಕರ್ನಾಟಕ ಮತ್ತು ನೆರೆ ರಾಜ್ಯಗಳಿಗೆ ಸುಗಮವಾಗಿ ಪ್ರಯಾಣ ಮಾಡಲು ಪ್ರವಾಸಿ ವಾಹನಗಳಿಗೆ ಅನುಕೂಲ ಕಲ್ಪಿಸತಕ್ಕದ್ದು.



ಬೈಲಕುಪ್ಪೆ

#### 14.1.8 ಮಾರುಕಟ್ಟೆ ಅಭಿವೃದ್ಧಿ ನೆರವು.

ಪ್ರವಾಸೋದ್ಯಮ ಇಲಾಖೆಯು ಗುರುತಿಸುವ ಪ್ರವಾಸೋದ್ಯಮ ಸೇವಾದಾರರು ದೇಶೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ ಈ ಮುಂದಿನ ಮಾರುಕಟ್ಟೆ ಅಭಿವೃದ್ಧಿ ನೆರವನ್ನು (MDA- Marketing Development assistance) ಪಡೆಯಲು ಅರ್ಹರಾಗಿರುತ್ತಾರೆ.

| ಕ್ರಮ ಸಂಖ್ಯೆ | ಉತ್ತೇಜನಾತ್ಮಕ ಕಾರ್ಯಚಟುವಟಿಕೆಗಳು | ಮಾರುಕಟ್ಟೆ ಅಭಿವೃದ್ಧಿಗೆ ನೀಡುವ ವೆಚ್ಚ | ಆರ್ಥಿಕ ಸಹಾಯ | ಆರ್ಥಿಕ ಸಹಾಯದ ಗರಿಷ್ಠ ಮಿತಿ |
|---|---|---|---|---|
| 1 | ಪ್ರಚಾರ ಸಾಮಗ್ರಿಗಳ ಸಿದ್ಧತೆ | ಪ್ರವಾಸೋದ್ಯಮ ಇಲಾಖೆ ಅಥವಾ ಅದರ ಅಂಗ ಸಂಸ್ಥೆಗಳು ಪ್ರಾಯೋಜಿಸುವ ಅಥವಾ ಆಯೋಜಿಸುವ ಉತ್ಪನ್ನಗಳು/ ಕಾರ್ಯಕ್ರಮಗಳು/ಚಟುವಟಿಕೆಗಳ ಸಂದರ್ಭದಲ್ಲಿ ಬಳಸುವುದಕ್ಕಾಗಿ ಪ್ರಚಾರ ಸಾಮಗ್ರಿಗಳು (ಕರಪತ್ರ, ಉತ್ಪನ್ನದ ವಿಷಯ ಪಟ್ಟಿ (ಪ್ರಾಡಕ್ಟ್ ಕ್ಯಾಟಲಾಗ್), ಮಾಹಿತಿ ಕೈಪಿಡಿಗಳು ಇತ್ಯಾದಿ ಸಿದ್ದತೆಯ ವೆಚ್ಚ. | ಪ್ರಚಾರ ಸಾಮಗ್ರಿಗಳ ಮುದ್ರಣ ಪ್ರಕಟಣೆ ವೆಚ್ಚದ ಶೇ.50 | 1,00,000 ರೂ.ಗಳು |
| 2 | ರಾಷ್ಟ್ರೀಯ ಮಟ್ಟದ ದೇಶೀಯ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ. | ಉತ್ಸವಗಳು, ವಸ್ತುಪ್ರದರ್ಶನಗಳು, ಮಾರ್ಟ್‌ಗಳಂತಹ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರವಾಸ, ಪ್ರಯಾಣ ಅಥವಾ ಆತಿಥ್ಯಕ್ಷೇತ್ರದಲ್ಲಿ ಮಳಿಗೆ / ಸ್ಥಳದ ಬಾಡಿಗೆ ವೆಚ್ಚ | ಕಾರ್ಯಕ್ರಮದಲ್ಲಿ ಮಳಿಗೆ / ಸ್ಥಳದ ಬಾಡಿಗೆ ವೆಚ್ಚದ ಶೇ.50 | (ಒಂದು ಲಕ್ಷ ರೂಪಾಯಿಗಳು ಮಾತ್ರ) |
| 3 | ಅಂತರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ | ಉತ್ಸವಗಳೂ, ವಸ್ತುಪ್ರದರ್ಶನಗಳು, ಮಾರ್ಟ್‌ಗಳಂತಹ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರವಾಸ, ಪ್ರಯಾಣ ಅಥವಾ ಆತಿಥ್ಯಕ್ಷೇತ್ರದಲ್ಲಿ ಮಳಿಗೆ / ಸ್ಥಳದ ಬಾಡಿಗೆ ವೆಚ್ಚ | ಕಾರ್ಯಕ್ರಮದಲ್ಲಿ ಮಳಿಗೆ / ಸ್ಥಳದ ಬಾಡಿಗೆ ವೆಚ್ಚದ ಶೇ.50 | 30.000 ರೂ.ಗಳು (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) |
| 4 | ಕರ್ನಾಟಕ ಪ್ರವಾಸೋದ್ಯಮ ಆಯೋಜಿಸಿದ / ಪ್ರಾಯೋಜಿಸಿದ ರಸ್ತೆ ಪ್ರದರ್ಶನಗಳಲ್ಲಿ ಭಾಗವಹಿಸುವಿಕೆ. | ಭಾರತದಿಂದ ಯಾವುದೇ ದೇಶಕ್ಕೆ ವಿಮಾನದ ಮೂಲಕ ಪ್ರಯಾಣಿಸಿದ ಪ್ರಯಾಣ ವೆಚ್ಚ ಮತ್ತು / ಅಥವಾ ವಿದೇಶದಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಿಮಾನ / ರೈಲು ಮೂಲಕ ಪ್ರಯಾಣ ಮಾಡಿದ ಪ್ರಯಾಣ ವೆಚ್ಚ | ಕೇವಲ ಎಕಾನಮಿ ದರ್ಜೆಯ ಪ್ರಯಾಣದ ಒಟ್ಟು ವೆಚ್ಚದ ಶೇ.75 | 60,000/- ರೂ.ಗಳು (ಅರವತ್ತು ಸಾವಿರ ರೂಪಾಯಿಗಳು ಮಾತ್ರ) |

ಮೇಲ್ಕಂಡ ಮಾರುಕಟ್ಟೆ ಅಭಿವೃದ್ಧಿ ನೆರವನ್ನು, ಯೋಜನೆಯ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚಿನ ಬಾರಿ ಸಹಾಯಧನ ಸ್ವೀಕರಿಸದಿರುವ ಯೋಜನೆಗಳಿಗೆ ಪ್ರತಿ ಪ್ರವರ್ಗಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ ಒಟ್ಟು ಐದು ಪ್ರವಾಸೋದ್ಯಮ ಯೋಜನೆಗಳಿಗೆ ಮಿತಿಗೊಳಿಸತಕ್ಕದ್ದು.

ಇಲಾಖೆ ನೀಡುವ ಮಾರುಕಟ್ಟೆ ಅಭಿವೃದ್ಧಿ ನೆರವಿನ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ನೀಡಲಿದೆ.

#### 14.1.9 ಪ್ರವಾಸೋದ್ಯಮ ಉತ್ಕೃಷ್ಟತಾ ಪ್ರಶಸ್ತಿ

ಪ್ರವಾಸೋದ್ಯಮ ಇಲಾಖೆಯು, ಕರ್ನಾಟಕದಲ್ಲಿ ಪ್ರವಾಸೋದ್ಯಮ ಬೆಳವಣಿಗೆ ಕುರಿತ ಉತ್ಕೃಷ್ಟತೆ ಮತ್ತು ಕೊಡುಗೆಯನ್ನು ಗುರುತಿಸುವುದಕ್ಕಾಗಿ ಪ್ರವಾಸೋದ್ಯಮ ಉತ್ಕೃಷ್ಟತಾ ಪ್ರಶಸ್ತಿಗಳನ್ನು ಪ್ರತಿಷ್ಠಾಪಿಸತಕ್ಕದ್ದು. ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಮತ್ತು ವಿವರವಾದ ಮಾರ್ಗ ಸೂಚಿಗಳನ್ನು ಹೊರಡಿಸತಕ್ಕದ್ದು.

#### 14.1.10 ಹೋಂ ಸ್ಟೇಗಳಿಗೆ ರಿಯಾಯಿತಿ

ಪ್ರವಾಸೋದ್ಯಮ ಇಲಾಖೆಯೊಂದಿಗೆ ಕರ್ನಾಟಕದಲ್ಲಿ ನೋಂದಾಯಿತವಾದ ಹೋಂಸ್ಟೇ ಗಳಿಗಾಗಿ ಮಾರ್ಗಸೂಚಿಗಳ ಅನುಸರಣೆಗೊಳಪಟ್ಟು ಈ ಮುಂದಿನ ರಿಯಾಯಿತಿಗಳು ಅನ್ವಯವಾಗತಕ್ಕದ್ದು-

ವಿದ್ಯುಚ್ಛಕ್ತಿ ಮತ್ತು ನೀರಿನ ದರಗಳನ್ನು ಗೃಹಬಳಕೆಯ ದರದಲ್ಲಿ ಸಂದಾಯ ಮಾಡುವುದು.

ವಸತಿ ಉದ್ದೇಶಗಳಿಗಾಗಿ ನಿಗದಿಪಡಿಸಿರುವಂತೆ ಆಸ್ತಿ ತೆರಿಗೆ ದರಗಳನ್ನು ಪಾವತಿಸುವುದು.

### 14.2 ಸಹಾಯಧನಗಳು

ಕರ್ನಾಟಕ ಸರ್ಕಾರವು, ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವಂತಹ ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳಿಗೆ ಈ ಕೆಳಕಂಡ ಸಹಾಯಧನವನ್ನು ನೀಡತಕ್ಕದ್ದು.

#### 14.2.1 ಬಂಡವಾಳ ಹೂಡಿಕೆ ಸಹಾಯಧನ

ಈ ಕೆಳಕಂಡ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು ಮಾತ್ರವೇ ಈ ನೀತಿಯಡಿಯಲ್ಲಿ ಬಂಡವಾಳ ಹೂಡಿಕೆ ಸಹಾಯಧನವನ್ನು ಪಡೆಯಲು ಅರ್ಹವಾಗಿರತಕ್ಕದ್ದು.



1. ಸಾಹಸ (ಅಡ್ವೆಂಚರ್) ಪ್ರವಾಸೋದ್ಯಮ ಯೋಜನೆ
2. ಕಾರವಾನ್ ಪಾರ್ಕ್ ಯೋಜನೆ
3. ಹೋಟೆಲ್ ಪ್ರವಾಸೋದ್ಯಮ ಯೋಜನೆ ಬಜೆಟ್ (1-star or 2 star classification hotels/ resorts)
4. ಹೋಟೆಲ್ ಯೋಜನೆ ಪ್ರೀಮಿಯಂ (Premium- 3 star and above classification hotels/ resorts)
5. ಹೌಸ್‌ಬೋಟ್ ಯೋಜನೆ
6. ರಸ್ತೆ ಬದಿಯ (ವೇಸೈಡ್) ಸೌಕರ್ಯಗಳು
7. ಸ್ವಾಸ್ಥ್ಯ ಕೇಂದ್ರ (wellness centres)

ಪ್ರತಿಯೊಂದು ಪ್ರವಾಸೋದ್ಯಮ ಯೋಜನೆಗಾಗಿ ಬಂಡವಾಳ ಹೂಡಿಕೆ ಸಹಾಯಧನವು ಪ್ರವಾಸೋದ್ಯಮ ಯೋಜನೆಯ ಅರ್ಹ ಯೋಜನಾ ವೆಚ್ಚದ (ಇಪಿಸಿ) ಶೇಕಡಾವಾರು ಆಗಿರತಕ್ಕದ್ದು. ಈ ನೀತಿಯ ಅಡಿಯಲ್ಲಿ ಪ್ರವಾಸೋದ್ಯಮ ಯೋಜನೆಗೆ ನೀಡಲಾಗುವ ಬಂಡವಾಳ ಹೂಡಿಕೆ ಸಹಾಯಧನವನ್ನು ಈ ಕೆಳಕಂಡ ಕೋಷ್ಟಕದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ-

**ಸೂಚನೆ:**

1. ಬಜೆಟ್-ಹೋಟೆಲ್ ಯೋಜನೆ ಮತ್ತು ಪ್ರೀಮಿಯಂ ಹೋಟೆಲ್ ಯೋಜನೆಗೆ ಸಂಬಂಧಿಸಿದಂತೆ ಈ ಮುಂದಿನ ಷರತ್ತುಗಳು ಅನ್ವಯವಾಗತಕ್ಕದ್ದು.
   - ಕರ್ನಾಟಕದಲ್ಲಿ ಯಾವುದೇ ನಗರಪಾಲಿಕೆಗಳ ವ್ಯಾಪ್ತಿಯೊಳಗೆ ಬರುವ ಹೋಟೆಲ್/ರೆಸಾರ್ಟ್ ಗಳಿಗೆ ಯಾವುದೇ ಸಹಾಯಧನ ನೀಡತಕ್ಕದ್ದಲ್ಲ.
   - ಹೋಟೆಲ್/ರೆಸಾರ್ಟ್ ಗಳು ಸಹಾಯಧನಕ್ಕೆ ಅರ್ಹವಾಗಬೇಕಾದರೆ, ಅವು ಪ್ರವಾಸೋದ್ಯಮ ಮಂತ್ರಾಲಯದ ಮಾರ್ಗಸೂಚಿಗಳ ಪ್ರಕಾರ ಸ್ಟಾರ್ ವರ್ಗೀಕರಣವನ್ನು ಪಡೆಯುವುದು ಅತ್ಯಗತ್ಯ.
2. ಬಂಡವಾಳ ಹೂಡಿಕೆ ಸಹಾಯಧನವನ್ನು ಪಡೆಯುವ ಪ್ರವಾಸೋದ್ಯಮ ಯೋಜನೆಯು ಬಡ್ಡಿ ಸಹಾಯಧನವನ್ನು ಕ್ಲೇಮು ಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.
3. ಬಂಡವಾಳ ಹೂಡಿಕೆ ಸಹಾಯಧನಕ್ಕೆ ಅರ್ಹವಿರುವ ಪ್ರವಾಸೋದ್ಯಮ ಯೋಜನೆಗಳ ಮೇಲ್ಕಂಡ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಪರಿಶೀಲಿಸಿ,

| ಕ್ರಮ ಸಂಖ್ಯೆ | ಪ್ರವಾಸೋದ್ಯಮ ಯೋಜನೆ | ಯೋಜನೆಗಾಗಿ ಕನಿಷ್ಠ ಇಪಿಸಿ ಹೂಡಿಕೆ (ರೂ.ಗಳಲ್ಲಿ) | ಇಪಿಸಿ ಯ ಶೇಕಡಾವಾರು ಸಹಾಯಧನ (%) | ಬಂಡವಾಳ ಹೂಡಿಕೆ ಸಹಾಯಧನದ ಗರಿಷ್ಠ ಮಿತಿ | ಸಹಾಯಧನ ನೀಡಬೇಕಾದ ಸ್ಥಳಗಳು |
|---|---|---|---|---|---|
| 1 | ಸಾಹಸ (ಅಡ್ವೆಂಚರ್) ಪ್ರವಾಸೋದ್ಯಮ ಯೋಜನೆ | 25 ಲಕ್ಷ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸಿ ತಾಣಗಳು |
| 2 | ಕಾರವಾನ್ ಪಾರ್ಕ್ ಯೋಜನೆ | 50 ಲಕ್ಷ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸಿ ತಾಣಗಳು |
| 3 | ಹೋಟೆಲ್ ಯೋಜನೆ ಬಜೆಟ್ | 5 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು (ನಗರಪಾಲಿಕೆಗಳು/ ಮಹಾನಗರ ಪಾಲಿಕೆಗಳ ವ್ಯಾಪ್ತಿ ಹೊರತುಪಡಿಸಿ) ** |
| 4 | ಹೋಟೆಲ್ ಯೋಜನೆ/ ಪ್ರೀಮಿಯಂ | 10 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 5 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು (ನಗರಪಾಲಿಕೆಗಳು/ ಮಹಾನಗರ ಪಾಲಿಕೆಗಳ ವ್ಯಾಪ್ತಿ ಹೊರತುಪಡಿಸಿ) ** |
| 5 | ಹೌಸ್‌ಬೋಟ್ ಯೋಜನೆ | 25 ಲಕ್ಷ ರೂಪಾಯಿಗಳು | ಶೇಕಡಾ 15ರಷ್ಟು | 1 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸಿ ತಾಣಗಳು |
| 6 | ರಸ್ತೆ ಬದಿ (ವೇ ಸೈಡ್) ಸೌಕರ್ಯಗಳು * | 2 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಕರ್ನಾಟಕದಲ್ಲಿ ಎಲ್ಲಾ ಪ್ರವಾಸಿ ತಾಣಗಳು |
| 7 | ಸ್ವಾಸ್ಥ್ಯ ಕೇಂದ್ರ | 2 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು |

* ಗ್ರಿನ್ ಫೀಲ್ಡ್ ಮತ್ತು ಫ್ರಾಂಚೈಸಿ ಮಾದರಿಗಳಲ್ಲಿ ಅಭಿವೃದ್ಧಿಪಡಿಸಲಾದ ರಸ್ತೆ ಬದಿ ಸೌಲಭ್ಯಗಳಿಗೆ ಮಾತ್ರ.

** ನಗರಪಾಲಿಕೆಗಳೆಂದರೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ.





ಪರಿಷ್ಕರಿಸಬಹುದಾಗಿದ್ದು, ಅದಕ್ಕೆ ಮಾರುಕಟ್ಟೆ ಬೇಡಿಕೆ ಮತ್ತು ಉದ್ಯಮದ ಸಲಹೆಸೂಚನೆಗಳ ಅನುಸಾರ ಸೂಕ್ತ ಸೇರ್ಪಡೆಗಳು/ಅಳಿಸುವಿಕೆಗಳು/ ಮಾರ್ಪಾಡುಗಳನ್ನು ಮಾಡಬಹುದಾಗಿದೆ.

#### ಹೆಚ್ಚುವರಿ ಬಂಡವಾಳ ಹೂಡಿಕೆ ಸಹಾಯಧನ

ಮೇಲೆ ವಿವರಿಸಲಾದ ಬಂಡವಾಳ ಹೂಡಿಕೆ ಸಹಾಯಧನಗಳ ಜೊತೆಗೆ, ನೂತನ ಪ್ರವಾಸೋದ್ಯಮ ಯೋಜನೆಗಳು ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು ಈ ಕೆಳಕಂಡ ಮಾನದಂಡಗಳನ್ನು ಪಾಲಿಸಿದ್ದಲ್ಲಿ, ಅವು ಹೆಚ್ಚುವರಿ ಹೂಡಿಕೆ ಸಹಾಯಧನವನ್ನು ಕ್ಲೇಮು ಮಾಡಲು ಅರ್ಹವಾಗಿರುತ್ತವೆ.

| ಹೆಚ್ಚುವರಿ ಸಹಾಯಧನಕ್ಕೆ ಅರ್ಹತೆ | ಹೆಚ್ಚುವರಿ ಶೇಕಡಾವಾರು ಸಹಾಯಧನ ಯೋಜನೆಯ EPC ಯ ಎದುರಾಗಿ |
|---|---|
| ಪ್ರವಾಸೋದ್ಯಮ ಯೋಜನೆಯನ್ನು ಮಹಿಳೆಯರು, ಪರಿಶೀಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವಿಕಲಚೇತನ ಉದ್ಯಮಿಗಳು ಕೈಗೊಂಡಿದ್ದರೆ | ಶೇಕಡಾ 5ರಷ್ಟು |

#### 14.2.2 ಬಡ್ಡಿ ಸಹಾಯಧನ

ನೂತನ ಪ್ರವಾಸೋದ್ಯಮ ಯೋಜನೆಗಳು ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು, ಐದು ವರ್ಷಗಳ ಅವಧಿಗೆ 25 ಲಕ್ಷ ರೂಪಾಯಿಗಳಿಗೆ ಒಳಪಟ್ಟು, ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ಸ್ಥಿರ ಬಂಡವಾಳ ಹೂಡಿಕೆಯ ಮೇಲೆ ತೆಗೆದುಕೊಂಡ ಅವಧಿ ಸಾಲದ ಮೇಲೆ, ವಾರ್ಷಿಕ ಶೇಕಡಾ 5.ರಷ್ಟು ಬಡ್ಡಿ ಸಹಾಯ ಧನವನ್ನು ಪಡೆಯಲು ಅರ್ಹವಾಗಿರ ತಕ್ಕದ್ದು. ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ಸಹಾಯಧನವು ವಾರ್ಷಿಕ 7.5 ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ ಮತ್ತು ಇದನ್ನು ಬಡ್ಡಿ ಸಮೇತ ಸಾಲದ ಕಂತನ್ನು ಸಕಾಲದಲ್ಲಿ ಮರುಪಾವತಿ ಮಾಡಿದರೆ ಮಾತ್ರ ನೀಡಲಾಗುತ್ತದೆ. ಈ ಮುಂದಿನ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ನೂತನ ಪ್ರವಾಸೋದ್ಯಮ ಯೋಜನೆ ಅಥವಾ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳ ಈ ನೀತಿಯ ಅಡಿಯಲ್ಲಿ ಬಡ್ಡಿ ಸಹಾಯಧನವನ್ನು ಪಡೆಯಲು ಅರ್ಹವಾಗಿರತಕ್ಕದ್ದು.

1. ಕೃಷಿ ಪ್ರವಾಸೋದ್ಯಮ ಯೋಜನೆ
2. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ.
3. ಪಾರಂಪರಿಕ ಪ್ರವಾಸೋದ್ಯಮ ಯೋಜನೆ.
4. ಸುರಕ್ಷತಾ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ

**ಸೂಚನೆ:**

ಬಡ್ಡಿ ಸಹಾಯಧನವನ್ನು ಪಡೆಯುತ್ತಿರುವ ಪ್ರವಾಸೋದ್ಯಮ ಯೋಜನೆಯು, ಬಂಡವಾಳ ಹೂಡಿಕೆ ಸಹಾಯಧನವನ್ನು ಕ್ಲೇಮು ಮಾಡಲು ಅರ್ಹವಾಗಿರತಕ್ಕದ್ದಲ್ಲ.

ಬಡ್ಡಿ ಸಹಾಯಧನಕ್ಕೆ ಅರ್ಹವಾಗಿರುವ ಪ್ರವಾಸೋದ್ಯಮ ಯೋಜನೆಗಳ ಮೇಲ್ಕಂಡ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಪರಿಶೀಲಿಸಿ, ಪರಿಷ್ಕರಿಸಬಹುದಾಗಿದ್ದು, ಅದಕ್ಕೆ ಮಾರುಕಟ್ಟೆ ಬೇಡಿಕೆ ಮತ್ತು ಉದ್ಯಮದ ಸಲಹೆ ಸೂಚನೆಗಳ ಅನುಸಾರ ಸೂಕ್ತ ಸೇರ್ಪಡೆಗಳು/ ಅಳಿಸುವಿಕೆಗಳು/ ಮಾರ್ಪಾಡುಗಳನ್ನು ಮಾಡಬಹುದಾಗಿದೆ.

### 14.3 ಪ್ರವಾಸೋದ್ಯಮ ಯೋಜನೆಗಳಿಗಾಗಿ ರಿಯಾಯಿತಿಗಳು

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ನೂತನ ಪ್ರವಾಸೋದ್ಯಮ ಯೋಜನೆ ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆ ಅಭಿವೃದ್ಧಿ ಪಡಿಸುವುದಕ್ಕಾಗಿ ಈ ಮುಂದಿನಂತೆ ರಿಯಾಯಿತಿಗಳನ್ನು ನೀಡಲಾಗುತ್ತದೆ -

#### 14.3.1 ಮುದ್ರಾಂಕ ಶುಲ್ಕದ ಮೇಲೆ ವಿನಾಯಿತಿ

ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ವಿಸ್ತರಣಾ ಯೋಜನೆಗಳು ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಶೇ.100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ಪಡೆಯಲು ಅರ್ಹವಾಗಿರುತ್ತವೆ.

1. ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು (ಆರ್.ಆರ್.ಬಿ)ಗಳು, ಸಹಕಾರ ಬ್ಯಾಂಕುಗಳು, ಕೆವಿಐ ಕೆವಿಐಸಿ, ಕರ್ನಾಟಕ ರಾಜ್ಯ ಪ.ಜಾ/ಪ.ಪಂ.ಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಇತರೆ ಸಂಸ್ಥೆಗಳಿಂದ ಪಡೆಯುವ ವಿಎಟಿ ಸಾಲವನ್ನೊಳಗೊಂಡಂತೆ, ರಾಜ್ಯ ಸರ್ಕಾರದಿಂದ ಸಾಲವನ್ನು ಪಡೆಯುವುದಕ್ಕಾಗಿ ಮಾಡಿಕೊಂಡಿರುವ ಸಾಲದ ಕರಾರುಗಳು, ಸಾಲದ ಒಪ್ಪಂದ ಪತ್ರಗಳು,



ಚನ್ನಪಟ್ಟಣ ಆಟಿಕೆಗಳು

** ಉದಾಹರಣೆಗೆ ಒಂದು ಪ್ರವಾಸೋದ್ಯಮ ಯೋಜನೆಗೆ ರೂ.10.00 ಲಕ್ಷಗಳನ್ನು ಶೇ.11.ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಸಾಲವನ್ನು ಪಡೆದಿದ್ದಲ್ಲಿ ಇಲಾಖೆಯು ಶೇ.5.ರಷ್ಟು ಬಡ್ಡಿಯನ್ನು ಅಂದರೆ ರೂ.50,000/-ಗಳನ್ನು ಸಹಾಯಧನ ರೂಪದಲ್ಲಿ ನೀಡುತ್ತದೆ (ಒಟ್ಟು ಪಾವತಿಸಬೇಕಾದ ಹೊಟ್ಟು ಬಡ್ಡಿ ರೂ.1,10,000/-ಗಳಲ್ಲಿ ರೂ.50,000/-ಗಳನ್ನು ಪಾವತಿಸಲಾಗುವುದು)

ಸಾಲಪತ್ರಗಳು, ಅಡಮಾನ ಮತ್ತು ಅಡವು ಪತ್ರಗಳಿಗೆ ಕೇವಲ ಐದು ವರ್ಷಗಳ ಗರಿಷ್ಠ ಅವಧಿಯವರೆಗೆ; ಮತ್ತು

2. ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಗುತ್ತಿಗೆಪತ್ರಗಳು, ಗುತ್ತಿಗೆ ಮತ್ತು ಮಾರಾಟ (lease cum sale) ಹಾಗೂ ಶುದ್ಧ ಕ್ರಯಪತ್ರಗಳು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಬರುವ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಮುದ್ರಾಂಕ ಶುಲ್ಕದ ವಿನಾಯಿತಿ ಇರುವುದಿಲ್ಲ.

### 14.3.2 ರಿಯಾಯಿತಿ ನೋಂದಣಿ ಶುಲ್ಕಗಳು

ಮೇಲೆ ಹೇಳಿರುವ 'ಮುದ್ರಾಂಕ ಶುಲ್ಕದ ವಿನಾಯಿತಿ' ಎನ್ನುವ ಶೀರ್ಷಿಕೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಸಾಲದ ದಸ್ತಾವೇಜುಗಳು ಮತ್ತು ಕ್ರಯಪತ್ರಗಳಿಗೆ ನೋಂದಣಿ ಶುಲ್ಕವು ಪ್ರತಿ 1000/- ರೂ.ಗಳಿಗೆ ರೂ.1/-ರಂತೆ ರಿಯಾಯಿತಿ ದರದಲ್ಲಿರತಕ್ಕದ್ದು.

### 14.3.3 ಭೂಪರಿವರ್ತನೆ ಶುಲ್ಕದ ಮರುಪಾವತಿ

ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ವಿಸ್ತರಣಾ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗಾಗಿ ಭೂಮಿಯನ್ನು ಕೃಷಿ ಭೂಮಿಯಿಂದ ಕೃಷಿಯೇತರ ಭೂಮಿಯಾಗಿ ಪರಿವರ್ತಿಸಲು ಪಾವತಿಸಬೇಕಾಗಿರುವ ಭೂಪರಿವರ್ತನೆ ಶುಲ್ಕದ ಶೇ.100.ರಷ್ಟು ಮರುಪಾವತಿ ಮಾಡಲಾಗುತ್ತದೆ.

ಆದಾಗ್ಯೂ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ)ದ ವ್ಯಾಪ್ತಿಯಲ್ಲಿ ಬರುವ ಭೂಮಿಯ ಪರಿವರ್ತನೆಗಾಗಿ ಯಾವುದೇ ಭೂಪರಿವರ್ತನಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.

### 14.3.4 ಮೋಟಾರು ವಾಹನ ತೆರಿಗೆ ವಿನಾಯಿತಿ

ಈ ನೀತಿಯು ಜಾರಿಯಲ್ಲಿರುವ ಅವಧಿಯಲ್ಲಿ, ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ, ಕರ್ನಾಟಕದಲ್ಲಿ ಪ್ರವಾಸೋದ್ಯಮ ಸೇವಾದಾತರು ಖರೀದಿಸಿದ ಹೊಸ ವಾಹನಗಳಿಗೆ ಮೋಟಾರು ವಾಹನ ತೆರಿಗೆಯನ್ನು ಪಾವತಿಸುವುದರಿಂದ ವಿನಾಯಿತಿ ನೀಡತಕ್ಕದ್ದು. (ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ ಪ್ರಕಾರ ವಾಹನದ ಪ್ರವರ್ಗಕ್ಕೆ ಅನ್ವಯಿಸುವ ಜೀವಿತಾವಧಿ ತೆರಿಗೆಯ ಪ್ರಮಾಣಕ್ಕನುಗುಣವಾಗಿ).

#### ಮೇಲೆ ಹೇಳಿದ ವಿನಾಯಿತಿಯು:

1. 2020-25 ನೀತಿ ಅವಧಿಯಲ್ಲಿ ಮಾತ್ರ ಅನ್ವಯ.
2. ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ-ಇಲ್ಲಿ ನೋಂದಾಯಿಸಿ ಕೊಂಡಿರುವ ಪ್ರವಾಸ ನಿರ್ವಾಹಕರುಗಳಿಗಾಗಿ ಮತ್ತು
3. ಪ್ರತಿಯೊಬ್ಬ ಪ್ರವಾಸ ಸೇವಾದಾತನು ಒಂದು ವರ್ಷದಲ್ಲಿ ಗರಿಷ್ಠ 10 ವಾಹನಗಳ ಖರೀದಿಯ ಮೇಲೆ ಮಾತ್ರ ವಿನಾಯಿತಿ ದೊರಕುತ್ತದೆ.

### 14.3.5 ಪೂರಕ ಮೂಲಸೌಕರ್ಯ ನೆರವು

ಎಲ್ಲಾ ಅರ್ಹ ಪ್ರವಾಸೋದ್ಯಮ ಯೋಜನೆಯ ಅಗತ್ಯಗಳ ಮೌಲ್ಯಮಾಪನವನ್ನು ಆಧರಿಸಿ, ಪೂರಕ ಮೂಲಸೌಕರ್ಯ ಸೌಲಭ್ಯಗಳ ಅಭಿವೃದ್ಧಿಗಾಗಿ ನೆರವು ನೀಡಲು ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿ ನಿಧಿಯನ್ನು ಬಳಸಿಕೊಳ್ಳತಕ್ಕದ್ದು, ಎಲ್ಲಾ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗಾಗಿ ಅರ್ಹ ಯೋಜನಾ ವೆಚ್ಚದ ಶೇಕಡಾ 20ರಷ್ಟು ಅಥವಾ ಗರಿಷ್ಠ 25 ಲಕ್ಷ ರೂಪಾಯಿಗಳು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ನೆರವನ್ನು ನೀಡತಕ್ಕದ್ದು.

ಪೂರಕ ಮೂಲಸೌಕರ್ಯ ನೆರವು ಈ ಕೆಳಕಂಡ ಕಾರ್ಯರೂಪದಲ್ಲಿರಬೇಕು.

1. ರಸ್ತೆ ಸಂಪರ್ಕ / ಲಾಸ್ಟ್ ಮೈಲ್ ಸಂಪರ್ಕ
2. ವಿದ್ಯುತ್ ಸಂಪರ್ಕ

   ಎ. ಹಾಲಿ ಇರುವ ಪ್ರಸರಣ/ವಿತರಣಾ ಜಾಲದಿಂದ ಯೊಜನಾ ಸ್ಥಳದವರೆಗೆ

   ಬಿ. ಯೋಜನಾ ಸ್ಥಳದಲ್ಲಿ ಸ್ವಿಚಿಂಗ್ ಸ್ಟೇಷನ್ ಮತ್ತು ಟ್ರಾನ್ಸ್ ಫಾರ್ಮರ್ ರನ್ನು ಸ್ಥಾಪಿಸಬಹುದು.
3. ನೀರಿನ ಸಂಪರ್ಕ

   ಎ. ನೀರಿನ ಸಂಪರ್ಕ ಶುಲ್ಕಗಳು, ರೋಡ್ ಕಟಿಂಗ್ ಶುಲ್ಕಗಳು, ಪ್ಲಂಬರ್ ವೆಚ್ಚಗಳು.
4. ಒಳಚರಂಡಿ ಸಂಪರ್ಕ

   ಎ. ಒಳಚರಂಡಿ ನೀರನ್ನು ಎತ್ತುವ ಕೇಂದ್ರ/ಕೊಳಚೆ ನೀರು ಶುದ್ಧೀಕರಣ ಘಟಕಕ್ಕೆ ಸಂಪರ್ಕ.
5. ಹಡಗು ಕಟ್ಟೆಗಳು, ಪಾರ್ಕಿಂಗ್ ಸ್ಥಳಗಳು ಇತ್ಯಾದಿಗಳನ್ನು ಒಳಗೊಳ್ಳಬಹುದಾದ ಪ್ರವಾಸೋದ್ಯಮ ಯೋಜನೆಯ ಏರ್ಪಾಡು ಮಾಡಲು ಅವಶ್ಯವಿರುವಂತಹ ಮೂಲಸೌಕರ್ಯಗಳನ್ನು ಪ್ರವಾಸೋದ್ಯಮ ಯೋಜನೆಗಳಿಗಾಗಿ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಆಧರಿಸಿ, ಹಾಗೂ ಪ್ರವಾಸೋದ್ಯಮ ಇಲಾಖೆಯು ನಿರ್ಧರಿಸಿದಂತೆ ನಿರ್ಮಾಣ ಮಾಡುವ ಯೋಜನೆಗಳು.





# 15 ಸಾಂಸ್ಥಿಕ ಕಾರ್ಯ ಚೌಕಟ್ಟು


ಮೈಸೂರು ಅರಮನೆ

ಪ್ರವಾಸೋದ್ಯಮ ಇಲಾಖೆಯು, ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25ರ ಅನುಷ್ಠಾನಕ್ಕೆ ಅಗತ್ಯ ಕಾರ್ಯ ವಿಧಾನವನ್ನು ಆರಂಭಿಸಲು ಮತ್ತು ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಲು ಬದ್ಧವಾಗಿದೆ. ರಾಜ್ಯದಲ್ಲಿ ಅನುಮೋದನೆ ಮತ್ತು ಅನುಮತಿಗಾಗಿ ಅನುಕೂಲಕರ ಬೆಂಬಲವನ್ನು ಒದಗಿಸಲು, ಅಂತರ್-ಇಲಾಖಾ ವಿವಾದಗಳನ್ನು ಬಗೆಹರಿಸಲು ಮತ್ತು ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಯನ್ನು ಮೇಲ್ವಿಚಾರಣೆ ಮಾಡಲು, ಈ ನೀತಿಯ ಮೂಲಕ ಸಾಂಸ್ಥಿಕ ಏರ್ಪಾಡುಗಳನ್ನು ಮಾಡತಕ್ಕದ್ದು. ಈ ಸಂಬಂಧದಲ್ಲಿ, -

- ಪ್ರವಾಸೋದ್ಯಮ ಯೋಜನೆಗಳ ಕಾರ್ಯಾಚರಣೆಯನ್ನು ಅನುಮೋದನೆ ಮತ್ತು ಮೇಲ್ವಿಚಾರಣೆಗಾಗಿ
- ಯೋಜನೆಗಳಿಗೆ ಪ್ರೋತ್ಸಾಹಧನಗಳು, ಸಹಾಯಧನಗಳು, ರಿಯಾಯಿತಿಗಳು ಮತ್ತು ಇತರೆ ನೆರವಿಗೆ ಅನುಮೋದನೆ; ನೀಡುವುದಕ್ಕಾಗಿ
- ಸಕಾಲಿಕ ಅನುಮೋದನೆಗಾಗಿ ಅಂತರ್-ಇಲಾಖಾ ಸಮನ್ವಯದ ಸುಧಾರಣೆಗಾಗಿ;
- ನೀತಿ ಅನುಷ್ಠಾನದ ಪ್ರಗತಿಯ ಮೇಲ್ವಿಚಾರಣೆಗಾಗಿ ಮತ್ತು
- ಕಾಲಕಾಲಕ್ಕೆ ನೀತಿಯನ್ನು ತಿದ್ದುಪಡಿ / ಪರಿಷ್ಕರಣೆ ಮಾಡುವುದಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡುವುದಕ್ಕಾಗಿ ಸಮಿತಿಗಳನ್ನು ರಚಿಸತಕ್ಕದು.

ಈ ಸಮಿತಿಗಳು, ಪ್ರವಾಸೋದ್ಯಮ ಯೋಜನೆಗಳಿಗಾಗಿ ಸುಲಲಿತ ವ್ಯಾಪಾರವನ್ನು ಉತ್ತೇಜಿಸಲು ಸಹ ಆದ್ಯತೆ ನೀಡತಕ್ಕದ್ದು. ಈ ಸಮಿತಿಗಳು ಪ್ರಸ್ತುತ ನೀತಿಗನುಸಾರವಾಗಿ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಹಾಗೆ ತೆಗೆದುಕೊಳ್ಳಲಾದ ನಿರ್ಣಯಗಳು ಅಂತಿಮವಾಗಿರತಕ್ಕದ್ದು ಮತ್ತು ಸಂಬಂಧಪಟ್ಟವರೆಲ್ಲರೂ ಇದಕ್ಕೆ ಬದ್ಧರಾಗಿರತಕ್ಕದ್ದು.

## 15.1 ಸಲಹೆ ಮತ್ತು ಅನುಮೋದನಾ ಸಮಿತಿಗಳು

### 15.1.1 ಜಿಲ್ಲಾ ಪ್ರವಾಸೋದ್ಯಮ ಸಮಿತಿ

ಜಿಲ್ಲಾ ಪ್ರವಾಸೋದ್ಯಮ ಸಮಿತಿಯು, ಈ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು-

- ರೂ.5.00 ಕೋಟಿಗಳ ಅರ್ಹ ಯೋಜನಾ ವೆಚ್ಚ (ಇಪಿಸಿ) ವಿರುವಂತಹ ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವುದು.
- ಪ್ರವಾಸೋದ್ಯಮ ಯೋಜನೆಗಾಗಿ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಯೋಜನಾ ಮೌಲ್ಯ ನಿರ್ಣಯಕ್ಕಾಗಿ ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾಘಟಕ (ಪಿಎಂಯು) ವಿಭಾಗಕ್ಕೆ ಕಳುಹಿಸುವುದು. ಪಿಎಂಯು ವಿಭಾಗವು ತನ್ನ ಮೌಲ್ಯ ನಿರ್ಣಯ ವರದಿಯನ್ನು ಜಿಲ್ಲಾ ಪ್ರವಾಸೋದ್ಯಮ ಸಮಿತಿಗೆ ಕಳುಹಿಸತಕ್ಕದ್ದು. ಮೌಲ್ಯ ನಿರ್ಣಯ ವರದಿಯು, ಈ ನೀತಿಯ ಅಡಿಯಲ್ಲಿ ಯೋಜನೆಯ ಪ್ರೋತ್ಸಾಹಧನ, ಸಹಾಯಧನ ಅಥವಾ ರಿಯಾಯಿತಿಗಳನ್ನು ಪಡೆಯಲು ಅರ್ಹವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸತಕ್ಕದ್ದು.
- ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾ ಘಟಕ (ಪಿಎಂಯು) ವಿಭಾಗವು ಸಿದ್ಧಪಡಿಸಿದ ಮೌಲ್ಯ ನಿರ್ಣಯ ವರದಿಯ ಆಧಾರದ ಮೇಲೆ, ಜಿಲ್ಲಾ ಪ್ರವಾಸೋದ್ಯಮ ಸಮಿತಿಯು ಅರ್ಹ ಯೋಜನಾ ವೆಚ್ಚ (ಇಪಿಸಿ) ರೂ.5.00 ಕೋಟಿ ರೂಪಾಯಿಗಳ ವರೆಗೆ ಇರುವಂಥ ಅರ್ಹ ಪ್ರವಾಸೋದ್ಯಮ ಯೋಜನೆಗೆ ಅನುಮೋದನೆ ನೀಡತಕ್ಕದ್ದು.
- ಪ್ರವಾಸೋದ್ಯಮ ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯವಾಗಬಹುದಾದಂತೆ ಇತರೆ ಸರ್ಕಾರಿ ಏಜೆನ್ಸಿಗಳಿಂದ ಅನುಮೋದನೆ ಮತ್ತು ಮಂಜೂರಾತಿಗಳ ಸಮನ್ವಯ ಸಾಧಿಸತಕ್ಕದ್ದು.
- ಅನುಮೋದಿತ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದ ಪ್ರಗತಿಯ ಮೇಲ್ವಿಚಾರಣೆ.
- ರೂ.5.00 ಕೋಟಿ ರೂಪಾಯಿಗಳವರೆಗಿನ ಅರ್ಹ ಯೋಜನಾ ವೆಚ್ಚ (ಇಪಿಸಿ)ಕ್ಕೆ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಯೋಜನಾ ಅನುಷ್ಠಾನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರ.

### 15.1.2 ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿ

ಕರ್ನಾಟಕ ಸರ್ಕಾರದ ಸನ್ಮಾನ್ಯ ಪ್ರವಾಸೋದ್ಯಮ ಸಚಿವರು ಅಧ್ಯಕ್ಷರಾಗಿರುವ ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿಯು, ಈ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮುಂದಿನ ಕಾರ್ಯಗಳನ್ನು ನಿರ್ವಹಿಸತಕ್ಕದ್ದು-



- ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾ ಘಟಕ (ಪಿಎಂಯು) ವಿಭಾಗವು ಸಿದ್ಧಪಡಿಸಿದ ಮೌಲ್ಯ ನಿರ್ಣಯ ವರದಿಯ ಆಧಾರದ ಮೇಲೆ, ಅಧಿಕಾರಯುಕ್ತ ಸಮಿತಿಯು ಅರ್ಹ ಯೋಜನಾ ವೆಚ್ಚವು (ಇಪಿಸಿ) ರೂ.5.00 ಕೋಟಿಗಳಿಗಿಂತ ಹೆಚ್ಚಿರುವ ಮತ್ತು ರೂ.100.00 ಕೋಟಿಗಳವರೆಗಿನ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗಾಗಿ ಪ್ರೋತ್ಸಾಹಧನಗಳು, ಸಹಾಯ ಧನಗಳು ಅಥವಾ ರಿಯಾಯಿತಿಗಳಿಗಾಗಿ ಅನುಮೋದನೆಯನ್ನು ನೀಡುವುದು.
- ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಅವುಗಳು ಸರ್ಕಾರಿ ಆದೇಶಗಳನ್ನು ಸಕಾಲದಲ್ಲಿ ಹೊರಡಿಸಿರುವುದನ್ನು ಖಚಿತಪಡಿಸುವುದು.
- ಒಂದು ಪ್ರಾಧಿಕಾರವಾಗಿ, ನೀತಿ ಮತ್ತು ಅದರ ಅಡಿಯಲ್ಲಿ ನೀಡಲಾಗುವ ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಬಗ್ಗೆ ವ್ಯಾಖ್ಯಾ ನಿಸುವುದು.
- ನೀತಿಯ ಸುಗಮ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಅಳವಡಿಸಿಕೊಳ್ಳಬೇಕಾದ ಯುಕ್ತ ಕಾರ್ಯವಿಧಾನಗಳನ್ನು ಶಿಫಾರಸ್ಸು ಮಾಡುವುದು.
- ಅರ್ಹ ಯೋಜನಾ ವೆಚ್ಚವು (ಇಪಿಸಿ) ರೂ.5.00 ಕೋಟಿಗಳಿಗಿಂತ ಹೆಚ್ಚಾಗಿರುವ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದೇ ವಿವಾದಗಳನ್ನು ಪರಿಹರಿಸುವುದು.
- ಅಂತರ್-ಇಲಾಖಾ ಸಮಸ್ಯೆಗಳನ್ನು ಪರಿಹರಿಸದಿದ್ದುದರಿಂದಾಗಿ ಬಾಕಿ ಇರುವ ಪ್ರಕರಣಗಳಲ್ಲಿ ಅನುಮತಿಗೆ ಸಂಬಂಧಿಸಿದ ಯಾವುದೇ ವಿವಾದಗಳನ್ನು ಪರಿಹರಿಸುವುದು.
- ಈ ಯೋಜನೆಗಳ ಅನುಮೋದನೆಗಾಗಿ ಒಪ್ಪಿಗೆ ಮತ್ತು ಪರಿಣತಿ ಅಗತ್ಯವಿರುವ ಸದಸ್ಯರ ಮತ್ತು ಹಿತಾಸಕ್ತಿದಾರರನ್ನು ಆಯ್ಕೆ ಮಾಡಿಕೊಳ್ಳುವುದು.
- ಪ್ರವಾಸೋದ್ಯಮದ ಮಾರುಕಟ್ಟೆ, ಬೇಡಿಕೆ ಮತ್ತು ಸಲಹೆಗನುಸಾರವಾಗಿ ನಿಯತಕಾಲಿಕವಾಗಿ ಅರ್ಹ ಪ್ರವಾಸೋದ್ಯಮ ಯೋಜನೆಗಳ ಪಟ್ಟಿಯನ್ನು ಪರಿಶೀಲಿಸುವುದು ಮತ್ತು ಸೂಕ್ತ ಸೇರ್ಪಡೆಗಳು/ ಮಾರ್ಪಾಡು ಹಾಗೂ ತೆಗೆದುಹಾಕುವುದನ್ನು ಮಾಡಬಹುದು.
- ಪ್ರವಾಸೋದ್ಯಮ ವಲಯದಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಿರುವ ನವೋದ್ಯಮಗಳಿಗಾಗಿ ಅನುದಾನ ಮತ್ತು ಇತರೆ ವಿತ್ತೀಯ ನೆರವು ನೀಡುವುದು ಮತ್ತು ಸದರಿ ನವೋದ್ಯಮಗಳೊಂದಿಗೆ ಸಹಕರಿಸಲು ಪ್ರವಾಸೋದ್ಯಮ ಇಲಾಖೆಗೆ ಅನುಮತಿ ನೀಡುವುದು.

### 15.1.3. ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ (ಟಾಸ್ಕ್ ಫೋರ್ಸ್)

ಸರ್ಕಾರಿ ಆದೇಶ ಸಂಖ್ಯೆ: ಟಿಓಆರ್ 92ಟಿಡಿಪಿ 2019, ದಿನಾಂಕ:21.08.2019ರ ಮೇರೆಗೆ ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆಯನ್ನು ರಚಿಸಲಾಯಿತು. ಈ ಕಾರ್ಯಪಡೆಯ ಉದ್ದೇಶವು ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯ ಮಾರ್ಗದರ್ಶನ ಹಾಗೂ ನೆರವನ್ನು ಒದಗಿಸುವುದಾಗಿದೆ.


- ಕರ್ನಾಟಕದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಮಾರ್ಗದರ್ಶನ ನೀಡುವುದು.
- ಕರ್ನಾಟಕ ಪ್ರವಾಸೋದ್ಯಮದಲ್ಲಿ ಮಾರುಕಟ್ಟೆ ಅಗತ್ಯಗಳ ಆಧಾರದ ಮೇಲೆ ಹೊಸ ಪ್ರವಾಸೋದ್ಯಮ ಉತ್ಪನ್ನಗಳನ್ನು ಗುರುತಿಸಿ, ಅವುಗಳ ಸಾಮರ್ಥ್ಯ ಮತ್ತು ಪ್ರಸ್ತುತತೆಯನ್ನು ನಿರ್ಣಯಿಸುವುದು.
- ಪ್ರವಾಸೋದ್ಯಮ ಇಲಾಖೆಯು ಸೃಜಿಸಿದ ವಾರ್ಷಿಕ ಕ್ರಿಯಾ ಯೋಜನೆಗಳಿಗನುಸಾರವಾಗಿ ನೀತಿಯ ಅನುಷ್ಠಾನದ ಪ್ರಗತಿಯನ್ನು ನಿಯತವಾಗಿ ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನ ಮಾಡುವುದು.
- ನೀತಿಯನ್ನು ಕಾಲಕಾಲಕ್ಕೆ ತಿದ್ದುಪಡಿ/ ಅಪ್‌ಡೇಟ್ ಮಾಡಲು ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡುವುದು.
- ರಿಯಾಯಿತಿಗಳು, ಸಹಾಯಧನಗಳು, ಪ್ರೋತ್ಸಾಹಧನಗಳು ಮತ್ತು ಮೂಲಸೌಕರ್ಯದ ನೆರವಿಗೆ ಸಂಬಂಧಿಸಿದಂತೆ ಅಗತ್ಯವಾದ ಮಾರ್ಪಾಡುಗಳೇನಾದರೂ ಇದ್ದಲ್ಲಿ, ಅದರ ಕುರಿತು ಸರ್ಕಾರಕ್ಕೆ ಸಲಹೆ ನೀಡುವುದು.

## 15.2. ಪ್ರವಾಸೋದ್ಯಮ ಯೋಜನೆಗಳ ಅನುಮೋದನೆ ಮತ್ತು ಸಹಾಯಧನಗಳು ಹಾಗೂ ರಿಯಾಯಿತಿಗಳ ಮಂಜೂರಾತಿ

ಪ್ರವಾಸೋದ್ಯಮ ಯೋಜನೆಗಾಗಿ ಅರ್ಜಿದಾರನು ತನ್ನ ಪ್ರವಾಸೋದ್ಯಮ ಯೋಜನೆಯ ಪ್ರಸ್ತಾವನೆಯನ್ನು ಪರಿಶೀಲನೆಗಾಗಿ ಸಂಬಂಧಪಟ್ಟ ಸಮಿತಿಯ ಮುಂದೆ ಮಂಡಿಸತಕ್ಕದ್ದು. ಪ್ರವಾಸೋದ್ಯಮ ಯೋಜನೆಗಳ ಅರ್ಹ ಯೋಜನಾ ವೆಚ್ಚದ ಆಧಾರದ ಮೇಲೆ ಯೋಜನಾ ಅನುಮೋದನೆಗಳು ಮತ್ತು ಮಂಜೂರಾತಿಗಳಿಗಾಗಿ ಸಂಬಂಧಪಟ್ಟ ಸಮಿತಿಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| ಅರ್ಹ ಯೋಜನಾ ವೆಚ್ಚ | ಅನುಮೋದನೆಗಳು ಮತ್ತು ಅನುಮತಿಯನ್ನು ನೀಡುವ ಪ್ರಾಧಿಕಾರ | ಪ್ರೋತ್ಸಾಹಗಳು ರಿಯಾಯಿತಿಗಳನ್ನು ಮಂಜೂರು ಸಹಾಯಧನ ಮಾಡುವ ಪ್ರಾಧಿಕಾರ | ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕಾಗಿ ಕಾಲಮಿತಿ |
|---|---|---|---|
| ರೂ.5.00 ಕೋಟಿಗಳವರೆಗೆ | ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯ ಅಧ್ಯಕ್ಷತೆಯ ಜಿಲ್ಲಾ ಪ್ರವಾಸೋದ್ಯಮ ಸಮಿತಿ | ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯ ಅಧ್ಯಕ್ಷತೆಯ ಜಿಲ್ಲಾ ಪ್ರವಾಸೋದ್ಯಮ ಸಮಿತಿ | 2 ವರ್ಷಗಳು |
| ರೂ.5.00 ಕೋಟಿಗಳಿಗಿಂತ ಹೆಚ್ಚಿಗೆ ಇರುವ ಯೋಜನೆಗಳು | ಸನ್ಮಾನ್ಯ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯ ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿ | ಸನ್ಮಾನ್ಯ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯ ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿ | 3 ವರ್ಷಗಳು |





### 15.2.1. ಯೋಜನೆಯ ಅನುಮೋದನೆಗಾಗಿ ಮತ್ತು ಮಂಜೂರಾತಿಗಾಗಿ ದಾಖಲೆಗಳು

ಯೋಜನೆಯ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಮತ್ತು ಸಹಾಯಧನ ಹಾಗೂ ರಿಯಾಯಿತಿಗಳ ಮಂಜೂರಾತಿಗಾಗಿ ಸಲ್ಲಿಸಬೇಕಾದ ದಾಖಲೆಗಳು ಈ ನೀತಿಯ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಅನ್ವಯ ಇರತಕ್ಕದ್ದು.

### 15.2.2. ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯುವುದಕ್ಕಾಗಿ ಪೂರಕ ಉಪಬಂಧಗಳು

1. ಪ್ರವಾಸೋದ್ಯಮ ಯೋಜನೆಯ ಅರ್ಜಿದಾರರು, ಈ ನೀತಿಯಲ್ಲಿ ಗುರುತಿಸಲಾದ ಸಹಾಯಧನಗಳನ್ನು ಮತ್ತು ರಿಯಾಯಿತಿಗಳನ್ನು ಪಡೆಯಲು, ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಪ್ರವಾಸೋದ್ಯಮ ಯೋಜನೆಯನ್ನು ಪ್ರಾರಂಭಿಸುವುದಕ್ಕೂ ಮುನ್ನ ಸಂಬಂಧಪಟ್ಟ ಸಮಿತಿಗಳಿಂದ ಅಗತ್ಯ ಅನುಮೋದನೆಯನ್ನು ಪಡೆಯತಕ್ಕದ್ದು.
2. ಈ ನೀತಿಯ ಅಧ್ಯಾಯ-14 ರ ಅಡಿಯಲ್ಲಿ ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು ಕ್ಲೇಮು ಮಾಡುವುದಕ್ಕೆ ಪ್ರವಾಸೋದ್ಯಮ ಯೋಜನೆಯ ಅರ್ಜಿದಾರನು ಸಂಬಂಧಪಟ್ಟ ಸಮಿತಿಗೆ ಕಾರ್ಯಾಚರಣೆಗೂ ಮುನ್ನ ಅಗತ್ಯವಾದ ದಾಖಲೆ ಪುರಾವೆಗಳನ್ನು ಒದಗಿಸಬೇಕು. ಸಂಬಂಧಪಟ್ಟ ಸಮಿತಿಯ ಅನುಮೋದನೆಯಿಂದ ಪ್ರವಾಸೋದ್ಯಮ ಯೋಜನೆಗೆ ಅನುಮೋದಿತವಾದ ಪ್ರವಾಸೋದ್ಯಮ ಇಲಾಖೆಯು ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ವಿತರಿಸುವುದಕ್ಕೆ ಸಾಧ್ಯವಾಗುತ್ತದೆ.
3. ಪ್ರವಾಸೋದ್ಯಮ ಯೋಜನೆಗಳು, ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ವಿವಿಧ ಇಲಾಖೆಗಳ ಬಹುನೀತಿಗಳಡಿಯಲ್ಲಿ ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯಬಹುದು. ಆದಾಗ್ಯೂ, ವಿವಿಧ ನೀತಿಗಳಡಿಯಲ್ಲಿ ಒಂದೇ ಘಟಕಾಂಶಕ್ಕೆ ಕ್ಲೇಮು ಮಾಡಿದ್ದಲ್ಲಿ, ಪ್ರಮಾಣವನ್ನು ನೀತಿಯಲ್ಲಿನ ಯಾವುದೇ ಒಂದು ಘಟಕಾಂಶದ ಗರಿಷ್ಠ ಮೊತ್ತಕ್ಕೆ ಸೀಮಿತಗೊಳಿಸಲಾಗುತ್ತದೆ.
4. ಪ್ರವಾಸೋದ್ಯಮ ಯೋಜನೆಗಳಿಗೆ ಪಡೆಯುವ ಒಟ್ಟು ಸಹಾಯಧನಗಳು ಮತ್ತು ರಿಯಾಯಿತಿಗಳ ಪ್ರಮಾಣವು, ಯೋಜನೆಯ ಅರ್ಹಯೋಜನಾ ವೆಚ್ಚದ ಶೇ. 25% ರಷ್ಟನ್ನು ಮೀರತಕ್ಕದ್ದಲ್ಲ.
5. ಸಹಾಯಧನಗಳನ್ನು ಸ್ವೀಕರಿಸುವ ಪ್ರವಾಸೋದ್ಯಮ ಯೋಜನೆಗಳ ಸಹಾಯಧನ ಮೊದಲ ಕಂತನ್ನು ಸ್ವೀಕರಿಸಿದ ನಂತರ ಕನಿಷ್ಠ 3 ವರ್ಷಗಳ ಕಾಲ ಪ್ರವಾಸೋದ್ಯಮ ಯೋಜನೆಯನ್ನು ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ. ಈ ಷರತ್ತುಗಳನ್ನು ಪೂರೈಸಲು ಅರ್ಜಿದಾರನ ಪ್ರವಾಸೋದ್ಯಮ ಯೋಜನೆಯು ವಿಫಲವಾದರೆ, ಅರ್ಜಿದಾರನು ಶೇ. 10ರಷ್ಟು ಸರಳ ಬಡ್ಡಿಯೊಂದಿಗೆ ಪ್ರವಾಸೋದ್ಯಮ ಇಲಾಖೆಗೆ ಸಹಾಯಧನದ ಮೊತ್ತವನ್ನು ಹಿಂತಿರುಗಿಸಬೇಕು.

### 15.3 ವ್ಯಾಖ್ಯಾನ

ಈ ನೀತಿಯ ವ್ಯಾಖ್ಯಾನ, ವಿವಾದ, ವಿವಾದಾಂಶಗಳ ಎಲ್ಲಾ ವಿಷಯಗಳನ್ನು ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸತಕ್ಕದ್ದು. ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಪ್ರವಾಸೋದ್ಯಮ ಇಲಾಖೆ - ಇವರು ತೆಗೆದುಕೊಂಡ ನಿರ್ಣಯವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ಬದ್ಧವಾಗಿರತಕ್ಕದ್ದು.



# 16 ಅನುಬಂಧಗಳು



ಖ್ವಾಜ ಬಂದೆ ನವಾಜ್ ದರ್ಗಾ, ಕಲಬುರಗಿ

**16.1 ಅನುಬಂಧಗಳು-ಎ: ಕರ್ನಾಟಕ ಪ್ರವಾಸೋದ್ಯಮ ನೀತಿ, 2020-25ರ ಅಡಿಯಲ್ಲಿ ಪ್ರವಾಸೋದ್ಯಮ ಯೋಜನೆಗಳಿಗೆ ಅನುಮೋದನೆ ನೀಡುವುದಕ್ಕಾಗಿ ಹಾಗೂ ಸಹಾಯಧನಗಳ ಮತ್ತು ಪ್ರೋತ್ಸಾಹಧನಗಳ ಮಂಜೂರಾತಿಗಾಗಿ ವಿಶೇಷ ಸಮಿತಿಗಳ ರಚನೆ -**

1. ಜಿಲ್ಲಾ ಪ್ರವಾಸೋದ್ಯಮ ಸಮಿತಿ

ಜಿಲ್ಲಾ ಪ್ರವಾಸೋದ್ಯಮ ಸಮಿತಿಗೆ, ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ ಹಾಗೂ ಸಮಿತಿಯು ಆಯಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

- ಜಿಲ್ಲಾಧಿಕಾರಿಗಳು, ಅಧ್ಯಕ್ಷರು
- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್
- ಮಹಾನಗರ ಪಾಲಿಕೆ ಅಥವಾ ನಗರ ಸಭೆಯ ಆಯುಕ್ತರು ಅಥವಾ ಮುಖ್ಯಾಧಿಕಾರಿ
- ಜಿಲ್ಲಾ ಪೊಲೀಸ್ ಅಧೀಕ್ಷಕರು
- ಉಪ ಅರಣ್ಯ ಸಂರಕ್ಷಣಾಧಿಕಾರಿ
- ಕಾರ್ಯನಿರ್ವಾಹಕ ಅಭಿಯಂತರರು, ವಿದ್ಯುತ್ ಸರಬರಾಜು ಕಂಪನಿ ನಿಯಮಿತ
- ಪ್ರಮುಖ ಬ್ಯಾಂಕಿನ ಜಿಲ್ಲಾ ಪ್ರಮುಖ ವ್ಯವಸ್ಥಾಪಕರು
- ಜಂಟಿ ಅಥವಾ ಉಪ-ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ
- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ
- ಸಹಾಯಕ ನಿರ್ದೇಶಕರು, ನಗರ ಯೋಜನೆ
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕೆಗಳ ಕೇಂದ್ರ
- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯ ಪ್ರತಿನಿಧಿ
- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರತಿನಿಧಿ
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿ
- ಜಿಲ್ಲಾಧಿಕಾರಿಗಳು ಅಗತ್ಯವೆಂದು ಭಾವಿಸುವ ಜಿಲ್ಲೆಯಿಂದ ಇತರೆ ಆಹ್ವಾನಿತರು
- ಉಪ-ನಿರ್ದೇಶಕರು/ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ (ಸಂಚಾಲಕರು)

2. ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿ

- ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿಗೆ ಕರ್ನಾಟಕ ಸರ್ಕಾರದ ಸನ್ಮಾನ್ಯ ಪ್ರವಾಸೋದ್ಯಮ ಸಚಿವರು, ಅಧ್ಯಕ್ಷರಾಗಿರುತ್ತಾರೆ ಮತ್ತು ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರುತ್ತದೆ:
- ಸನ್ಮಾನ್ಯ ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ (ಅಧ್ಯಕ್ಷರು)
- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ.
- ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.
- ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.







ಗಜಶಾಲೆ, ಹಂಪೆ


- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕಗಳ ಇಲಾಖೆ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ.
- ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ.
- ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.
- ಆಯುಕ್ತರು/ ನಿರ್ದೇಶಕರು, ಆಯುಷ್ ಇಲಾಖೆ
- ಅಧ್ಯಕ್ಷರು, ಕರ್ನಾಟಕ ಪರಿಸರ-ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ
- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ಮೆರಿಟೈಮ್ ಮಂಡಳಿ.
- ವ್ಯವಸ್ಥಾಪಕ ನಿರ್ದೇಶಕರು, ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್
- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ನಿಯಮಿತ.
- ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ (ಸಂಚಾಲಕರು)
- ಆಯಾ ಪ್ರಕರಣದ ಆಧಾರದ ಮೇಲೆ, ಅಗತ್ಯವಾಗುವ ಇತರೆ ಸದಸ್ಯರನ್ನು ವಿಶೇಷ ಆಹ್ವಾನಿತರಾಗಿ ಸೇರಿಸಿಕೊಳ್ಳಬಹುದು.



## ಅನುಬಂಧ–ಬಿ: ಸಕ್ಷಿಪ್ತ ರೂಪ

| Sl. No. | Abbreviation | Expansion |
|---|---|---|
| 1 | ASI | Archaeological Survey of India |
| 2 | AYUSH | Ayurveda, Yoga & Naturopathy, Unani, Siddha and Homoeopathy |
| 3 | B2B | Business-to-Business |
| 4 | CSR | Corporate Social Responsibility |
| 5 | DoT | Department of Tourism, Government of Karnataka |
| 6 | FTD | Focus Tourism Destination |
| 7 | EODB | Ease of Doing Business |
| 8 | EPC | Eligible Project Cost |
| 9 | GOK | Government of Karnataka |
| 10 | GSDP | Gross State Domestic Product |
| 11 | GST | Goods & Services Tax |
| 12 | ICT | Information & Communication Technology |
| 13 | JLR | Jungle Lodges and Resorts Limited |
| 14 | JV | Joint Venture |
| 15 | KEA | Karnataka Exhibition Authority |
| 16 | KITE | Karnataka International Travel Expo |
| 17 | KSTDC | Karnataka State Tourism Development Corporation |
| 18 | KTIL | Karnataka Tourism Infrastructure Limited |
| 19 | KTS | Karnataka Tourism Society |
| 20 | KUM | Karnataka Udyog Mitra |
| 21 | MDA | Marketing Development Assistance |
| 22 | MICE | Meetings, Incentives, Conferences and Exhibitions |
| 23 | MoT | Ministry of Tourism, Government of India |
| 24 | NOC | No Objection Certificate |
| 25 | PMU | Program Management Unit Division, Department of Tourism, Government of Karnataka |
| 26 | PPP | Public Private Partnership |
| 27 | PSU | Public Sector Undertaking |
| 28 | SDEL | Skill Development, Entrepreneurship and Livelihood Department |
| 29 | SDG | United Nations Sustainable Development Goals |
| 30 | ULB | Urban Local Bodies |
| 31 | UNESCO | United Nations Educational, Scientific and Cultural Organization |
| 32 | UNWTO | World Tourism Organization |







ಕರ್ನಾಟಕ

ಒಂದು ರಾಜ್ಯ. ಹಲವು ಜಗತ್ತುಗಳು.

www.karnatakatourism.org


ಪ್ರವಾಸೋದ್ಯಮ ಇಲಾಖೆ

49, 2 ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560001

ದೂ: +91–80–2235 2828